ಸಂಪುಟ: 06 ಸಂಚಿಕೆ: 208 ಪುಟಗಳು: 08 ಮಂಗಳವಾರ 13 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5



ಯಾ ದೇವಿ ಸರ್ವ ಭೂತೇಷು
ಚಂದ್ರಘಂಟಾ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಬಿಸಿಲಿನ ತೀವ್ರತೆ ಬಗ್ಗೆ ಎಚ್ಚರಿಕೆ ವಹಿಸಲು ಹವಾಮಾನ ಇಲಾಖೆ ಮುನ್ಸೂಚನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಮುಂಗಾರು ಮಳೆ ಕ್ಷೀಣಿಸುತ್ತಿದ್ದಂತೆ ಮುಂದಿನ ಕೆಲವು ದಿನಗಳ ಕಾಲ ಬಹುತೇಕ ಭಾಗಗಳಲ್ಲಿ ಬಿಸಿಲು ಮತ್ತು ಒಣಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಮಳೆ ತಗ್ಗಿದ್ದು, ಕರಾವಳಿ ಸೇರಿದಂತೆ ಒಳನಾಡಿನ ಬಹುತೇಕ ಕಡೆಗಳಲ್ಲಿ ಒಣ ವಾತಾವರಣವೇ ಆವರಿಸಿರಲಿದೆ. ಪ್ರಮುಖವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಸಿಲು ಮತ್ತು ಅತಿಯಾದ ಆರ್ದ್ರತೆ ವಾತಾವರಣ ಕಂಡುಬರಲಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲೂ ಹವಾಮಾನವು ಶುಷ್ಕವಾಗಿರಲಿದ್ದು, ಕರಾವಳಿ ಭಾಗದಲ್ಲಿ ಯಾವುದೇ ಗಮನಾರ್ಹ ಮಳೆಯ ಮುನ್ಸೂಚನೆ ಇಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಭಾಗಗಳಲ್ಲಿಯೂ ತಾಪಮಾನ ಹೆಚ್ಚಿರಲಿದೆ. ಈ ಜಿಲ್ಲೆಗಳಲ್ಲಿ ದಿನಪೂರ್ತಿ ಒಣಹವೆಯೇ ಪ್ರಭಾವ ಬೀರಲಿದೆ. ಮತ್ತೊಂದೆಡೆ ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ರಾಮನಗರ, ಚಾಮರಾಜನಗರ, ಹಾಸನ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲೂ ಒಣ ವಾತಾವರಣ ಮುಂದುವರಿಯಲಿದೆ. ಅಕ್ಟೋಬರ್ 13ರವರೆಗೂ ಈ ಜಿಲ್ಲೆಗಳಲ್ಲಿ ಹವಾಮಾನ ಸ್ಥಿರವಾಗಿದ್ದು, ಮಳೆಯಾಗುವ ಸಾಧ್ಯತೆ ವಿರಳವಾಗಿದೆ.

## ಶ್ರೀರಂಗಪಟ್ಟಣ ದಸರಾಗೆ ಧನಂಜಯ, ಲಕ್ಷ್ಮಿ, ರೂಪ ಆನೆಗಳ ಆಯ್ಕೆ

• ಉದಯವಾಹಿನಿ, ಬೆಂಗಳೂರು

ಸಾಂಪ್ರದಾಯಿಕ ಶ್ರೀರಂಗಪಟ್ಟಣ ದಸರಾದ ಮೆರವಣಿಗೆಯಲ್ಲಿ ಭಾಗವಹಿಸಲು ಧನಂಜಯ ಗಂಡು ಆನೆಯಾಗಿ, ಹೆಣ್ಣು ಆನೆಗಳಾಗಿ ಲಕ್ಷ್ಮಿ ಮತ್ತು ರೂಪ ಆನೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ಸಿಸಿಎಫ್ ಡಾ. ಎಸ್ ಎಸ್ ರವಿಶಂಕರ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಮೈಸೂರಿನ ವಸ್ತು ಪ್ರದರ್ಶನ ಆವರಣದಲ್ಲಿ ಅಂತಿಮ ಹಾಗೂ ಮೂರನೇ ಹಂತದ ಸಿಡಿಮದ್ದು ತಾಲೀಮಿನ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ಸಿಸಿಎಫ್ ಡಾ. ರವಿಶಂಕರ್, ಈ ಬಾರಿ ಶ್ರೀರಂಗಪಟ್ಟಣ ದಸರಾಗೆ ಧನಂಜಯ ಹಾಗೂ ಲಕ್ಷ್ಮಿ, ರೂಪಾ ಆನೆಗಳನ್ನು ಆಯ್ಕೆ ಮಾಡಲಾಗಿದೆ. ಮೈಸೂರಿನ ಜಂಬೂಸವಾರಿ ಕ್ಯಾಪ್ಟನ್ ಆನೆಯನ್ನು ಮೂರು ದಿನ ಮುಂಚಿತವಾಗಿ ಆಯ್ಕೆ ಮಾಡಲಾಗುವುದು. ಸದ್ಯ ಸಿಡಿಮದ್ದಿನ ತಾಲೀಮು ಮುಗಿದಿದೆ ಎಂದರು. ಮೂರನೇ ಹಂತದ ಕುಶಾಲತೋಪು ತಾಲೀಮು ಅತ್ಯಂತ ಯಶಸ್ವಿಯಾಗಿ ನಡೆದಿದೆ. ಮೂರನೇ ತಾಲೀಮಿನಲ್ಲಿ ಎಲ್ಲಾ ಆನೆಗಳು ಅತ್ಯುತ್ತಮವಾಗಿ ನಿಭಾಯಿಸಿವೆ. ಮೆರವಣಿಗೆಯ ತಾಲೀಮು ಮತ್ತು ಅರಮನೆ ಒಳಗಡೆ ಅಭ್ಯಾಸ ಇನ್ನೂ ಬಾಕಿ ಇದೆ. ಮಿಕ್ಕಂತೆ ಎಲ್ಲಾ ತರಬೇತಿಗಳನ್ನು ದಸರಾ ಆನೆಗಳು ಯಶಸ್ವಿಯಾಗಿ ಮುಗಿಸಿವೆ. ಈಗ ಅಂಬಾರಿ ಆನೆಯನ್ನು ಆಯ್ಕೆ ಮಾಡುವುದೊಂದೇ ಉಳಿದಿರುವುದು. ಅಂಬಾರಿ ಆನೆಯ ಕುರಿತು ಮಾಹಿತಿ ನೀಡುತ್ತೇವೆ.

## ನಂದಿನಿ ಮಿಲ್ಕ್ ಪೌಡರ್ ಸೇಫ್ ಆಹಾರ ಸುರಕ್ಷತಾ ಇಲಾಖೆ ವರದಿ



• ಉದಯವಾಹಿನಿ, ಬೆಂಗಳೂರು

ನಂದಿನಿ ಮಿಲ್ಕ್ ಪೌಡರ್ ಕಲಬೆರಕೆ ಆಗಿದೆ ಎಂಬ ಆರೋಪದ ಬಳಿಕ ಇದೀಗ ಲ್ಯಾಬ್ ವರದಿ ಹೊರಬಂದಿದ್ದು, ಇದು ಸಂಪೂರ್ಣವಾಗಿ ಸುರಕ್ಷಿತ ಎಂದು ತಿಳಿದುಬಂದಿದೆ. ಈ ಹಿಂದೆ ನಂದಿನಿ ಮಿಲ್ಕ್ ಪೌಡರ್‌ನಲ್ಲಿ ಕಲಬೆರಕೆ ಆಗ್ತಿದೆ ಅನ್ನೋ ಗಂಭೀರ ಆರೋಪ ಇತ್ತು. ಇದರ ಬೆನ್ನಲ್ಲೇ ಮಿಲ್ಕ್ ಪೌಡರ್ ಗುಣಮಟ್ಟ ಟೆಸ್ಟ್ ಮಾಡಿಸಲು ಆರೋಗ್ಯ ಸಚಿವರು ಸೂಚನೆ ನೀಡಿದ್ದರು. ಬಳಿಕ ಸೆಪ್ಟೆಂಬರ್ 26ರಂದು ಕೆಎಂಎಫ್ ಡೈರಿಗಳಿಂದ ಮಿಲ್ಕ್ ಪೌಡರ್ ಸ್ಯಾಂಪಲ್ ಸಂಗ್ರಹ ಮಾಡಿ ಎಫ್‌ಎಸ್‌ಎಸ್‌ಎಐ ಟೆಸ್ಟ್‌ಗೆ ಕಳಿಸಲಾಗಿತ್ತು. ಇದೀಗ ಲ್ಯಾಬ್ ರಿಪೋರ್ಟ್ ಬಂದಿದ್ದು, ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಅಧಿಕೃತ ವರದಿ ಬಂದಿದೆ.

## ಕೇಂದ್ರ ಸಚಿವ ವಿ.ಸೋಮಣ್ಣ ಕಾರು ಮುತ್ತಿಗೆ ಯತ್ನ

• ಉದಯವಾಹಿನಿ, ಬೆಂಗಳೂರು

ಕೇಂದ್ರ ವಿರುದ್ಧ ಮತ್ತು ಸಿಇಸಿ ಜ್ಞಾನೇಂದ್ರ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಶಿವಮೊಗ್ಗದಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ ನಡೆಸಿದೆ. ಬಸ್ ನಿಲ್ದಾಣದ ಬಳಿ ಕೇಂದ್ರ ಸಚಿವ ವಿ.ಸೋಮಣ್ಣ ಕಾರು ತಡೆದು ಮುತ್ತಿಗೆಗೆ ಯತ್ನವನ್ನೂ ನಡೆಸಲಾಗಿದೆ. ಪ್ರತಿಭಟನಾಕಾರರನ್ನು ಪೊಲೀಸರು ಚದುರಿಸಿದ್ದು, ಈ ವೇಳೆ ತಳ್ಳಾಟ ನಡೆದಿದೆ. ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಕೇಂದ್ರದ ವಿರುದ್ಧ ಘೋಷಣೆ ಕೂಗಿ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇನ್ನು ಕಾಂಗ್ರೆಸ್ ಪ್ರತಿಭಟನೆ ವಿಚಾರವಾಗಿ ಪ್ರತಿಕ್ರಿಯಿಸಿರುವ ಸೋಮಣ್ಣ, ರಾಜ್ಯದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಹೋಗಿ ಚುನಾವಣಾ ಆಯೋಗದ ಕಚೇರಿ ಎದುರು ಪ್ರತಿಭಟನೆ ನಡೆಸಿರೋದು ಮುಜುಗರದ ಸಂಗತಿ. ಮತಪಟ್ಟಿಯಿಂದ ಹೆಸರು ತೆಗೆದುಹಾಕುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಕಾಂಗ್ರೆಸ್ ನಾಯಕರು ಮೊಸಳೆ ಕಣ್ಣೀರು ಹಾಕಿ ಸಾವಿರ ಬಾರಿ ಸುಳ್ಳು ಹೇಳಿದರೂ ಸತ್ಯವನ್ನು ಮರೆ ಮಾಚಲು ಸಾಧ್ಯವಿಲ್ಲ.

ರಾಜ್ಯದಲ್ಲಿ ಭೀಕರ ಬರಗಾಲವಿದೆ ಎಂದು ಆರೋಪಿಸಿದ ವಿಜಯೇಂದ್ರ, ರೈತರಿಗೆ 2,500 ಪರಿಹಾರ ಘೋಷಿಸಿದ್ದರೂ ಸರ್ಕಾರ ಹಣ ನೀಡಿಲ್ಲ ಎಂದು ದೂರಿದರು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಮನೆ ಕಳೆದುಕೊಂಡವರಿಗೆ 5 ಲಕ್ಷ ಮತ್ತು ಪಾತ್ರೆಗಳಿಗೆ 10,000 ನೆರವು ನೀಡಲಾಗಿತ್ತು ಎಂದು ಹೋಲಿಕೆ ಮಾಡಿದರು. ಪರಿಹಾರ ನೀಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸರ್ಕಾರ ಸ್ಟಿಂಗ್ ವಿವಾದವನ್ನು ಮುನ್ನೆಲೆಗೆ ತರುತ್ತಿದೆ ಎಂದು ಅವರು ಆರೋಪಿಸಿದರು. ರಾಜ್ಯದ ಹಣಕಾಸು ದಿವಾಳಿಯ ಅಂಚಿಗೆ ತಲುಪಿದೆ ಎಂದು ಹೇಳಿಕೊಂಡ ಅವರು, ಕೇಂದ್ರದ ಮೇಲೆ ಆರೋಪ ಹೊರಿಸುವ ಬದಲು ಸರ್ಕಾರ ಪರಿಸ್ಥಿತಿಯನ್ನು ಒಪ್ಪಿಕೊಳ್ಳಬೇಕು ಎಂದು ಒತ್ತಾಯಿಸಿದರು. ತೈಲ ಕಂಪನಿಗಳಿಗೆ ಬಾಕಿ ಪಾವತಿಸದ ಕಾರಣ ಸಾರಿಗೆ ಬಸ್‌ಗಳು ಡಿಪೊಗಳಲ್ಲೇ ನಿಂತಿವೆ ಎಂದೂ ವಿಜಯೇಂದ್ರ ಆರೋಪಿಸಿದರು. ಹಣಕಾಸಿನ ತೊಂದರೆ ನಡುವೆಯೂ ತಾಲ್ಲೂಕುಗಳಲ್ಲಿ ರಿಂಗ್ ರಸ್ತೆ ನಿರ್ಮಿಸಲು ಮುಂದಾಗಿರುವ ಸರ್ಕಾರ, ಅದರ ಮೂಲಕ ರಿಯಲ್ ಎಸ್ಟೇಟ್ ಹಿತಾಸಕ್ತಿಗಳನ್ನು ಸಾಧಿಸಲು ನೋಡುತ್ತಿದೆ ಎಂದು ಟೀಕಿಸಿದರು. ರಾಜಕೀಯ ಚದುರಂಗದಾಟ ವಿಜಯೇಂದ್ರ ಅವರ ಹೇಳಿಕೆಗಳು ಹಲವು ಆಯಾಮಗಳನ್ನು ಹೊಂದಿವೆ. ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದೆ ಎಂದರು.

# ಬಿವೈವಿ ಹೊಸ ಬಾಂಬ್

### ಸಚಿವರಿಗೆ ಬಿಜೆಪಿ ಗಾಳ ಹಾಕುವ ಅಗತ್ಯ ನಮಗಿಲ್ಲ

### ಚುನಾವಣೆ ಘೋಷಣೆ ಆದರೆ ಸಚಿವರು ಸೇರಿ ಕಾಂಗ್ರೆಸ್‌ನ 20-25 ಜನ ಬಿಜೆಪಿ ಸೇರುತ್ತಾರೆ



• ಉದಯವಾಹಿನಿ, ಬೆಂಗಳೂರು

ಸಚಿವರು ಸೇರಿ ಕಾಂಗ್ರೆಸ್‌ನ 20-25 ಜನ ಬಿಜೆಪಿ ಸೇರುವ ವಾತಾವರಣ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಮಲ್ಲೇಶ್ವರಂ ಬಿಜೆಪಿ ಕಚೇರಿಯಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಚಿವರಿಗೆ ಬಿಜೆಪಿ ಗಾಳ ಹಾಕುವ ಅಗತ್ಯ ನಮಗಿಲ್ಲ. ಆದ್ರೆ ಒಂದಂತೂ ಸತ್ಯ. ಚುನಾವಣೆ ಘೋಷಣೆ ಆದರೂ ಡಿಕೆಶಿ ಸಂಪುಟದ ಸಚಿವರೂ ಸೇರಿ 20-25 ಜನ ಶಾಸಕರು ಬಿಜೆಪಿ ಸೇರುವ ವಾತಾವರಣ ಸೃಷ್ಟಿಯಾಗಿದೆ. ಕಾಂಗ್ರೆಸ್‌ನವರು ಒಂದು ಸುಳ್ಳನ್ನು ನೂರು ಬಾರಿ ಹೇಳಿ ಸತ್ಯ ಮಾಡಲು ಹೊರಟಿದ್ದಾರೆ. ರಾಜ್ಯ ಸರ್ಕಾರ ಅಭಿವೃದ್ಧಿ ಮರೆತಿದೆ. ಒಡೆದು ಆಳುವ ನೀತಿ ಅನುಸರಿಸುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದ ಮೇಲೆ ಕಾಳಜಿ ಇಲ್ಲ ಎಂದರು.

ಚುನಾವಣೆ ಘೋಷಣೆ ಆದರೆ 25 ಜನ ಕಾಂಗ್ರೆಸ್ ಶಾಸಕರು ಬಿಜೆಪಿ ಸೇರುತ್ತಾರೆ. ಅದು ಸಚಿವರನ್ನೂ ಒಳಗೊಂಡು ಸೇರುತ್ತಾರೆ. ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ನಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆ. ಆಡಳಿತ ಪಕ್ಷದಲ್ಲೇ ಸಿಎಂ ಮೇಲೆ ವಿಶ್ವಾಸ ಹೋಗಿದೆ. ಇವತ್ತಿಗೂ ಚುನಾವಣೆ ನಡೆದರೆ ಕಾಂಗ್ರೆಸ್ ಗೆಲ್ಲಲ್ಲ. ನಮ್ಮ ಹೋರಾಟ ಮುಂದುವರೆಯಲಿದೆ. ಬಿಜೆಪಿ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಆಗಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಸ್ಟಿಂಗ್ ಮಾಡೋದು ಒಂದು ರೀತಿ ವ್ಯಭಿಚಾರ ಇದ್ದ ಹಾಗೆ:** ಸ್ಟಿಂಗ್ ಮಾಡೋದು ಒಂದು ರೀತಿ ವ್ಯಭಿಚಾರ ಇದ್ದ ಹಾಗೆ. ಯಾರು ಮಾಡಿದ್ದಾರೆ, ಯಾರು 420 ಕೆಲಸ ಮಾಡಿದ್ದಾರೆ ಮುಂದೆ ಬಯಲಾಗುತ್ತದೆ. ರಾಜ್ಯದ ರಾಜಕಾರಣ ಹಿಂದೆಂದೂ ಈ ಮಟ್ಟಕ್ಕೆ ಹೋಗಿರಲಿಲ್ಲ.

ಸ್ಟಿಂಗ್ ಆಪರೇಷನ್ ಚರ್ಚೆ ನಡೀತಿದೆ. ಇದು ರಾಜ್ಯಕ್ಕೆ ಒಳ್ಳೇದಲ್ಲ. ಯಾರು ಯಾರಿಗೆ ಸ್ಟಿಂಗ್ ಮಾಡಿದ್ದಾರೆ, ಕೆಲವರು ಸಿಎಂ ಆಗೋದಕ್ಕೆ ಸ್ಟಿಂಗ್ ಮಾಡಿದ್ದಾರೆ ಅನ್ನೋ ಚರ್ಚೆ ನಡೆದಿದೆ ಎಂದು ವಾಗ್ದಾಳಿ ನಡೆಸಿದರು. ಸ್ಟಿಂಗ್ ಆಪರೇಷನ್ ನಂತಹ ಬೆಳವಣಿಗೆ ಕರ್ನಾಟಕದ ರಾಜಕೀಯದ ದೃಷ್ಟಿಯಿಂದ ಒಳ್ಳೆಯದಲ್ಲ. ಯಾರು ಯಾರ ವಿರುದ್ಧ ಸ್ಟಿಂಗ್ ಮಾಡಿದ್ದಾರೆ ಎಲ್ಲವೂ ಚರ್ಚೆ ಆಗುತ್ತಿದೆ. ಮುಂದೆ ಎಲ್ಲವೂ ಬಹಿರಂಗವಾಗಲಿದೆ. 420 ಕೆಲಸ ಮಾಡಿದವರು ಅನುಭವಿಸುತ್ತಾರೆ. ಕರ್ನಾಟಕದ ರಾಜಕಾರಣ ಈ ಮಟ್ಟಕ್ಕೆ ಹೋಗಬಾರದಿತ್ತು, ದುರಾದೃಷ್ಟವಶಾತ್ ಹೋಗಿದೆ ಎಂದು ಕಿಡಿಕಾರಿದರು.

ಎಲ್ಲವೂ ಕೂಡ ಬಹಿರಂಗ ಆಗಲಿ. ದಿನನಿತ್ಯ ನಾನು ಇದರ ಬಗ್ಗೆಯೇ ಮಾತಾಡೋದಕ್ಕೆ ಆಗಲ್ಲ. ಈಗಾಗಲೇ ಭೀಕರ ಬರಗಾಲ ಇದೆ. ಎರಡೂವರೆ ಸಾವಿರ ರೂಪಾಯಿ ಘೋಷಣೆ ಭಿಕ್ಷುಕರಿಗೆ ಕೊಟ್ಟಂಗೆ ಕೊಟ್ಟಿದ್ದಾರೆ. ಅದನ್ನು ಕೂಡ ಇನ್ನು ಕೊಟ್ಟಿಲ್ಲ. ಬರಗಾಲದಲ್ಲಿ ಪರಿಹಾರ ಕೊಡಲು ಆಗ್ದೇ ಸ್ಟಿಂಗ್ ಆಪರೇಷನ್ ಎಂದು ಪ್ರಸ್ತಾಪ ಮಾಡಿ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಲಸ ಮಾಡ್ತಿದೆ ಎಂದು ಹರಿಹಾಯ್ದರು. ನವದೆಹಲಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ ವಿಚಾರವಾಗಿ ಮಾತನಾಡಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಿಜೆಐ ಭೇಟಿ ಮಾಡುವ ನಾಟಕ ಮಾಡಿದ್ದಾರೆ.

ಭೇಟಿಗೆ ಅವಕಾಶ ಕೊಡುತ್ತಿಲ್ಲ ಎಂದು ರಾದ್ಧಾಂತ ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರ ನಡವಳಿಕೆ ನೋಡಿದರೆ ಅವರು ಹತಾಶರಾಗಿದ್ದಾರೆ. ಅವರ ಪಿತೂರಿಗಳನ್ನು ದೇಶದ ಜನ ಒಪ್ಪಲ್ಲ. ಕಾಂಗ್ರೆಸ್ ಪಕ್ಷಕ್ಕೆ ಮಾನ, ಮರ್ಯಾದೆ, ತಾಕತ್ ಇದ್ದರೆ ಜನರ ಮನಸ್ಸು ಗೆದ್ದು ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಿ. ಕಳೆದ ಬಾರಿ ಏನೋ ಜನ ಯಾಮಾರಿ ಯುಪಿಎಗೆ 45 ಸೀಟ್ ಕೊಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

### ರಾಜಕೀಯ ಚದುರಂಗದಾಟ

ವಿಜಯೇಂದ್ರ ಅವರ ಹೇಳಿಕೆಗಳು ಹಲವು ಆಯಾಮಗಳನ್ನು ಹೊಂದಿವೆ. ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದೆ ಎಂದು ಹೇಳುತ್ತಿದ್ದರೂ, ಬಿಜೆಪಿ ನಾಯಕರು ಪದೇ ಪದೇ ಶಾಸಕರ ಪಕ್ಷಾಂತರದ ವಿಚಾರವನ್ನು ಪ್ರಸ್ತಾಪಿಸುತ್ತಿರುವುದು ಆಡ್ಡ ಪಕ್ಷಕ್ಕೆ ನುಂಗಲಾರದ ತುತ್ತಾಗಿದೆ.

ಸ್ಟಿಂಗ್ ಆಪರೇಷನ್ ವಿಚಾರವು ಕೇವಲ ವ್ಯಕ್ತಿಗಳಲ್ಲ, ಇಡೀ ಸರ್ಕಾರವನ್ನೇ ಅಸ್ಥಿರಗೊಳಿಸುವಷ್ಟು ಸಾಮರ್ಥ್ಯ ಹೊಂದಿದೆ ಎಂದು ಬಿಜೆಪಿ ಭಾವಿಸಿದೆ. ಬರಗಾಲದ ಸಂದರ್ಭದಲ್ಲಿ ಪರಿಹಾರ ಕಾರ್ಯಗಳಲ್ಲಿನ ವಿಳಂಬವನ್ನು ಎತ್ತಿ ತೋರಿಸುವ ಮೂಲಕ, ಬಿಜೆಪಿ ತನ್ನನ್ನು ತಾನು ಜನರ ಪರವಾಗಿರುವ ಪಕ್ಷವಾಗಿ ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ವಿಜಯೇಂದ್ರ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಒಂದು ವೇಳೆ ಸಚಿವರು ಮತ್ತು ಶಾಸಕರು ನಿಜಕ್ಕೂ ಬಿಜೆಪಿ ಸೇರುವ ಹಂತದಲ್ಲಿದ್ದರೆ, ಅದು ರಾಜ್ಯ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸುತ್ತದೆ. ಅಲ್ಲದೆ, ಸ್ಟಿಂಗ್ ಆಪರೇಷನ್ ಕುರಿತಾದ ತನಿಖೆ ಮತ್ತು ಅದರಿಂದ ಬಹಿರಂಗವಾಗುವ ಸತ್ಯಗಳು ಯಾವೆಲ್ಲಾ ನಾಯಕರ ವೃತ್ತಿಜೀವನಕ್ಕೆ ಕುತ್ತು ತರುತ್ತವೆ ಎಂಬುದು ಕಾದು ನೋಡಬೇಕಿದೆ.

### ಸ್ಟಿಂಗ್ ಚರ್ಚೆ

ಕಾಂಗ್ರೆಸ್‌ನಲ್ಲಿ ಕೆಲವರು ಅಧಿಕಾರ ಕಸಿದುಕೊಳ್ಳಲು ಸ್ಟಿಂಗ್ ಮಾಡಿದ್ದಾರೆ ಅಂತ ಚರ್ಚೆ ನಡೆಯುತ್ತಿದೆ. ಕೆಲವರು ಸಚಿವರಾಗಲು, ಕೆಲವರು ಸಿಎಂ ಆಗಲು ಸ್ಟಿಂಗ್ ಮಾಡಿದ್ದಾರೆ ಅನ್ನೋ ಚರ್ಚೆ ನಡೆದಿದೆ. ಸ್ಟಿಂಗ್ ಮಾಡೋದು ರಾಜಕೀಯ ವ್ಯಭಿಚಾರ ಎಂದು ವಾಗ್ದಾಳಿ ನಡೆಸಿದ್ದಾರೆ. ಸ್ಟಿಂಗ್ ಯಾರು ಮಾಡ್ತಿರೊರು ಅನ್ನೋದು ಗೊತ್ತಾಗಬೇಕಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಪ್ರತಿನಿತ್ಯ ಒಬ್ಬೊಬ್ಬರು, ಮಾಜಿ ಮುಖ್ಯಮಂತ್ರಿಗಳು, ಆಡಳಿತ ಪಕ್ಷದ ಕ್ಯಾಬಿನೆಟ್ ಸಚಿವರುಗಳು, ಶಾಸಕರುಗಳು ಎಲ್ಲರೂ ಕೂಡ ಮಾತಾಡ್ತಾ ಇದ್ದಾರೆ.

### ಮುಖ್ಯ ನ್ಯಾಯಮೂರ್ತಿಗಳ ಭೇಟಿಗೆ ಆಕ್ಷೇಪ

ಎಸ್‌ಐಆರ್ ವಿಚಾರವಾಗಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಭೇಟಿಯಾಗಲು ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಮಾಡಿರುವ ಮನವಿಯನ್ನು ವಿಜಯೇಂದ್ರ ಟೀಕಿಸಿದರು. ವಿಷಯ ಈಗಾಗಲೇ ಸುಪ್ರೀಂನಲ್ಲಿ ವಿಚಾರಣೆಯಲ್ಲಿರುವಾಗ ಮುಖ್ಯ ನ್ಯಾಯಮೂರ್ತಿಗಳ ಭೇಟಿಗೆ ಮನವಿ ಮಾಡುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟರು. ಕಾಂಗ್ರೆಸ್ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು. ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲಿ ಯುವಕರಿಂದ ಉಂಟಾದ ಅರಾಜಕತೆಯಂತಹ ಪರಿಸ್ಥಿತಿ ಕರ್ನಾಟಕದಲ್ಲೂ ಉಂಟಾಗಲಿದೆ ಎಂದು ಕಾಂಗ್ರೆಸ್ ನಾಯಕರು ಮಾತನಾಡಿದ್ದಾರೆ ಎಂದೂ ಹೇಳಿಕೊಂಡರು. ಕಾಂಗ್ರೆಸ್ ಮತದಾರರ ವಿಶ್ವಾಸ ಗಳಿಸಿ ಜನಬೆಂಬಲದ ಮೂಲಕ ಅಧಿಕಾರಕ್ಕೆ ಬರಲಿ ಎಂದು ಸವಾಲು ಹಾಕಿದ ವಿಜಯೇಂದ್ರ, ಸುಳ್ಳು ಆರೋಪಗಳನ್ನು ಪದೇಪದೇ ಮಾಡುತ್ತಾ ಗೊಂದಲ ಸೃಷ್ಟಿಸುವುದರಿಂದ ಪಕ್ಷಕ್ಕೆ ಪ್ರಯೋಜನವಾಗುವುದಿಲ್ಲ ಎಂದರು.

## ಡಿಕೆಶಿ ಸಮ್ಮುಖದಲ್ಲೇ ಸಿದ್ದರಾಮಯ್ಯರನ್ನು ಹಾಡಿಹೊಗಳಿದ ಜೆಡಿಎಸ್ ಶಾಸಕ

• ಉದಯವಾಹಿನಿ, ಬೆಂಗಳೂರು

ರಾಜಕಾರಣ ಎಂದರೆ ಅಲ್ಲಿ ತಂತ್ರಗಾರಿಕೆ, ಲೆಕ್ಕಾಚಾರಗಳು ಸಹಜ. ಅದರಲ್ಲೂ ಒಂದು ಪಕ್ಷದವರು ಮತ್ತೊಂದು ಪಕ್ಷದ ನಾಯಕರನ್ನು ಬಹಿರಂಗವಾಗಿಯೇ ಹೊಗಳುವುದರ ಹಿಂದೆ ತಮ್ಮದೇ ಆದ ಲೆಕ್ಕಾಚಾರಗಳು ಇರುತ್ತವೆ. ಜೆಡಿಎಸ್ ಅಸಮಾಧಾನಿತ ಶಾಸಕ ಜಿಟಿ ದೇವೇಗೌಡ ಅವರ ನಡೆಯೂ ಇದೀಗ ಇದೇ ರೀತಿಯಲ್ಲಿ ರಾಜಕೀಯ ಪಡಸಾಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ. ಮೈಸೂರಿನಲ್ಲಿ ನಾಡ ಹಬ್ಬ ದಸರಾವನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಜೆಡಿಎಸ್ ಶಾಸಕ ಜಿಟಿ ದೇವೇಗೌಡರ ಅವರು ಸಿಎಂ ಡಿಕೆ ಶಿವಕುಮಾರ್ ಅವರ ಸಮ್ಮುಖದಲ್ಲೇ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಹಾಡಿ ಹೊಗಳಿದ್ದಾರೆ. ಮೈಸೂರಿನ ಮಗ ಎಂದು ಕರೆಯುವ ಮೂಲಕ ಸಿದ್ದರಾಮಯ್ಯ ಅವರ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದ್ದಾರೆ. ನಮ್ಮ ರಾಜ್ಯದ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಮೈಸೂರಿನ ಮಗ. 8 ವರ್ಷಗಳ ಕಾಲ ಸಿಎಂ ಆಗಿದ್ದ ಸಿದ್ದರಾಮಯ್ಯ ಮೈಸೂರಿನ ಮಗನಾಗಿದ್ದಾರೆ. ಸಿದ್ದರಾಮಯ್ಯ ಅವರು ಸಿಎಂ ಆಗಿ ಮಾಡಿದ ಅಪಾರ ಜನ ಪರ ಕಾರ್ಯಕ್ರಮವನ್ನು





ಸಿಎಂ ಡಿಕೆ ಶಿವಕುಮಾರ್ ಮುಂದುವರಿಸಿದ್ದಾರೆ. ಇದು ಖುಷಿಯ ವಿಚಾರ ಎಂದೂ ಅವರು ಹೇಳಿಕೊಂಡಿದ್ದಾರೆ. ರಾಜಕಾರಣದಲ್ಲಿ ಯಾರೂ ಶತ್ರುನೂ ಅಲ್ಲ ಮಿತ್ರನೂ ಅಲ್ಲ ಎಂಬ ಮಾತಿದೆ. ಜಿಟಿ ದೇವೇಗೌಡ ಅವರು ಜೆಡಿಎಸ್ ನೊಂದಿಗೆ ಅಂತರ ಕಾಯ್ದುಕೊಂಡಿದ್ದಾರೆ. ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರ ಜೊತೆಗೆ ಬೇಸರಗೊಂಡಿದ್ದಾರೆ. ಹಾಗಾಗಿ ಪಕ್ಷದ ಯಾವುದೇ ಚಟುವಟಿಕೆಗಳಲ್ಲಿ ಅವರು ಭಾಗಿಯಾಗುತ್ತಿಲ್ಲ. ಆದರೆ, ಅವರ ಪುತ್ರ ಜೆಡಿಎಸ್‌ನಲ್ಲಿ ಸಕ್ರಿಯವಾಗಿದ್ದಾರೆ. ಹೀಗಾಗಿ ಕುಟುಂಬದಲ್ಲೇ ಒಂದು ರೀತಿಯಲ್ಲಿ ಗೊಂದಲ ಇದೆ. ಜೆಡಿಎಸ್ ಬಗ್ಗೆ ಅವರು ತಮ್ಮ ಅಸಮಾಧಾನವನ್ನು ಬಹಿರಂಗವಾಗಿಯೇ ಹೊರ ಹಾಕಿದ್ದಾರೆ. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಜೊತೆಗೆ ಉತ್ತಮ ಸಂಪರ್ಕ ಬೆಳೆಸುವ ಪ್ರಯತ್ನ ನಡೆಸುತ್ತಿದ್ದಾರೆ. ಕಳೆದ ದಸರಾ ಉದ್ಘಾಟನೆಯ ಸಂದರ್ಭದಲ್ಲೂ ಅವರು ಸಿದ್ದರಾಮಯ್ಯ ಅವರ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದ್ದರು. ಸಿದ್ದರಾಮಯ್ಯ ಅವರ ಸರ್ಕಾರವನ್ನು ಎಚ್‌ಡಿ ಕುಮಾರಸ್ವಾಮಿ ಅವರು ಟೀಕೆ ಮಾಡುತ್ತಿದ್ದ ಸಂದರ್ಭದಲ್ಲಿ ಜಿಟಿಡಿ ಮಾತು ಜೆಡಿಎಸ್‌ಗೆ ಮುಜುಗರ ಉಂಟು ಮಾಡಿತ್ತು. ಇದೀಗ ಮತ್ತೊಂದು ಬಾರಿ ಸಿದ್ದರಾಮಯ್ಯ ಅವರ ಬಗ್ಗೆ ಜಿಟಿ ದೇವೇಗೌಡ ಅವರು ಮೆಚ್ಚುಗೆಯ ಮಾತನ್ನಾಡಿದ್ದಾರೆ. ಇದರ ಹಿಂದೆ 2028ರ ಚುನಾವಣಾ ಲೆಕ್ಕಾಚಾರಗಳು ಇವೆ ಎಂಬ ಅಭಿಪ್ರಾಯವೂ ಇದೆ. ಸದ್ಯದ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ದೇವೇಗೌಡ ಅವರು ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವುದು ಅನುಮಾನ. ಹಾಗಿದ್ದಲ್ಲಿ ಅವರ ಮುಂದಿನ ರಾಜಕೀಯ ನಡೆ ಏನು ಎಂಬುವುದು ಕುತೂಹಲ ಕೆರಳಿಸಿದೆ.

## ಅ.14ರಿಂದ ರಾಜ್ಯದಲ್ಲಿ ಮತ್ತೊಂದು ಸುತ್ತಿನ ಮಳೆ

• ಉದಯವಾಹಿನಿ, ಬೆಂಗಳೂರು

ವಾತಾವರಣದಲ್ಲಿ ಉಂಟಾಗಿರುವ ಬದಲಾವಣೆಯ ಪರಿಣಾಮ ಅ.14ರಿಂದ ರಾಜ್ಯದಲ್ಲಿ ಮತ್ತೊಂದು ಸುತ್ತಿನ ಮಳೆಯಾಗುವ ಮುನ್ಸೂಚನೆಗಳಿವೆ. ಅ.14ರಿಂದ 18ರವರೆಗೆ ರಾಜ್ಯದಲ್ಲಿ ಸಾಧಾರಣ ಪ್ರಮಾಣದ ಮಳೆಯಾಗುವ ಸಾಧ್ಯತೆಗಳು ಕಂಡುಬರುತ್ತಿವೆ. ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗುತ್ತಿದ್ದು, ಅದರ ಪರಿಣಾಮ ರಾಜ್ಯದಲ್ಲೂ ಮಳೆಯಾಗುವ ನಿರೀಕ್ಷೆಗಳಿವೆ. ಅಕ್ಟೋಬರ್ ತಿಂಗಳ ಮೊದಲರೆಡು ವಾರದಲ್ಲೂ ಉತ್ತಮ ಮಳೆಯಾಗಿಲ್ಲ. ಬಹುತೇಕ ಕಡೆಗಳಲ್ಲಿ ಮಳೆ ಕೊರತೆ ಮುಂದುವರೆದಿದ್ದು, ಬರದ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ. ಮುಂಗಾರು ಹಂಗಾಮಿನ ವಿವಿಧ ಬೆಳೆಗಳಿಗೆ ತೇವಾಂಶದ ಕೊರತೆ ಉಂಟಾಗಿದ್ದು, ರೈತರು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಅ.14ರಂದು ಕೋಲಾರ, ಬೆಂಗಳೂರು ದಕ್ಷಿಣ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಅ.15ರಂದು ಕರಾವಳಿ ಹಾಗೂ ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳನ್ನು ಹೊರತುಪಡಿಸಿ ದಕ್ಷಿಣ ಒಳನಾಡು ಹಾಗೂ ಉತ್ತರ ಕರ್ನಾಟಕದ ಒಳನಾಡು ಜಿಲ್ಲೆಗಳಲ್ಲಿ ಗುಡುಗು ಮಿಂಚಿನಿಂದ ಕೂಡಿದ ಮಳೆಯಾಗುವ ಮುನ್ಸೂಚನೆಗಳಿವೆ.

ಬೆಂಗಳೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿರಲಿದೆ. ಅ.16ರಂದು ರಾಜ್ಯಾದ್ಯಂತ ಮಳೆ ವ್ಯಾಪಿಸಲಿದ್ದು, ಭಾಗಶಃ ವ್ಯಾಪಕ ಮಳೆಯಾಗುವ ಸಾಧ್ಯತೆಗಳಿವೆ. ಈ ತಿಂಗಳ 18ರವರೆಗೂ ಮಳೆ ಮುಂದುವರೆಯುವ ನಿರೀಕ್ಷೆಗಳಿವೆ.

ನಿರೀಕ್ಷೆಯಂತೆ ಮತ್ತೊಂದು ಸುತ್ತಿನ ಮಳೆಯಾದರೆ ಮುಂಗಾರು ಹಂಗಾಮಿನ ಬೆಳೆಗಳಿಗೆ ಅನುಕೂಲವಾಗಲಿದೆ. ಒಂದು ವೇಳೆ ಇನ್ನೊಂದು ವಾರದಲ್ಲಿ ಮಳೆ ಬಾರದಿದ್ದರೆ ಉಳಿದಿರುವ ಅಲ್ಪಸ್ವಲ್ಪ ಬೆಳೆಯೂ ರೈತರ ಕೈ ತಪ್ಪುವುದು ನಿಚ್ಚಳವಾಗಿದೆ.

## ರಂಗೇರಿದ ಪರಿಷತ್ ಚುನಾವಣೆ

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್‌ನ ದ್ವೈವಾರ್ಷಿಕ ಚುನಾವಣೆಯಲ್ಲಿ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳಿಂದ ಒಟ್ಟು 43 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಇದ್ದಾರೆ. ಅ.23 ರಂದು ಮತದಾನ ನಡೆಯಲಿರುವ 2 ಪದವೀಧರ, 2 ಶಿಕ್ಷಕರ ಕ್ಷೇತ್ರದ ಚುನಾವಣೆ ಕಾವು ದಿನದಿಂದ ದಿನಕ್ಕೆ ಏರತೊಡಗಿದೆ.

ಬೆಂಗಳೂರು ಶಿಕ್ಷಕ ಕ್ಷೇತ್ರದಲ್ಲಿ ಆಡಳಿತಾರೂಢ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ, ಜೆಡಿಎಸ್ ಅಭ್ಯರ್ಥಿ ಎ.ಪಿ.ರಂಗನಾಥ ಸೇರಿದಂತೆ ಆರು ಮಂದಿ ಚುನಾವಣಾ ಸ್ಪರ್ಧೆಯಲ್ಲಿದ್ದಾರೆ. ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮೋಹನ್ ಲಿಂಬಿಕಾಯಿ, ಬಿಜೆಪಿಯ ಎಸ್.ವಿ.ಸಂಕನೂರ ಸೇರಿದಂತೆ 14 ಮಂದಿ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶಶಿ, ಹುಲಿಕುಂಟೇಮಠ್, ಬಿಜೆಪಿ ಅಭ್ಯರ್ಥಿ ಕೆ.ಎಂ.ಸುರೇಶ ಸೇರಿದಂತೆ 10 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು, ಬಿಜೆಪಿ ಅಭ್ಯರ್ಥಿ ಶಶಿಲ್ ಜಿ ನಮೋಶಿ ಸೇರಿದಂತೆ ಒಟ್ಟು 13 ಅಭ್ಯರ್ಥಿಗಳು ಮೇಲನೆ ಚುನಾವಣೆ ಸ್ಪರ್ಧೆಯಲ್ಲಿದ್ದಾರೆ. ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಈ ಚುನಾವಣೆ ಪ್ರತಿಷ್ಠೆಯಾಗಿದ್ದು, ಶಿಕ್ಷಕರ ಮತ್ತು ಪದವೀಧರ ಮತದಾರರ ಮನ ಗೆಲ್ಲಲು ಮೂರೂ ಪಕ್ಷಗಳು ಹರಸಾಹಸ ಮಾಡುತ್ತಿದ್ದು, ನಿರಂತರ ಚುನಾವಣಾ ಪ್ರಚಾರದಲ್ಲಿ ತೊಡಗಿವೆ. ಪ್ರತಿನಿತ್ಯ ಒಂದಲ್ಲಾ ಒಂದು ಸಭೆ, ಮತದಾರರ ಮನವೊಲಿಸುವ ಪ್ರಯತ್ನವನ್ನು ರಾಜಕೀಯ ಪಕ್ಷಗಳ ನಾಯಕರು, ಮುಖಂಡರು, ಕಾರ್ಯಕರ್ತರು ಮಾಡುತ್ತಿದ್ದಾರೆ.

## ಉದ್ಯೋಗಖಾತ್ರಿ ಹಣ ಪಾವತಿ ವಿಳಂಬ

### ಕಾರಣ ಕೇಳಿ ನೋಟಿಸ್ ನೀಡುವಂತೆ ಸಚಿವ ಖಂಡ್ರೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ -ವಿಬಿಜಿ ರಾಮ್ ಜಿಯಡಿ ಕಾರ್ಮಿಕರಿಗೆ ಕೂಲಿ ಹಣ ಪಾವತಿಸುವಲ್ಲಿ ವಿಳಂಬ, ನಿರ್ಲಕ್ಷ್ಯ ತೋರಿದ 308 ಪಿಡಿಓ, 12 ಉಪ ಕಾರ್ಯದರ್ಶಿ ಮತ್ತು 74 ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ಇಲಾಖೆಯ ಕಾರ್ಯದರ್ಶಿ ಮತ್ತು 12 ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಈ ಸಂಬಂಧ ಲಿಖಿತ ಸೂಚನೆ ನೀಡಿರುವ ಸಚಿವರು, ವಿಬಿಜಿ ರಾಮ್ ಜಿ ಅಡಿ ಕೆಲಸ ಮಾಡುವ ಫಲಾನುಭವಿಗಳಿಗೆ 15 ದಿನಗಳ ಒಳಗಾಗಿ ಕೂಲಿ ಹಣ ಪಾವತಿ ಮಾಡದಿದ್ದರೆ ಸಂಬಂಧಿತ ಪಿಡಿಓಗಳನ್ನೇ ಹೊಣೆ ಮಾಡಲಾಗುವುದು ಎಂಬ ಸ್ಪಷ್ಟ ಸೂಚನೆ ನೀಡಿದ್ದರೂ 12 ಜಿಲ್ಲೆಗಳ 311 ಗ್ರಾಮ ಪಂಚಾಯತಿಗಳಲ್ಲಿ ವಿಳಂಬ ಆಗಿರುವ ಬಗ್ಗೆ



ಸಚಿವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯತಿಗಳಿಗೆ ವಿಬಿಜಿ ರಾಮ್ ಜಿ ಕೂಲಿ ಹಣ ಬಿಡುಗಡೆ ಆಗಿದ್ದರೂ ಕೆಲಸ ಮಾಡಿದ ಅಕುಶಲ ಕಾರ್ಮಿಕರಿಗೆ ಕೂಲಿ ಹಣ ಪಾವತಿಸದಿರುವುದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವ ಸಚಿವರು, ಅಧಿಕಾರಿಗಳ ಇಂತಹ ನಿರ್ಲಕ್ಷ್ಯದಿಂದಾಗಿ, ಬರ ಪರಿಸ್ಥಿತಿಯಲ್ಲೂ ಜನ ವಿಬಿಜಿ ರಾಮ್ ಜಿ ಕೆಲಸಕ್ಕೆ ಬರಲು ಹಿಂದೇಟು ಹಾಕಿ, ಗುಳೆ ಹೋಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ 23, ಬೆಳಗಾವಿಯಲ್ಲಿ 52, ಚಾಮರಾಜನಗರದಲ್ಲಿ 13, ಚಿಕ್ಕಮಗಳೂರು ಜಿಲ್ಲೆಯಲ್ಲಿ 14, ದಕ್ಷಿಣ ಕನ್ನಡದಲ್ಲಿ 15, ಹಾಸನ ಜಿಲ್ಲೆಯಲ್ಲಿ 47, ಕೊಡಗು ಜಿಲ್ಲೆ 25, ಮಂಡ್ಯ ಜಿಲ್ಲೆ 13, ಮೈಸೂರು ಜಿಲ್ಲೆಯಲ್ಲಿ 53, ಶಿವಮೊಗ್ಗ ಜಿಲ್ಲೆ 14, ಉಡುಪಿ ಜಿಲ್ಲೆಯಲ್ಲಿ 23, ವಿಜಯಪುರ ಜಿಲ್ಲೆಯಲ್ಲಿ 16 ಸೇರಿ ಒಟ್ಟು 311 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೆಲಸ ಮಾಡಿದ ಅಕುಶಲ ಕಾರ್ಮಿಕರಿಗೆ ಕೂಲಿ ಹಣ ಪಾವತಿ ಮಾಡುವಲ್ಲಿ ವಿಳಂಬ ಆಗಿರುವ ಹಿನ್ನೆಲೆಯಲ್ಲಿ ಈ ಎಲ್ಲಾ ಗ್ರಾ.ಪಂ.ಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಮೇಲ್ವಿಚಾರಣೆ ಮಾಡಬೇಕಾದ ಜವಾಬ್ದಾರಿ ಹೊತ್ತ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳು ಹಾಗೂ 12 ಜಿಲ್ಲಾ ಪಂಚಾಯತಿಗಳ ಉಪ ಕಾರ್ಯದರ್ಶಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಿ, ಸಮಜಾಯಿಷಿ ಪಡೆಯುವಂತೆ ಸೂಚಿಸಿದ್ದಾರೆ.

**ಕೇಂದ್ರ ಸರ್ಕಾರ ಮನ್ರೇಗಾದಲ್ಲಿದ್ದ 90:10ರ ಅನುಪಾತವನ್ನು ವಿಬಿಜಿ ರಾಮ್ ಜಿಯಲ್ಲಿ 60:40ಕ್ಕೆ ಬದಲಾಯಿಸಿದ ಪರಿಣಾಮ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾದರೂ, ಗ್ರಾಮೀಣ ಬಡವರು, ಹಿಂದುಳಿದವರು, ಪರಿಶಿಷ್ಟ ಜಾತಿ ಪಂಗಡದ ಬಡವರು, ಭೂರಹಿತ ಕೂಲಿ ಕಾರ್ಮಿಕರಿಗೆ ತೊಂದರೆಯಾಗಿ ಅವರು ಗುಳೆ ಹೋಗಬಾರದು ಹಾಗೂ ಗ್ರಾಮೀಣ ಬಡವರಿಗೆ ನೆರವಾಗಬೇಕು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಜುಲೈ 1ರಿಂದ ಯೋಜನೆಯನ್ನು ಜಾರಿಗೆ ತಂದಿದೆ. ಆದರೆ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ವಿಳಂಬ ಧೋರಣೆಯಿಂದ ಯೋಜನೆಯ ಉದ್ದೇಶವೇ ನಾಶವಾಗುತ್ತದೆ ಎಂದರು.**



## ಕಾವೇರಿ ನೀರು ಆದೇಶ ಮರುಪರಿಶೀಲನೆಗೆ ಮನವಿ

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿ ಪಾತ್ರದಲ್ಲಿನ ಜಲಾಶಯಗಳಿಗೆ ಒಳ ಹರಿವು ಕಡಿಮೆಯಾಗಿರುವುದರಿಂದಾಗಿ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಲು ಆದೇಶ ನೀಡುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿಗೆ ಮನವಿ ಮಾಡುವುದಾಗಿ ಜಲ ಸಂಪನೂಲ ಸಚಿವ ಚೆಲುವರಾಯ ಸ್ವಾಮಿ ಹೇಳಿದ್ದಾರೆ. ದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ಜಲಾನಯನ ಪ್ರದೇಶದಲ್ಲಿನ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದರಿಂದಾಗಿ ನೀರಿನ ಹರಿವನ್ನು 3 ಸಾವಿರ ಕ್ಯೂಸೆಕ್‌ಗೆ ಸಿಡಬ್ಲ್ಯೂಆರ್‌ಸಿ ಕಡಿತ ಮಾಡಿದೆ ಎಂದು ಹೇಳಿದರು.

ನಮಗೆ ಸಮಸ್ಯೆಗಳಿದ್ದರೂ, ಸುಪ್ರೀಂಕೋರ್ಟ್ ಮತ್ತು ಸಿಡಬ್ಲ್ಯೂಆರ್‌ಸಿ ಆದೇಶ ಪಾಲನೆ ಮಾಡಿದ್ದೇವೆ. ಈಗ ನೀರಿನ ಒಳ ಹರಿವು ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಡಲು ಕಷ್ಟಸಾಧ್ಯವಾಗುತ್ತದೆ. ಹೀಗಾಗಿ ತಮ ಆದೇಶವನ್ನು ಪುನರ್ ಪರಿಶೀಲಿಸುವಂತೆ ಸಿಡಬ್ಲ್ಯೂಆರ್‌ಸಿಗೆ ಮೇಲನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ತಮಿಳುನಾಡಿಗೆ ಕಾವೇರಿ ನೀರಿ ಬಿಡುವ ವಿಚಾರವಾಗಿ ಸಂಕಷ್ಟ ಸೂತ್ರ ಪಾಲನೆಯಾಗಬೇಕು. ನಮಗೆ



ನೀರಿಲ್ಲದಿದ್ದಾಗ ತಮಿಳುನಾಡಿಗೆ ನೀರು ಹರಿಸಲು ಹೇಗೆ ಸಾಧ್ಯ. ಈ ಕುರಿತಂತೆ ಒಟ್ಟಾರೆ ಪರಿಶೀಲನೆ ನಡೆಸಲು ಮನವಿ ಸಲ್ಲಿಸುತ್ತಿದ್ದೇವೆ ಎಂದು ಹೇಳಿದರು. ಆರಂಭದಲ್ಲಿ 10 ಸಾವಿರ ಕ್ಯೂಸೆಕ್‌ವರೆಗೂ ನೀರು ಬಿಡುವಂತೆ ನ್ಯಾಯಾಧಿಕರಣ ಆದೇಶ ನೀಡಿತ್ತು.

ರಾಜ್ಯ ಸರ್ಕಾರದ ವಾದಗಳು ತೀವ್ರವಾದ ಹಿನ್ನೆಲೆಯಲ್ಲಿ 3 ಸಾವಿರ ಕ್ಯೂಸೆಕ್‌ಗೆ ಬಂದು ನಿಂತಿದೆ. ನೈಸರ್ಗಿಕವಾಗಿ ಅಷ್ಟು ನೀರು ಹರಿದುಹೋಗುವುದು ಸಹಜ. ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಮನವಿ ಮಾಡಿದರು. ದೆಹಲಿಯಲ್ಲಿಂದು ನಡೆದ ಸುಪ್ರೀಂಕೋರ್ಟ್ ಚಲೋ ಕಾರ್ಯಕ್ರಮದಲ್ಲಿ ತಾವು ಭಾಗವಹಿಸುತ್ತಿದ್ದು, ದೇಶದ ಮತದಾರರ ರಕ್ಷಣೆಗೆ ಹೋರಾಟ ನಡೆಸುತ್ತಿದ್ದೇವೆ ಎಂದು ಹೇಳಿದರು. ಅರ್ಜಿ ನಮೂನೆ-7ರ ಹೆಸರಿನಲ್ಲಿ ಅರ್ಹ ಮತದಾರರನ್ನು ತೆಗೆದು ಹಾಕಲಾಗಿದೆ. ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಂಡು ಚುನಾವಣೆ ಗೆಲ್ಲುವ ವ್ಯವಸ್ಥೆಗಳನ್ನು ರೂಪಿಸಿಕೊಂಡಿದೆ. ಅರ್ಹ ಮತದಾರರ ಹಕ್ಕುಗಳಿಗಾಗಿ ಆಯೋಗ ನಿರಂತರ ಹೋರಾಟ ನಡೆಸುತ್ತಿದೆ ಎಂದು ಅವರು ಹೇಳಿದರು.

ಈ ದಿನದ ದರ | ಪೆಟ್ರೋಲ್: 111.68₹/L | ಡೀಸೆಲ್ : 99.56₹/L | ಬಂಗಾರ: ₹ 15,098 /Gram 24ct ₹ 13,840/Gram 22ct | ಬೆಳ್ಳಿ: ₹240./ Gram

ಹೊಸ ರೈಲು ಕಾಮಗಾರಿಯನ್ನು ಅನಾವಶ್ಯಕವಾಗಿ ವಿಳಂಬ ಮಾಡಿದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ

# ಅನಾವಶ್ಯಕವಾಗಿ ವಿಳಂಬ ಮಾಡಿದ ಗುತ್ತಿಗೆದಾರರು ಕಪ್ಪುಪಟ್ಟಿಗೆ

**ಉದಯವಾಹಿನಿ, ಶಿವಮೊಗ್ಗ**

ಶಿವಮೊಗ್ಗ– ಶಿಕಾರಿಪುರ– ರಾಣೆಬೆನ್ನೂರು ಹೊಸ ರೈಲು ಕಾಮಗಾರಿಯನ್ನು ಅನಾವಶ್ಯಕವಾಗಿ ವಿಳಂಬ ಮಾಡಿದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

1. ನೂರಕ್ಕೆ ನೂರರಷ್ಟು ಹಣ ಕೊಡುತ್ತದೆ
2. ನಮ್ಮ ರಾಜ್ಯದಲ್ಲಿ 52 ಸಾವಿರ ಕೋಟಿ
3. 25–30 ವರ್ಷಗಳಿಗೆ ಏನು ಬೇಕಾಗುತ್ತದೆ

ಸೋಮವಾರ ಮಲೆನಾಡು ಭಾಗದ ರೈಲ್ವೆ ಕಾಮಗಾರಿ ಪ್ರಗತಿ ಕುರಿತು ಜನಪ್ರತಿನಿಧಿಗಳು ಹಾಗೂ ರೈಲ್ವೆ ಅಧಿಕಾರಿಗಳ ಜೊತೆ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿದ ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಶಿವಮೊಗ್ಗ–ಶಿಕಾರಿಪುರ ನೂತನ ರೈಲು ಮಾರ್ಗದ ಕಾಮಗಾರಿಯನ್ನು ನಡೆಸದೆ ವಿಳಂಬವನ್ನು ಮಾಡಿದ ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಿ, ಆತನ ವಿರುದ್ಧ ಪ್ರಕರಣವನ್ನು ದಾಖಲಿಸಲಾಗುವುದು ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನ ಮಂತ್ರಿಯಾದ ಮೇಲೆ ದೇಶದ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳಿಗೆ ಭಾರತ ಸರ್ಕಾರವೇ ನೂರಕ್ಕೆ ನೂರರಷ್ಟು ಹಣ ಕೊಡುತ್ತದೆ. ಕಳೆದ 40 ವರ್ಷಗಳಿಂದ ನೆನೆಗುದಿಗೆ ಬಿದ್ದ ಕಾಮಗಾರಿಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ 52 ಸಾವಿರ ಕೋಟಿ ರೂ.ಗಳ ಕಾಮಗಾರಿ ಕೈಗೆತ್ತುಕೊಡಿದ್ದೇವೆ.

ಶಿವಮೊಗ್ಗ– ಬಿರೂರು ಡಬ್ಲಿಂಗ್ ಮಾರ್ಗಕ್ಕೆ ಕೇಂದ್ರ ಸರ್ಕಾರ



ಉದಯವಾಹಿನಿ ಚಿತ್ರ

ಒಪ್ಪಿಕೊಂಡಿದೆ. ಈಗ ಸರ್ವೆ ನಡೆಯುತ್ತಿದೆ. ಸರ್ವೆ ಮುಗಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎಂದರು. ರಾಜ್ಯ ಸರ್ಕಾರ ಭೂ ಸ್ವಾಧೀನ ಮಾಡಿಕೊಡದೆ ಸಮಸ್ಯೆ ಮಾಡಿತ್ತು. ಅದನ್ನೇ ಗುತ್ತಿಗೆದಾರ ಬಳಸಿಕೊಳ್ಳುತ್ತಿದ್ದನು. ಇದರಿಂದ ಆತನ ಮೇಲೆ ಕ್ರಮಕ್ಕೆ ಸೂಚಿಸಲಾಗಿದೆ. ಶಿವಮೊಗ್ಗ– ಶೃಂಗೇರಿ– ಮಂಗಳೂರು ರೈಲು ಮಾರ್ಗಕ್ಕೆ ಸರ್ವೆ ನಡೆಸಲಾಗುತ್ತಿದೆ. ಅದಕ್ಕೆ 2025 ರಲ್ಲಿಯೇ ಇದಕ್ಕೆ ಅನುಮೋದನೆ ನೀಡಲಾಗುವುದು. ಕೊನೆಯ ಸರ್ವೆ ನಡೆಸಲು ಟೆಂಡರ್ ಸಹ ಕರೆಯಲಾಗಿದೆ ಎಂದರು. ತಾಳಗುಪ್ಪ, ಶಿರಸಿ, ಸಿದ್ದಾಪುರ, ಮುಂಡಗೋಡ, ಹುಬ್ಬಳ್ಳಿ ಹೊಸ ಮಾರ್ಗ ಇದು ಬುದ್ಧಿವಂತಿಕೆಯ ಕೆಲಸವಾಗಿತ್ತು. ಸಂಸದ ರಾಘವೇಂದ್ರ ಅವರು ಸೊರಬ ಮೇಲೆ ರೈಲು ಮಾರ್ಗ ತೆಗೆದುಕೊಂಡು ಹೋಗಲು ನನ್ನ ಮೇಲೆ ಅಲ್ಲ, ಸಚಿವ ಅಶ್ವಿನಿ ವೈಷ್ಣವ್ ಮೇಲೂ ಸಹ ಸಾಕಷ್ಟು ಒತ್ತಡ ಹಾಕಿದ್ದರು. ಇಲ್ಲಿ ಐದು ಮಾರ್ಗದ ಸರ್ವೆ ನಡೆಸಲಾಗಿತ್ತು. ಮೊದಲನೇಯದು ತಾಳಗುಪ್ಪ, ಸಿದ್ದಾಪುರ, ಶಿರಸಿ, ಮುಂಡಗೋಡ, ಸೌತ್ ಹುಬ್ಬಳ್ಳಿ 161 ಕಿಲೋಮೀಟರ್ ದೂರು ಆಗುತ್ತದೆ. ಎರಡನೇ ಮಾರ್ಗ ತಾಳಗುಪ್ಪ, ಶಿರಸಿ, ಸಿದ್ದಾಪುರ, ಬಂಕಾಪುರ, ಯಲವಗಿ, ಮೂರನೇ ರೈಲು ಮಾರ್ಗ ತಾಳಗುಪ್ಪ, ಶಿರಸಿ, ಸಿದ್ದಾಪುರ ಮುಂಡಗೋಡ, ಹುಬ್ಬಳ್ಳಿ, ಅಂಕೋಲ. ನಾಲ್ಕನೇ ಮಾರ್ಗ ತಾಳಗುಪ್ಪ– ಸೊರಬ ಇತ್ತು. ಐದನೇ ಮಾರ್ಗ ತಾಳಗುಪ್ಪ, ಸೊರಬ, ಸಿದ್ದಾಪುರ, ಮುಂಡಗೋಡ ಹಾಗೂ ಸೌತ್ ಹುಬ್ಬಳ್ಳಿ ಆಗಿದ್ದು, ಇದು 178 ಕಿಲೋಮೀಟರ್ ದೂರ ಆಗುತ್ತದೆ. ಸೊರಬ ಹೋರಾಟಗಾರರ ಸ್ಥಳ ಆಗುತ್ತದೆ. ಇದನ್ನು ಆಯ್ಕೆಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕೋಟೆಗಂಗೂರಿನ ನೂತನ ಕೋಚಿಂಗ್ ಡಿಪೋ ಫೆಬ್ರುವರಿಗೆ ಉದ್ಘಾಟನೆ ಮಾಡಲಾಗುವುದು ಎಂದು ಹೇಳಿದರು.

### ಲೋಪ ತೋರಿಸಲು ಸವಾಲು

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಏನೂ ಲೋಪವಾಗಿದೆ. ಬಾಂಗ್ಲಾ ದೇಶದ ನುಸುಳುಕೋರರನ್ನು ಭಾರತಕ್ಕೆ ಸೇರಿಸಬೇಕೇ ಎಂದು ಪ್ರಶ್ನಿಸಿದರು. ಮೋದಿ ಸರ್ಕಾರದಲ್ಲಿ ಏನಾದರೂ ಒಂದು ಲೋಪ ಇದೆಯೇ ತೋರಿಸಿ ಎಂದು ಸವಾಲು ಹಾಕಿದರು. ಮೋದಿ ಮುಂದಿನ 50 ವರ್ಷದ ಕಾಮಗಾರಿ ಮಾಡಿದ್ದಾರೆ.

------------

ಕಾಂಗ್ರೆಸ್ ನವರು ನಮ್ಮದು 100 ವರ್ಷದ ಪಕ್ಷ ಎನ್ನುತ್ತಾರೆ. ಆದರೆ ಇವರಲ್ಲಿ ಸರ್ಕಾರವನ್ನು ಟೀಕಿಸಲು ಸಿಗದೆ ಈಗ ಎಸ್ ಐ ಆರ್ ನಲ್ಲಿ ಏನೂ ಇರದೇ ಇದ್ದರೂ ಸಹ ಪ್ರತಿಭಟನೆ ನಡೆಸುತ್ತಿದ್ದಾರೆ.

– ಸೋಮಣ್ಣ, ಸಚಿವ

## 106 ಕ್ವಿಂಟಾಲ್ PDS ಅಕ್ಕಿ ವಶಕ್ಕೆ..!

**ಉದಯವಾಹಿನಿ, ಹೊಸಪೇಟೆ**

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ವಿಜಯನಗರ ಜಿಲ್ಲೆಯಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಪಡಿತರ (ಪಿಡಿಎಸ್) ಅಕ್ಕಿಯನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.


ಉದಯವಾಹಿನಿ ಚಿತ್ರ

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಹಿರೇಹಡಗಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ದಾಳಿ ನಡೆದಿದೆ. ನಿಯಮಬಾಹಿರವಾಗಿ ಸಾಗಣೆಯಾಗುತ್ತಿದ್ದ ಸುಮಾರು ರೂ.2,38,500 ಮೌಲ್ಯದ 106 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಕೆಎ–25 ಎಬಿ 1751 ನೋಂದಣಿ ಸಂಖ್ಯೆಯ ವಾಹನದಲ್ಲಿ ಅಕ್ಕಿಯನ್ನು ಸಾಗಿಸಲಾಗುತ್ತಿತ್ತು. ಪರಿಶೀಲನೆ ವೇಳೆ ಅಧಿಕಾರಿಗಳು ಸಂಪೂರ್ಣ ಅಕ್ಕಿ ದಾಸ್ತಾನಿನ ಜೊತೆಗೆ ಸಾಗಾಟಕ್ಕೆ ಬಳಸಿದ ವಾಹನವನ್ನು ವಶಕ್ಕೆ ಪಡೆದು, ಮುಂದಿನ ಕಾನೂನು ಕ್ರಮಕ್ಕಾಗಿ ಕ್ರಮ ಈ ಸಂಬಂಧ ಹೂವಿನಹಡಗಲಿ ತಾಲ್ಲೂಕಿನ ಆಹಾರ ನಿರೀಕ್ಷಕ ನವೀನ್ ಕುಮಾರ್ ಅವರು ಹಿರೇಹಡಗಲಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಅಕ್ರಮವಾಗಿ ಅಕ್ಕಿ ಸಾಗಾಟದಲ್ಲಿ ತೊಡಗಿದ್ದಾರೆ ಎನ್ನಲಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಮನವಿ ಮಾಡಿದ್ದಾರೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನೀಡಿರುವ ಮಾಹಿತಿ ಹಾಗೂ ದೂರಿನ ಆಧಾರದ ಮೇಲೆ ಪೊಲೀಸರು ಮುಂದಿನ ಕ್ರಮ ಕೈಗೊಳ್ಳುವ ನಿರೀಕ್ಷೆಯಿದೆ. ಸರ್ಕಾರದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಅರ್ಹ ಫಲಾನುಭವಿಗಳಿಗೆ ವಿತರಿಸಲು ಉದ್ದೇಶಿಸಿರುವ ಪಡಿತರ ಅಕ್ಕಿಯ ಅಕ್ರಮ ಸಾಗಾಟ ಮತ್ತು ದುರುಪಯೋಗ ತಡೆಯಲು ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿರುವ ಬೆನ್ನಲ್ಲೇ ಈ ಜಪ್ತಿ ನಡೆದಿದೆ.

## ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ

**ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಕಲ್ಲೂರ ರೋಡ್ ಗ್ರಾಮದ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯ ಆಡಳಿತ ಮಂಡಳಿಯವರು ಸ್ಥಳೀಯ ಟಿಪ್ಪರ್ ಮತ್ತು ಲಾರಿಗಳಿಗೆ ಹಾಗೂ ಸ್ಥಳೀಯ ವಾಹನ ಚಾಲಕರಿಗೆ ಕಾರ್ಮಿಕರಿಗೆ ಮೊದಲ ಆದ್ಯತೆ ನೀಡದೆ ಹೊರಗಿನವರಿಗೆ ಆದ್ಯತೆ ನೀಡುವುದು ಖಂಡಿಸಿ ಸೋಮವಾರ ಕಾರ್ಖಾನೆ ಮುಖ್ಯದ್ವಾರ ಎದುರು ಲಾರಿ ಟಿಪ್ಪರಗಳೊಂದಿಗೆ ಮೂಲನಿವಾಸಿ ವಾಹನ ಚಾಲಕರ ಸಂಘ ಹಾಗೂ ಲಾರಿ ಮಾಲಿಕರ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಬೃಹತ್ ಹೋರಾಟ ನಡೆಸಿ ಚೆಟ್ಟಿನಾಡು ಕಾರ್ಖಾನೆ ಆಡಳಿತ ಮಂಡಳಿ ಅವರಿಗೆ ಮನವಿಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾರುತಿ ಗಂಜಗಿರಿ, ಮಸೂದ್ ಸೌದಾಗಾರ, ಬಾಬುಮಿಯ್ಯ, ಮುಜೀಬ್, ಪ್ರಕಾಶ ಭಕ್ತಂಪಳ್ಳಿ, ಮಹೇಶ ಕುಸರಂಪಳ್ಳಿ, ಅಮರನಾಥ ಹೂವಿನಬಾವಿ, ಮೋಹನ ಐನಾಪೂರ, ಮೋಬಿನ್,ಮತೀನ್ ಸೌದಾಗಾರ,ಸದ್ದಾಂ,ಶಿವಕುಮಾರ ಜಾಬಶೆಟ್ಟಿ, ಸಂತೋಷ,ದಾವೂದ್,ಮೊಗಲಪ್ಪ ಬೆಡಕಪಳ್ಳಿ,ಅಶೋಕ, ಸುರೇಶ, ಕಮಲಾಕರ್, ಶಾಂತಕುಮಾರ, ಜೈಬೀಮ್, ಮಿಥುನ, ಅನ್ಸಾರ್, ಶಿವರಾಜ್, ಮಾರುತಿ, ಅಹೇಮದ್, ಲೋಕೇಶ, ನರಸಿಂಹಮ್ಮು, ದಿಲೀಪ್ ಅನೇಕರಿದ್ದರು.



ಉದಯವಾಹಿನಿ ಚಿತ್ರ

## ಲಾಠಿಚಾರ್ಜ್ ಖಂಡಿಸಿ ಪ್ರತಿಭಟನೆ

**ಉದಯವಾಹಿನಿ, ವಿಜಯಪುರ**

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರ ಮೇಲಿನ ಲಾಠಿಚಾರ್ಜ್ ಖಂಡಿಸಿ ವಿವಿಧ ಪ್ರಗತಿಪರ ಸಂಘಟನೆಗಳ ವೇದಿಕೆಯ ನೇತೃತ್ವದಲ್ಲಿ ಭಾನುವಾರ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಭಗವಾನ್ ರೆಡ್ಡಿ ಮಾತನಾಡಿ, ಕೇಂದ್ರ ಗೃಹ ಇಲಾಖೆ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹತ್ತಿಕ್ಕಲು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಲಾಠಿಚಾರ್ಜ್ ಮಾಡಿ, ರಸ್ತೆಗೆ ಬೀಳಿಸಿ ಎಳೆದಾಡಿರುವ ದೃಶ್ಯಗಳು ಪ್ರಜಾಪ್ರಭುತ್ವದ ಕಗ್ಗೊಲೆಗೆ ಸಾಕ್ಷಿಯಾಗಿವೆ ಎಂದು ಹೇಳಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಭೀಮರಾಯ ಪೂಜಾರಿ ಮಾತನಾಡಿ, ಚುನಾವಣಾ ಆಯುಕ್ತ ಜ್ಞಾನೇಶಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು ಹಾಗೂ ಕಾನೂನುಬಾಹಿರವಾಗಿ


ಉದಯವಾಹಿನಿ ಚಿತ್ರ

ನಡೆಸಲಾಗುತ್ತಿದೆ ಎಂದು ಆರೋಪಿಸಲಾದ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಎದ್ದೇಳು ಕರ್ನಾಟಕ ಹೋರಾಟ ಸಮಿತಿ ಸಂಚಾಲಕ ಅಬ್ದುಲ್ ಖಾದರ್ ಮಾತನಾಡಿ, ಕೇಂದ್ರ ಸರ್ಕಾರ ಸಂವಿಧಾನವನ್ನು ಆಟದ ಗೊಂಬೆಯನ್ನಾಗಿ ಮಾಡಿಕೊಂಡು ಫ್ಯಾಸಿಸ್ಟ್ ನೀತಿಯನ್ನು ಹೇರುತ್ತಿದೆ ಎಂದು ಆರೋಪಿಸಿದರು. ಮಹಿಳಾ ಮುಖಂಡೆ ಸುರೇಖಾ ರಜಪೂತ, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಮುಖಂಡೆ ಸುನಂದಾ ನಾಯಕ, ಹೋರಾಟಗಾರರಾದ ಲಕ್ಷ್ಮಣ ಹಂದ್ರಾಳ, ಸುರೇಶ ಬಿಜಾಪುರ, ಸಿದ್ದರಾಮಯ್ಯ ಹಿರೇಮಠ, ಫಯಾಜ್ ಕಲಾದಗಿ ಸೇರಿದಂತೆ ಹಲವರು ಮಾತನಾಡಿದರು.

## ಕೆ.ಆರ್. ಮಲ್ಲೇಶ್‌ಕುಮಾರ್ ನೇಮಕ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಬಳ್ಳಾರಿ**

ಭಾರತೀಯ ಜನತಾ ಪಾರ್ಟಿಯ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಕಾರ್ಯಕಾರಿಣಿ ಸದಸ್ಯರನ್ನಾಗಿ ನಗರದ ಕೆ.ಆರ್. ಮಲ್ಲೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಮೋರ್ಚಾದ ರಾಜ್ಯ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯರೂ ಆಗಿರುವ ರಘು ಕೌಟಿಲ್ಯ ಅವರು ಮಲ್ಲೇಶ್ ಕುಮಾರ್ ಗೆ ನೇಮಕಾತಿ ಆದೇಶ ಪತ್ರ ನೀಡಿ. ಈ ಹೊಣೆಗಾರಿಕೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಾ, ಪಕ್ಷದ ಸಂಘಟನೆಯನ್ನು ತಳಪಟ್ಟದಲ್ಲಿ ಸದೃಢಗೊಳಿಸುತ್ತಾ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳೂ ಸೇರಿದಂತೆ ಇತರ ಚುನಾವಣೆಗಳಲ್ಲಿ ಪಕ್ಷವು ಜಯಭೇರಿ ಬಾರಿಸಲು ಸಮರ್ಪಣಾ ಮನೋಭಾವದಿಂದ ಶ್ರಮಿಸಬೇಕೆಂದು ಹೇಳಿದ್ದಾರೆ.

ಎಬಿವಿಪಿ ಹಿನ್ನಲೆಯಲ್ಲಿ ಬೆಳೆದು ಬಂದ ಮಲ್ಲೇಶ್ ಅವರು ಬಿಜೆಪಿ ಪಕ್ಷದ ಸಂಘಟನೆಯಲ್ಲಿ ಸಕ್ರಿಯರಾಗಿ, ಯುವಮೋರ್ಚಾದಲ್ಲಿ ಎರೆಡು ಬಾರಿ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಬಿಜೆಪಿ ಘಟಕದಲ್ಲಿ ಎರೆಡು ಬಾರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ಪಕ್ಷದಲ್ಲಿ ಅವರ ಸೇವೆಯನ್ನು ಪರಿಗಣಿಸಿ ಪಕ್ಷವು ಈ ಹೊಸ ಜವಾಬ್ದಾರಿಯನ್ನು ವಹಿಸಿದೆ. ಪಕ್ಷ ವಹಿಸಿರುವ ಜವಾಬ್ದಾರಿಯೊಂದಿಗೆ ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ಪ್ರಮಾಣಿಕ ಪ್ರಯತ್ನ ಮಾಡಲಿದೆ.

ತಮ್ಮ ಈ ನೇಮಕಕ್ಕೆ ಕಾರಣೀಭೂತರಾದ ಮಾಜಿ ಸಚಿವರಾದ ಜಿ.ಜನಾರ್ಧನರೆಡ್ಡಿ, ಬಿ.ಶ್ರೀರಾಮುಲು, ಮಾಜಿ ಶಾಸಕ ಸೋಮಶೇಖರ ರೆಡ್ಡಿ, ಮೋರ್ಚಾದ ರಾಜ್ಯ ಅಧ್ಯಕ್ಷ ರಘು ಕೌಟಿಲ್ಯ, ವಿಧಾನ ಪರಿಷತ್ ಸದಸ್ಯರಾದ ವೈ.ಎಂ.ಸತೀಶ್, ವಿಭಾಗದ ಪ್ರಭಾರಿ ಅಮರನಾಥ ಪಾಟೀಲ್, ಪಕ್ಷದ ಜಿಲ್ಲಾ ಅಧ್ಯಕ್ಷ ಅನಿಲ್ಮಾ ನಾಯ್ಡು, ಮಾಜಿ ಸಂಸದರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು, ಪಕ್ಷದ ರಾಜ್ಯ ಮತ್ತು ಜಿಲ್ಲಾ ಮುಖಂಡರು, ಪದಾಧಿಕಾರಿಗಳಿಗೆ ಮಲ್ಲೇಶ್ ಅವರು ಧನ್ಯವಾದ ತಿಳಿಸಿದ್ದಾರೆ.

## ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಬಿಟ್ಟು ಪಕ್ಷ ಸಂಘಟನೆಗೆ ಒತ್ತು ನೀಡಿ

**ಉದಯವಾಹಿನಿ, ಅಫಜಲಪುರ**

ಮುಂಬರುವ ಜಿ.ಪಂ. ಹಾಗೂ ತಾ.ಪಂ. ಚುನಾವಣೆ ಸಿದ್ಧತೆ ಪ್ರಕ್ರಿಯೆ ಶುರುವಾಗಿರುವ ಬೆನ್ನಲ್ಲೇ

ಮತಕ್ಷೇತ್ರದಲ್ಲಿ ಟಿಕೆಟ್ ಆಕಾಂಕ್ಷಿಗಳು ತಮ್ಮ ವೈಯಕ್ತಿಕ ಪ್ರಭಾವ ಬಳಸಿ ಸ್ಪರ್ಧೆಗೆ ಇಂಗಿತವನ್ನು ಸಾಮಾಜಿಕ ಜಾಲತಾಣದ ಮೂಲಕ ವ್ಯಕ್ತ ಪಡಿಸುದನ್ನು ಬಿಟ್ಟು ಸರ್ಕಾರದ ಯೋಜನೆಗಳನ್ನು ಜನರಿಗೆ ಮುಟ್ಟಿಸಿ ಪಕ್ಷ ಬಲವರ್ಧನೆಗೆ ಹೆಚ್ಚು ಗಮನ ಕೊಡಿ ಎಂದು ಶಾಸಕ ಎಂ.ಪಾಟೀಲ ಹೇಳಿದರು. ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ತಾಲ್ಲೂಕಿನಲ್ಲಿ ಒಟ್ಟು 7 ಜಿಪಂ ಹಾಗೂ 26 ತಾಪಂ ಕ್ಷೇತ್ರಗಳಿದ್ದು, ಈ ಎಲ್ಲಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಸಂಘಟಿಸುವುದು ಪ್ರತಿಯೊಬ್ಬ ಕಾರ್ಯಕರ್ತನ ಜವಾಬ್ದಾರಿ. ಹೀಗಾಗಿ ಪಕ್ಷಕ್ಕಾಗಿ ದುಡಿದವರು ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆ ವ್ಯಕ್ತ ಪಡಿಸುವುದು ಸಹಜ. ಪಕ್ಷದ ಅಧಿಕೃತ ನಿರ್ಧಾರ ಹೊರ ಬರುವ ಮುನ್ನವೇ ತಾವೇ ಅಭ್ಯರ್ಥಿ ಗಳೆಂದು ಬಿಂಬಿಸಿಕೊಳ್ಳುವುದು, ಇದು ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸಿದಂತಾಗಲಿದೆ ಎಂದು ಪಾಟೀಲ ತಿಳಿಸಿದರು. ಈ ರೀತಿಯ ಹೇಳಿಕೆಗಳು ಪಕ್ಷ ಸಂಘಟನೆಯ ಸರಿಯಾದ ಕ್ರಮವಲ್ಲ. ಪಕ್ಷ ತೆಗೆದುಕೊಂಡ ನಿರ್ಧಾರ ಮತ್ತು ತೀರ್ಮಾನಕ್ಕೆ ಬದ್ಧರಿದ್ದು, ಪಕ್ಷದ ಶಿಸ್ತು ಮತ್ತು ಒಗ್ಗಟ್ಟಿಗೆ ಆದ್ಯತೆ ನೀಡಬೇಕು. ಹೀಗಾಗಿ ಪ್ರತಿಯೊಬ್ಬರೂ ಪಕ್ಷದ ಶಿಸ್ತು ಮತ್ತು ಅಧಿಕೃತ ಆಯ್ಕೆ ಪ್ರಕ್ರಿಯೆಗೆ ಗೌರವ ನೀಡಬೇಕು ಎಂದು ಹೇಳಿದರು.ಇನ್ನೂ ಪಕ್ಷದ ಟಿಕೆಟ್ ಒಬ್ಬರಿಗೆ ಮಾತ್ರ ದೊರೆಯಬಹುದು. ಆದರೆ ಪಕ್ಷದ ಜವಾಬ್ದಾರಿ ಎಲ್ಲರ ಮೇಲಿದೆ.


ಉದಯವಾಹಿನಿ ಚಿತ್ರ

## ಮಿನಿ ನ್ಯೂಸ್

## ಪರೀಕ್ಷೆ ಬಹಿಷ್ಕರಿಸಿ ವಿದ್ಯಾರ್ಥಿಗಳ ಪ್ರತಿಭಟನೆ

**ಉದಯವಾಹಿನಿ, ಮಂಗಳೂರು**

ದಸರಾ ರಜೆಯ ಅವಧಿಯಲ್ಲೇ ಪದವಿ ಸೆಮಿಸ್ಟರ್ ಪರೀಕ್ಷೆಗಳನ್ನು ಆಯೋಜಿಸಿರುವುದನ್ನು ವಿರೋಧಿಸಿ ಮಂಗಳೂರಿನ ಬೆಂದೂರ್‌ವೆಲ್‌ನಲ್ಲಿರುವ ಸೇಂಟ್ ಆಗ್ನೆಸ್ ಕಾಲೇಜಿನ ನೂರಾರು ವಿದ್ಯಾರ್ಥಿನಿಯರು ಪರೀಕ್ಷೆ ಬಹಿಷ್ಕರಿಸಿ ಕಾಲೇಜು ಗೇಟಿನ ಮುಂದೆ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಈ ಪ್ರತಿಭಟನೆಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಪೂರ್ಣ ಬೆಂಬಲ ನೀಡಿದೆ. ಮಂಗಳೂರು ದಸರಾ ಕರಾವಳಿ ಭಾಗದ ಪ್ರಮುಖ ಹಾಗೂ ಸಂಭ್ರಮದ ಹಬ್ಬವಾಗಿದೆ. ಈ ಹಬ್ಬದ ಸಂದರ್ಭದಲ್ಲೇ ಅಂದರೆ ಅಕ್ಟೋಬರ್ 12 ರಿಂದ ಅಕ್ಟೋಬರ್ 28 ರವರೆಗೆ ಪದವಿ ಸೆಮಿಸ್ಟರ್ ಪರೀಕ್ಷೆಗಳನ್ನು ಕಾಲೇಜು ಆಡಳಿತ ಮಂಡಳಿಯು ನಿಗದಿಪಡಿಸಿದೆ. ಆದರೆ ವಿದ್ಯಾರ್ಥಿಗಳು, "ಹಬ್ಬದ ವೇಳೆಯೇ ಪರೀಕ್ಷೆ ಇಟ್ಟಿರುವುದರಿಂದ ಧಾರ್ಮಿಕ ಆಚರಣೆಗಳಲ್ಲಿ ಭಾಗಿಯಾಗಲು ಮತ್ತು ಮನೆಯವರೊಂದಿಗೆ ಹಬ್ಬ ಆಚರಿಸಲು ಸಾಧ್ಯವಾಗುತ್ತಿಲ್ಲ" ಎಂದು ದೂರಿದ್ದಾರೆ. ಅದರಲ್ಲೂ, ಕ್ರಿಸ್ಮಸ್ ಹಬ್ಬಕ್ಕೆ ರಜೆ ನೀಡುವ ಕಾಲೇಜು ಆಡಳಿತ ಮಂಡಳಿ, ದಸರಾ ಹಬ್ಬಕ್ಕೆ ರಜೆ ನೀಡದೆ ಉದ್ದಟತನ ಪ್ರದರ್ಶಿಸುತ್ತಿದೆ ಎಂದು ವಿದ್ಯಾರ್ಥಿನಿಯರು ಆಕ್ರೋಶ ಹೊರಹಾಕಿದ್ದಾರೆ.

## ಅಮರ್ ಖಂಡ್ರೆಗೆ ಹೈಕೋರ್ಟ್ ನೋಟಿಸ್ ಜಾರಿ

**ಉದಯವಾಹಿನಿ, ಕಲಬುರಗಿ**

ಬ್ಯಾಂಕಿಂಗ್ ಕಾಯ್ದೆ ಉಲ್ಲಂಘನೆ ಆರೋಪದ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಸಚಿವ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರ ಸಹೋದರ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಅಮರ್ ಖಂಡ್ರೆಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಅಮರ್ ಖಂಡ್ರೆ ಅವರು ತಮ್ಮ ರಾಜಕೀಯ ಪ್ರಭಾವವನ್ನು ಬಳಸಿಕೊಂಡು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಮತ್ತು ಸಹಕಾರ ಕಾಯ್ದೆಯ ನಿಯಮಗಳನ್ನು ಗಾಳಿಗೆ ತೂರಿ, ಮೂರನೇ ಬಾರಿಗೆ ನಿಯಮ ಬಾಹಿರವಾಗಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದಾರೆ ಎಂದು ಆರೋಪಿಸಿ, ಬ್ಯಾಂಕ್ ಸದಸ್ಯರಾದ ಅತಿವಾಳ ಕಪಲಾಪುರ ಮತ್ತು ಶಿವರಾಜ್ ವೀರಶೆಟ್ಟಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಮೂಲಕ ಆರ್‌ಬಿಐ ತಿದ್ದುಪಡಿ ಹಾಗೂ ಬ್ಯಾಂಕಿಂಗ್ ರೆಗ್ಯೂಲೇಶನ್ ಕಾಯ್ದೆಯ ನಿಯಮಗಳ ಪ್ರಕಾರ, ಯಾವುದೇ ವ್ಯಕ್ತಿ ಮೂರನೇ ಅವಧಿಗೆ ಬ್ಯಾಂಕ್ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವಂತಿಲ್ಲ ಎಂದು ಅರ್ಜಿದಾರರು ಕೋರ್ಟ್ ಗಮನಕ್ಕೆ ತಂದಿದ್ದಾರೆ. ಮುಂದುವರೆದು, ಈ ಅರ್ಜಿಯ ವಿಚಾರಣೆ ನಡೆಸಿದ ಕಲಬುರಗಿ ಹೈಕೋರ್ಟ್ ಪೀಠವು ದೂರುಗಳನ್ನು ಗಂಭೀರವಾಗಿ ಪರಿಗಣಿಸಿ ಅಮರ್ ಖಂಡ್ರೆಗೆ ನೋಟಿಸ್ ಜಾರಿ ಮಾಡಿದೆ. ಅಷ್ಟೇ ಅಲ್ಲದೆ, ಮುಂಬರುವ ನವೆಂಬರ್ 5 ರೊಳಗೆ ವಿಚಾರಣೆಗೆ ಖುದ್ದಾಗಿ ಹಾಜರಾಗುವಂತೆ ಹೈಕೋರ್ಟ್ ಕಡಕ್ ನಿರ್ದೇಶನ ನೀಡಿದೆ.

## ವಾಟ್ಸಪ್ ಸ್ಟೇಟಸ್ ಮೂಲಕ HDKಗೆ ಡಿಸಿ ಟಾಂಗ್



ಉದಯವಾಹಿನಿ ಚಿತ್ರ

**ಉದಯವಾಹಿನಿ, ಹಾಸನ**

KPSC ಅಕ್ರಮದಲ್ಲಿ ಹಾಸನ ಜಿಲ್ಲಾಧಿಕಾರಿ ಕೆ.ಎಸ್ ಲತಾಕುಮಾರಿ ಭಾಗಿಯಾಗಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದರು. ಇದಕ್ಕೆ ಲತಾಕುಮಾರಿ ವಾಟ್ಸಪ್ ಸ್ಟೇಟಸ್ ಮೂಲಕ ಟಾಂಗ್ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ. ವಾಟ್ಸಪ್ ಸ್ಟೇಟಸ್‌ನಲ್ಲಿ ರಾಷ್ಟ್ರ ಲಾಂಛನ, ಧ್ಯೇಯವಾಕ್ಯ ಸತ್ಯಮೇವ ಜಯತೇ ಜೊತೆಗೆ ಎರಡು ಸಾಲುಗಳನ್ನ ಬರೆದಿದ್ದಾರೆ. ನನ್ನ ಮೇಲೆ ಸುಳ್ಳಿನ ದಾಳಿ ಮಾಡಬಹುದು ಆದರೆ ನೀವು ನನ್ನನ್ನು ಸುಳ್ಳಿನಿಂದ ಕುಗ್ಗಿಸಲು ಸಾಧ್ಯವಿಲ್ಲ. ಸುಳ್ಳು ದಾಳಿ ಮಾಡಿದರೆ, ಸತ್ಯ ರಕ್ಷಣೆ ಮಾಡುತ್ತೆ ಎಂದು ಲತಾಕುಮಾರಿ ತಮ್ಮ ವೈಯುಕ್ತಿಕ ನಂಬರ್‌ನ ವಾಟ್ಸಪ್‌ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದಾರೆ. ಶನಿವಾರವಷ್ಟೇ ಹೆಚ್.ಡಿ.ಕುಮಾರಸ್ವಾಮಿ, ಹಾಸನ ಜಿಲ್ಲಾಧಿಕಾರಿ ಹುದ್ದೆಯಲಿರುವ ಮಹಿಳೆ ಕೆಪಿಎಸ್ಸಿಯಲ್ಲಿ ಏನೇನು ಮಾಡಿದ್ದಾರೆ ಎಂಬುದು ದಾಖಲೆ ಸಮೇತ ಸಾಬೀತಾಗಿದೆ. ಆದರೂ ಅಲ್ಲಿ ಅಕ್ರಮ ಎಸಗಿದ ಇವರನ್ನು ಇಲ್ಲಿ ಜಿಲ್ಲಾಧಿಕಾರಿ ಸ್ಥಾನದಲ್ಲಿ ಕೂರಿಸಿದ್ದಾರೆ. ಅವತ್ತೇ ಅವರನ್ನು ರಜೆಯ ಮೇಲೆ ಕಳಿಸಿ ಅಮಾನತು ಮಾಡಬೇಕಾಗಿತ್ತು ಎಂದು ಕಿಡಿಕಾರಿದ್ದರು.

## ಇಂಡಿಯಾ ಒಕ್ಕೂಟದಿಂದ ಬೃಹತ್ ಪ್ರತಿಭಟನೆ

**ಉದಯವಾಹಿನಿ, ಕಲಬುರಗಿ**

**ಎಸ್‌ಐಆರ್** ಪ್ರಕ್ರಿಯೇ ದೊಷಪೂರಿತವಾಗಿದ್ದು ಜನರ ಮತದಾನದ ಹಕ್ಕನ್ನು ಕಿತ್ತುಕೊಳ್ಳಲಾಗುತ್ತಿದೆ ಇದನ್ನು ರದ್ದುಪಡಿಸಬೇಕು ಹಾಗೂ ಅಕ್ರಮ ಎಸಗಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ್ ಅವರ ರಾಜಿನಾಮೆಗೆ ಆಗ್ರಹಿಸಿ ಪ್ರಜಾಪ್ರಭುತ್ವದ ಉಳಿವಿಗಾಗಿ ಇಂಡಿಯಾ ಒಕ್ಕೂಟದಿಂದ ಅ.13 ರಂದು ನಗರದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಕಿರಣ್ ದೇಶಮುಖ ತಿಳಿಸಿದ್ದಾರೆ. ಈ ಪ್ರತಿಭಟನೆಯು ಬೆಳಿಗ್ಗೆ 10–30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಿಂದ ಜಗತ್ ವೃತ್ತದವರೆಗೆ ಹೊರಡಲಿದೆ. ಕಾರಣ ಅಂದು ಬೆಳಿಗ್ಗ 10–30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಕಾಂಗ್ರೆಸ್ ಪಕ್ಷದ ಹಾಲಿ ಹಾಗೂ ಮಾಜಿ ಸಂಸದರು, ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ/ಮಂಡಳಿ/ಪ್ರಾಧಿಕಾರದ ಅಧ್ಯಕ್ಷರು, ಮುಖಂಡರು, ಕೆಪಿಸಿಸಿ ಹಾಗೂ ಡಿಸಿಸಿ ಪದಾಧಿಕಾರಿಗಳು ಹಾಗೂ ಸದಸ್ಯರು, ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷರು, ಡಿಸಿಸಿ ಡೇಲಿಗೇಟ ಸದಸ್ಯರು, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ವಿವಿಧ ಮೂಂಚೂಣಿ ಘಟಕ, ವಿಭಾಗಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾಯಿತ ಹಾಲಿ ಹಾಗೂ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಎಪಿಎಂಸಿಯ ಹಾಲಿ ಹಾಗೂ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಮಹಾ ನಗರ ಪಾಲಿಕೆಯ ಹಾಲಿ ಹಾಗೂ ಮಾಜಿ ಮಹಾಪೌರರು, ಉಪ ಮಹಾಪೌರರು ಹಾಗೂ ಸದಸ್ಯರುಗಳು, ಮಹಿಳೆಯರು, ಯುವಕರು ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಆಗಮಿಸಿ ಬೃಹತ್ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕೆಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.



ಅರ್ಶಿಯಾ ಖಾನ್, ಇದೀಗ 'ಸಂಪೂರ್ಣ ಶ್ರೀದೇವಿ ಮಹಾತ್ಮೆ' ಪ್ರಸಂಗದಲ್ಲಿ ಶ್ರೀ ಅಷ್ಟಭುಜಾ ದೇವಿಯ ದೈವಿಕ ವೇಷ ಧರಿಸಿ ರಂಗವೇರಲು ಸಜ್ಜಾಗಿದ್ದಾರೆ

# ಅರ್ಶಿಯಾ ಖಾನ್ ವ್ರತ ಹಿಡಿದು 'ಶ್ರೀದೇವಿ' ವೇಷಧಾರಿಯಾಗಿ ರಂಗಪ್ರವೇಶ

**ಉದಯವಾಹಿನಿ, ಮಂಗಳೂರು**

ಗಂಡುಕಲೆ ಯಕ್ಷಗಾನ ಕೇವಲ ಒಂದು ಧರ್ಮ ಅಥವಾ ಸಮುದಾಯಕ್ಕೆ ಸೀಮಿತವಲ್ಲ. ಕಲೆಗೆ ಜಾತಿ, ಮತ, ಪಂಥಗಳ ಬೇಲಿಗಳಿಲ್ಲ ಎಂಬುದನ್ನು ಕರಾವಳಿಯ ಯುವತಿಯೊಬ್ಬರು ಸಾಬೀತುಪಡಿಸಿದ್ದಾರೆ.

1. ಯಕ್ಷಗಾನದ ಮೇಲಿನ ಅದಮ್ಯ ಭಕ್ತಿ
2. ನಮ್ಮ ಮನೆಯ ಸುತ್ತಮುತ್ತ ಕಲ್ಲುರ್ಟಿ
3. ನಾನೇ ಮುಂದೆ ನಿಂತು ನೋಡುತ್ತಿದ್ದೆ

ಯಕ್ಷಗಾನ ರಂಗದಲ್ಲಿ ಮುಸ್ಲಿಂ ಸಮುದಾಯದ ಪುರುಷ ಕಲಾವಿದರು ಅಪರೂಪಕ್ಕೊಮ್ಮೆ ಕಾಣಸಿಕ್ಕಿದ್ದರೂ, ಮುಸ್ಲಿಂ ಮಹಿಳೆಯೊಬ್ಬರು ರಂಗಕ್ಕಿಳಿದ ನಿದರ್ಶನವೇ ಇರಲಿಲ್ಲ. ಆದರೆ, ಆ ಎಲ್ಲಾ ಸಾಮಾಜಿಕ ಸಂಕೋಲೆಗಳನ್ನು ಮುರಿದು, ಗೆಜ್ಜೆ ಕಟ್ಟಿ ರಂಗಪ್ರವೇಶ ಮಾಡುವ ಮೂಲಕ ಅರ್ಶಿಯಾ ಖಾನ್ ಕರಾವಳಿಯ ಸಾಂಸ್ಕೃತಿಕ ಇತಿಹಾಸದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ.

ಕರಾವಳಿಯ ಗಂಡುಕಲೆಯ ಆಕರ್ಷಣೆಗೆ ಮಾರುಹೋಗಿ, ಕಟು ನಿಷ್ಠೆಯಿಂದ ಯಕ್ಷಗಾನ ಅಭ್ಯಸಿಸಿರುವ ಅರ್ಶಿಯಾ ಖಾನ್, ಇದೀಗ 'ಸಂಪೂರ್ಣ ಶ್ರೀದೇವಿ ಮಹಾತ್ಮೆ' ಪ್ರಸಂಗದಲ್ಲಿ ಶ್ರೀ ಅಷ್ಟಭುಜಾ ದೇವಿಯ ದೈವಿಕ ವೇಷ ಧರಿಸಿ ರಂಗವೇರಲು ಸಜ್ಜಾಗಿದ್ದಾರೆ.

**ದೈವಾರಾಧನೆ ಮತ್ತು ಯಕ್ಷಗಾನದ ಮೇಲಿನ ಅದಮ್ಯ ಭಕ್ತಿ:** ತಮ್ಮ ಬಾಲ್ಯದ ದಿನಗಳು ಮತ್ತು ಯಕ್ಷಗಾನದ ಮೇಲಿನ ಒಲವಿನ ಕುರಿತು ಮುಕ್ತವಾಗಿ ಮಾತನಾಡಿರುವ ಅರ್ಶಿಯಾ ಖಾನ್, "ನಾನು ಬಾಲ್ಯದಿಂದಲೂ ದೈವಾರಾಧನೆ, ನೇಮ–ಕೋಲಗಳನ್ನು ನೋಡಿ ಬೆಳೆದವಳು. ನಮ್ಮ ಮನೆಯ ಸುತ್ತಮುತ್ತ ಕಲ್ಲುರ್ಟಿ, ಉಳ್ಳಾಲ್ತಿ ಅಮ್ಮನ ಸನ್ನಿಧಿಗಳಿದ್ದವು. ವಾರ್ಷಿಕ ನೇಮೋತ್ಸವಗಳು ನಡೆಯುವಾಗ ನಾನೇ ಮುಂದೆ ನಿಂತು ನೋಡುತ್ತಿದ್ದೆ. ಬಾಲ್ಯದಲ್ಲಿ ಊರಿನಲ್ಲಿ ನಡೆದ ಯಕ್ಷಗಾನದಲ್ಲಿ ಮಹಿಷಾಸುರನ ವೇಷ ನೋಡಿದ ಆ ಕ್ಷಣದಿಂದಲೇ ಯಕ್ಷಗಾನದ ಸೆಳೆತ ನನ್ನಲ್ಲಿ ಆವರಿಸಿತು" ಎಂದು ನೆನಪಿಸಿಕೊಳ್ಳುತ್ತಾರೆ.



ಉದಯವಾಹಿನಿ ಚಿತ್ರ

"ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ ನಾನು ಒಂದು ದಿನ ಯಕ್ಷಗಾನ ಕಲಾವಿದೆಯಾಗುತ್ತೇನೆ ಎಂದು ಕನಸಲ್ಲೂ ಅಂದುಕೊಂಡಿರಲಿಲ್ಲ. ಆದರೆ 'ದೈವೇಚ್ಛೆಗಿಂತ ದೊಡ್ಡದು ಯಾವುದೂ ಇಲ್ಲ'. ನಾನು ಯಕ್ಷಗಾನ ಕಲಿಯಲು ಹೋದಾಗ ಆರಂಭದಲ್ಲಿ ಕಲಿಸಲು ಯಾರೂ ಸುಲಭವಾಗಿ ಮುಂದೆ ಬರಲಿಲ್ಲ, ಅವಕಾಶಗಳೂ ಇರಲಿಲ್ಲ. ಆದರೆ ಕದ್ರಿ ಮಂಜುನಾಥ ಕ್ಷೇತ್ರ ನನ್ನ ಬದುಕನ್ನೇ ಬದಲಿಸಿತು" ಎನ್ನುತ್ತಾರೆ ಅವರು.

**ಕದ್ರಿ ಮಂಜುನಾಥನ ಸನ್ನಿಧಿಯಲ್ಲಿ ಕಲಾಸಾಧನೆ ರಮೇಶ್ ಭಟ್ ಮಾರ್ಗದರ್ಶನ:** ಯಕ್ಷಗಾನ ಕಲಿಯುವ ಹಂಬಲ ಹೊತ್ತ ಅರ್ಶಿಯಾ ಅವರಿಗೆ ಆಸರೆಯಾಗಿದ್ದು ಮಂಗಳೂರಿನ ಐತಿಹಾಸಿಕ ಕದ್ರಿ ಮಂಜುನಾಥ ದೇವಸ್ಥಾನದ ಆವರಣದಲ್ಲಿರುವ 'ಕದಳಿ ಕಲಾ ಕೇಂದ್ರ'. ಅಲ್ಲಿನ ಗುರುಗಳಾದ ರಮೇಶ್ ಭಟ್ ಅವರು ಅರ್ಶಿಯಾ ಅವರ ಕಲಾಸಕ್ತಿಯನ್ನು ಗುರುತಿಸಿ, ಯಾವುದೇ ತಾರತಮ್ಯವಿಲ್ಲದೆ ಹಲವು ವರ್ಷಗಳ ಕಾಲ ಶ್ರದ್ಧೆಯಿಂದ ಹೆಜ್ಜೆಗಾರಿಕೆ, ಮುದ್ರೆ ಹಾಗೂ ಯಕ್ಷಗಾನದ ಪಟ್ಟುಗಳನ್ನು ಧಾರೆ ಎರೆದರು.

### ದೊಡ್ಡ ಆಸೆಯಿದೆ

ಗುರುಗಳ ಬಳಿ ನಾನು ಒಮ್ಮೆ 'ನನಗೂ ದೇವಸ್ಥಾನದ ರಂಗಸ್ಥಳದಲ್ಲಿ ಶ್ರೀದೇವಿಯ ವೇಷ ಕಟ್ಟುವ ದೊಡ್ಡ ಆಸೆಯಿದೆ' ಎಂದು ಹೇಳಿಕೊಂಡೆ. ಅದಕ್ಕೆ ಗುರುಗಳು 'ದೇವಿಯ ವೇಷ ಧರಿಸಬೇಕಾದರೆ ಇಂದಿನಿಂದಲೇ ನೀನು ಕಠಿಣ ವ್ರತ ಕೈಗೊಳ್ಳಬೇಕು,

--------------------

ಮಾಂಸಾಹಾರ ಸಂಪೂರ್ಣ ತ್ಯಜಿಸಬೇಕು, ಶುದ್ಧ ಸಸ್ಯಾಹಾರಿಯಾಗಿದ್ದು ಭಕ್ತಿಯಿಂದ ಸಾಧನೆ ಮಾಡಬೇಕು' ಎಂಬ ಷರತ್ತು ವಿಧಿಸಿದರು. ಕಳೆದ 6–7 ತಿಂಗಳುಗಳಿಂದ ನಾನು ಸಂಪೂರ್ಣ ಮಾಂಸಾಹಾರ ತ್ಯಜಿಸಿ, ನಿಷ್ಠೆಯಿಂದ ವ್ರತ ಆಚರಿಸಿದ್ದೇನೆ

– ಅರ್ಶಿಯಾ

ಗುರುಗಳ ಮಾರ್ಗದರ್ಶನದಲ್ಲಿ ಪಳಗಿದ ಅರ್ಶಿಯಾ, ಆದಿಮಾಯೆ ಸೇರಿದಂತೆ ಹಲವು ವಿಲನ್ ಹಾಗೂ ರಾಕ್ಷಸ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಸೈ ಎನಿಸಿಕೊಂಡಿದ್ದಾರೆ.

**ದೇವಿಯ ವೇಷಕ್ಕಾಗಿ ಕಠಿಣ ವ್ರತಾಚರಣೆ ಮಾಂಸಾಹಾರ ತ್ಯಾಗ:** ಸಾಮಾನ್ಯವಾಗಿ ದೇವಿ ಮಹಾತ್ಮೆಯಂತಹ ಪೌರಾಣಿಕ ಪ್ರಸಂಗಗಳಲ್ಲಿ ತಾಯಿ ಶ್ರೀದೇವಿಯ ವೇಷ ಧರಿಸುವ ಕಲಾವಿದರು ಅತ್ಯಂತ ನಿಷ್ಠೆಯಿಂದ ವ್ರತ ಆಚರಿಸುವ ಸಂಪ್ರದಾಯವಿದೆ. ಇದನ್ನು ಮುಸ್ಲಿಂ ಯುವತಿ ಅರ್ಶಿಯಾ ಖಾನ್ ಅಕ್ಷರಶಃ ಪಾಲಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಗ್ಗೆ | 03:00 ರಿಂದ 04:30 |
| ಗುಳಿಕ ಕಾಲ | ಬೆಳಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಮಧ್ಯಾಹ್ನ | 09:00 ರಿಂದ 10:30 |

**ಮೇಷ**
ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ. ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ಪ್ರೀತಿಯಲ್ಲಿ ನಿರಾಶೆ ನಿಮ್ಮನ್ನು ಕಂಗೆಡಿಸುವುದಿಲ್ಲ.

**ವೃಷಭ**
ಮಕ್ಕಳು ನಿಮ್ಮ ಸಂಜೆಯನ್ನು ಉಲ್ಲಾಸಮಯವಾಗಿಸುತ್ತಾರೆ. ಮಂಕು ಕವಿದ ಮತ್ತು ಒತ್ತಡದ ದಿನಕ್ಕೆ ಮಂಗಳ ಹಾಡಲು ಒಂದು ಸಂತೋಷಕೂಟವನ್ನು ಆಯೋಜಿಸಿ. ಮಕ್ಕಳ ಸಾಂಗತ್ಯ ನಿಮ್ಮ ದೇಹವನ್ನು ಪುನಃಶ್ಚೇತನಗೊಳಿಸುತ್ತದೆ.

**ಮಿಥುನ**
ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ದುರ್ಬಲ ಆರ್ಥಿಕ ಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳಿಸುತ್ತವೆ. ಇಂದು ನೀವು ವಿವಾಹದ ನಿಜವಾದ ಭಾವಪರವಶತೆಯನ್ನು ತಿಳಿಯುತ್ತೀರಿ.

**ಕರ್ಕಾಟಕ**
ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಮನೆಯಲ್ಲಿ ನಿಮ್ಮ ಮಕ್ಕಳು ಅತಿಶಯೋಕ್ತಿಯಿರುವ ಸಂಧರ್ಭದಲ್ಲಿ ನಿಮ್ಮನ್ನು ಸಿಲುಕಿಸುತ್ತಾರೆ. ಆನಂದಮಯ ಪ್ರವಾಸಕ್ಕೆ ಹೋಗುವ ಸಾಧ್ಯತೆ ಇದೆ.

**ಸಿಂಹ**
ಅತಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ. ಪ್ರೇಮಿಯ ಮಾತುಗಳಿಗೆ ನೀವು ತುಂಬ ಸಂವೇದನಾಶೀಲರಾಗಿರುತ್ತೀರಿ.

**ಕನ್ಯಾ**
ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ

**ತುಲಾ**
ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ಜಾಗರೂಕರಾಗಿರಿ.

**ವೃಶ್ಚಿಕ**
ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ಇತರರ ಮೇಲೆ ಪ್ರಭಾವ ಬೀರಲು ತುಂಬಾ ವೆಚ್ಚ ಮಾಡಬೇಡಿ. ಮಕ್ಕಳು ಹೆಚ್ಚಾಗಿ ಹೊರಾಂಗಣ ಚಟುವಟಿಕೆಗಳಲ್ಲೇ ಸಮಯ ಕಳೆಯುವುದರಿಂದ ಅವರು ನಿರಾಸೆ ಉಂಟುಮಾಡಬಹುದು.

**ಧನಸ್ಸು**
ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಸ್ನೇಹಿತರು ಮತ್ತು ಕುಟುಂಬದ ಸದಸ್ಯರು ನಿಮ್ಮ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಾರೆ.

**ಮಕರ**
ನಿಮ್ಮ ಅಪಾರ ವಿಶ್ವಾಸ, ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ಸಂಗಾತಿಯ ಕುಟುಂಬದ ಸದಸ್ಯರ ಅಡ್ಡಿ ಕಾರಣದಿಂದ ನಿಮ್ಮ ದಿನ ಸ್ವಲ್ಪ ಏರುಪೇರಾಗಬಹುದು.

**ಕುಂಭ**
ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲು ಒಂದು ಒಳ್ಳೆಯ ದಿನ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ಇಂದು ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

**ಮೀನ**
ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

## ಜಗದಂಬಾ ದೇವಿಯ ಅದ್ದೂರಿ ಮೆರವಣಿಗೆ

**ಉದಯವಾಹಿನಿ, ಚಿತ್ತಾಪುರ**
ದಸರಾ ಹಬ್ಬದ ಅಂಗವಾಗಿ ಪಟ್ಟಣದ ಸ್ಟೇಷನ್ ತಾಂಡಾದಲ್ಲಿ ಅದ್ದೂರಿಯಾಗಿ ಜಗದಂಬಾ ದೇವಿಯ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.



ಭವ್ಯವಾಗಿ ಅಲಂಕರಿಸಲಾದ ವಾಹನದಲ್ಲಿ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಯುವಕರು, ಮಹಿಳೆಯರು, ಭಕ್ತರು ಹಾಗೂ ಸ್ಥಳೀಯರು ಪಾಲ್ಗೊಂಡು ಹಬ್ಬದ ಸಂಭ್ರಮವನ್ನು ಹೆಚ್ಚಿಸಿದರು. ರಸ್ತೆಯುದ್ದಕ್ಕೂ ಕೇಸರಿ ಧ್ವಜಗಳು ರಾರಾಜಿಸಿದರೆ, ಯುವಕರ ಉತ್ಸಾಹಭರಿತ ನೃತ್ಯ ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು. ಹೂವಿನ ಅಲಂಕಾರದಲ್ಲಿ ಕಂಗೊಳಿಸಿದ ದೇವಿಯ ಮೂರ್ತಿಗೆ ವಿವಿಧ ಬಣ್ಣದ ಹೂವುಗಳು, ಹೂವಿನ ಹಾರಗಳು ಹಾಗೂ ವಿಶೇಷ ಅಲಂಕಾರಗಳಿಂದ ಸಿಂಗರಿಸಲಾಗಿತ್ತು. ಮೆರವಣಿಗೆಯಲ್ಲಿ ಸಾಗಿದ ದೇವಿಯ ದರ್ಶನ ಪಡೆಯಲು ಭಕ್ತರು ಉತ್ಸಾಹದಿಂದ ಮುಗಿಬಿದ್ದರು. ಹಲವರು ಕೈಮುಗಿದು ಪ್ರಾರ್ಥಿಸಿ, ದೇವಿಯ ಆಶೀರ್ವಾದ ಪಡೆದುಕೊಂಡರು. ಮೆರವಣಿಗೆಯ ಸಂದರ್ಭದಲ್ಲಿ ಭಕ್ತಿಗೀತೆಗಳು ಹಾಗೂ ಘೋಷಣೆಗಳೊಂದಿಗೆ ಧಾರ್ಮಿಕ ವಾತಾವರಣ ನಿರ್ಮಾಣವಾಗಿತ್ತು. ಯುವಕರು ಒಗ್ಗಟ್ಟಿನಿಂದ ಮೆರವಣಿ ಗೆಯಲ್ಲಿ ಭಾಗವಹಿಸಿ ದಸರಾ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು. ದಸರಾ ಹಬ್ಬದ ಹಿನ್ನೆಲೆಯಲ್ಲಿ ಸ್ಟೇಷನ್ ಕಾಂಡ ಪ್ರದೇಶದಲ್ಲಿ ಬೆಳಗ್ಗಿನಿಂದಲೇ ಹಬ್ಬದ ವಾತಾವರಣ ಕಂಡುಬಂದಿತ್ತು. ಸಂಜೆ ವೇಳೆಗೆ ಮೆರವಣಿಗೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರಿಂದ ಇಡೀ ಪ್ರದೇಶ ಕಳೆಗಟ್ಟಿತ್ತು.

## ಉತ್ಸವ ಆರಂಭ–ಶಾಸಕ ಚವ್ಹಾಣ ವಿಶೇಷ ಪೂಜೆ

**ಉದಯವಾಹಿನಿ, ಬೀದರ**
ನವರಾತ್ರಿ ಉತ್ಸವದ ಮೊದಲ ದಿನವಾದ ಭಾನುವಾರ ಔರಾದ(ಬಿ) ಶಾಸಕರು ಹಾಗೂ ಮಾಜಿ ಸಚಿವರಾದ ಪ್ರಭು ಬಿ.ಚವ್ಹಾಣ ಅವರು ತಮ್ಮ ಸ್ವಗ್ರಾಮ ಬೋಂತಿ ತಾಂಡಾದಲ್ಲಿರುವ ಇಚ್ಛಾಪೂರ್ತಿ ಮಾತಾ ಜಗದಂಬಾ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ರೈತರ ಏಳಿಗೆ, ನಾಡಿನ ಸುಖ, ಶಾಂತಿ, ಸಮೃದ್ಧಿ ಹಾಗೂ ಜನರ ಒಳಿತಿಗಾಗಿ ಪ್ರಾರ್ಥಿಸಿದರು. ಇಚ್ಛಾಪೂರ್ತಿ ಮಾತಾ ಜಗದಂಬಾ ದೇವಿಯ ಪರಮ ಭಕ್ತರಾಗಿರುವ ಶಾಸಕರು ಪ್ರತಿ ವರ್ಷ ನವರಾತ್ರಿ ಉತ್ಸವವನ್ನು ಅತ್ಯಂತ ಭಕ್ತಿ, ಶ್ರದ್ಧೆ ಹಾಗೂ ವೈಭವದಿಂದ ಆಚರಿಸುತ್ತಾರೆ. ನವರಾತ್ರಿ ಉತ್ಸವ ಮುಕ್ತಾಯವಾಗುವವರೆಗೆ ಒಂಬತ್ತು ದಿನಗಳ ಕಾಲ ಸ್ವಗ್ರಾಮ ಬೋಂತಿ ತಾಂಡಾದಲ್ಲಿಯೇ ವಾಸ್ತವ್ಯ ಹೂಡಿ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ದೇವಿಗೆ ವಿಶೇಷ ಪೂಜೆ, ಅರ್ಚನೆ ಹಾಗೂ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸುತ್ತಾರೆ. ಉತ್ಸವದ ಮೊದಲ ದಿನ ಕುಟುಂಬ ಸಮೇತರಾಗಿ ಪೂಜೆಯಲ್ಲಿ ಪಾಲ್ಗೊಂಡ ಅವರು, ಗ್ರಾಮದ ಮಾತಾ ಜಗದಂಬಾ ದೇವಿ, ಸಂತ ಸೇವಾಲಾಲ್ ಮಹಾರಾಜರು ಹಾಗೂ ರಾಮರಾವ ಮಹಾರಾಜರ ದೇವಸ್ಥಾನಗಳಲ್ಲಿ ಪೂಜೆ, ಅರ್ಚನೆ ಮತ್ತು ಅಭಿಷೇಕ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಮ್ಮ ಕುಲದೇವತೆಯಾಗಿರುವ ಇಚ್ಛಾಪೂರ್ತಿ ಮಾತಾ ಜಗದಂಬಾ ದೇವಿಯ ಶಕ್ತಿ ಅಪಾರ. ದೇವಿಯ ಮೊರೆ ಹೋಗುವ ಭಕ್ತರ ಕಷ್ಟಗಳು ದೂರವಾಗುತ್ತವೆ. ಬದುಕಿನಲ್ಲಿ ನೆಮ್ಮದಿ ದೊರೆಯುತ್ತದೆ. ಮಾತೆಯ ಕೃಪೆ ಮತ್ತು ಜನತೆಯ ಆಶೀರ್ವಾದದಿಂದಲೇ ನಾನು ಜನಸೇವೆಯನ್ನು ಉತ್ತಮವಾಗಿ ಮಾಡಲು ಸಾಧ್ಯವಾಗಿದೆ. ಮುಂದೆಯೂ ದೇವಿಯ ಆಶೀರ್ವಾದದೊಂದಿಗೆ ಜನರ ಸೇವೆಗೆ ನನ್ನನ್ನು ಸಮರ್ಪಿಸಿಕೊಳ್ಳುತ್ತೇನೆ ಎಂದು ತಮ್ಮ ಭಕ್ತಿಭಾವವನ್ನು ವ್ಯಕ್ತಪಡಿಸಿದರು.

### ಕಬ್ಬು ಬೆಳೆಗಾರರ ಸಭೆಯಲ್ಲಿ ಕಬ್ಬಿಗೆ ಸೂಕ್ತ ಬೆಲೆ ನಿಗದಿಯಾಗದಿದ್ದರೆ ನಾಳೆ ರಾಜ್ಯದಾದ್ಯಂತ ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡಲಾಗುವುದು

# ಸಕ್ಕರೆಗೆ ಎಂಎಸ್‌ಪಿ 60 ರೂ.ಗೆ ಹೆಚ್ಚಿಸದಿದ್ದರೆ ನಾಳೆ ರಾಷ್ಟ್ರೀಯ ಹೆದ್ದಾರಿ ಬಂದ್

**ಉದಯವಾಹಿನಿ, ಬೆಳಗಾವಿ**
ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ಕಬ್ಬಿಗೆ ಸೂಕ್ತ ಬೆಲೆ ನಿಗದಿಯಾಗದಿದ್ದರೆ, ಅಕ್ಟೋಬರ್ 13 ರಂದು ರಾಜ್ಯದಾದ್ಯಂತ ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡುವುದು ನಿಶ್ಚಿತ. ಇದಕ್ಕಾಗಿ ಲಕ್ಷಾಂತರ ರೈತರು, ಯುವಕರು, ಮಾಜಿ ಸೈನಿಕರು, ವಕೀಲರು ಮತ್ತು ಕನ್ನಡಪರ ಸಂಘಟನೆಗಳು ಸನ್ನದ್ಧರಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

1. ಕಬ್ಬು ಬೆಳೆಗಾರರ ಸಭೆ ನಿಗದಿಯಾಗಿದೆ
2. 30–40 ರೈತ ಮುಖಂಡರು ತೆರಳುತ್ತಿದ್ದಾರೆ
3. ಹುಬ್ಬಳ್ಳಿಯಲ್ಲಿ ಸೇರಿದ 5 ಲಕ್ಷ ರೈತರು

ಅವರು ಬೆಳಗಾವಿ ನಗರದ ಸಾಮ್ರಾ ವಿಮಾನ ನಿಲ್ದಾಣದಲ್ಲಿ, ಕೇಂದ್ರ ಸರ್ಕಾರದ ಜೊತೆಗೆ ಮಾತುಕತೆಗೆ ರೈತರನ್ನು ಕಳುಹಿಸಿ ನಂತರ ಮಾಧ್ಯಮಗಳ ಜೊತೆ ಮಾತನಾಡಿ, "ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮತ್ತು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ದೆಹಲಿಯ ಕೃಷಿ ಭವನದಲ್ಲಿ ಇಂದು (ಮಧ್ಯಾಹ್ನ 3 ಗಂಟೆಗೆ) ಕಬ್ಬು ಬೆಳೆಗಾರರ ಸಭೆ ನಿಗದಿಯಾಗಿದೆ. ಮುಂದಿನ ಹೋರಾಟದ ಸಿದ್ಧತೆಗಳಿಗಾಗಿ ತಾವು ದೆಹಲಿಗೆ ತೆರಳದೆ ರಾಜ್ಯದಲ್ಲೇ ಉಳಿದಿರುವುದಾಗಿ" ಸ್ಪಷ್ಟಪಡಿಸಿದ್ದಾರೆ.

"ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ದೆಹಲಿಯಲ್ಲಿ ಕರೆದಿರುವ ಸಭೆಗೆ ರಾಜ್ಯದ ವಿವಿಧ ಭಾಗಗಳಿಂದ 30–40 ರೈತ ಮುಖಂಡರು ತೆರಳುತ್ತಿದ್ದಾರೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಸೇರಿದ 5 ಲಕ್ಷ ರೈತರು ಆಗ್ರಹಿಸಿದಂತೆ, ಸಕ್ಕರೆಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಡ್ಡಾಯವಾಗಿ 60 ರೂಪಾಯಿ ಹೆಚ್ಚಿಸಲೇಬೇಕು. ಜೊತೆಗೆ ಇಥೆನಾಲ್ ಅನ್ನು ಸಂಪೂರ್ಣವಾಗಿ ಖರೀದಿಸಬೇಕು, ವಾಣಿಜ್ಯ ಬಳಕೆಯ ಸಕ್ಕರೆಗೆ 100 ರೂ. ನಿಗದಿಪಡಿಸಬೇಕು ಮತ್ತು ಸ್ವಾಮಿನಾಥನ್ ವರದಿ ಜಾರಿಯ ಕುರಿತು ಚರ್ಚೆಯಾಗಬೇಕು" ಎಂದು ಆಗ್ರಹಿಸಿದ್ದಾರೆ.



ಉದಯವಾಹಿನಿ ಚಿತ್ರ

"ಒಂದು ವೇಳೆ ಈ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರ ಹಿಂದೇಟು ಹಾಕಿದರೆ, ನಾಳೆಯೇ (ಅ.13) ಕರ್ನಾಟಕ ಮತ್ತು ಮಹಾರಾಷ್ಟ್ರ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡಲಾಗುವುದು. ಇದಕ್ಕಾಗಿ ಈಗಾಗಲೇ ಕೋಟ್ಯಂತರ ರೈತರು, ಯುವಕರು, ಮಾಜಿ ಸೈನಿಕರು, ವಕೀಲರು ಹಾಗೂ ಕನ್ನಡಪರ ಸಂಘಟನೆಗಳು ಪಕ್ಷಾತೀತವಾಗಿ ಸಿದ್ಧವಾಗಿವೆ. ಕೇಂದ್ರ ಸರ್ಕಾರ ಕಳೆದ 10 ವರ್ಷಗಳಿಂದ ಎಂಎಸ್‌ಪಿ ಹೆಚ್ಚಿಸದೆ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಪೆಟ್ರೋಲ್, ಡೀಸೆಲ್ ಮತ್ತು ರಸಗೊಬ್ಬರಗಳ ಬೆಲೆ ಮೂರು ಪಟ್ಟು ಹೆಚ್ಚಾಗಿದೆ, ಆದರೆ ಕಬ್ಬಿಗೆ ಮಾತ್ರ ಸೂಕ್ತ ಬೆಲೆ ಸಿಗುತ್ತಿಲ್ಲ. ರೈತರು ಯುದ್ಧಕ್ಕೆ ಸಿದ್ಧರಾಗಿದ್ದಾರೆ" ಎಂದು ಗುಡುಗಿದ್ದಾರೆ.

ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಿಶನ್ ನಂದಿ ಅವರು ದೆಹಲಿಗೆ ತೆರಳುವ ಮುನ್ನ ಮಾತನಾಡಿ, "ಸಕ್ಕರೆ ಎಂಎಸ್‌ಪಿ 60 ರೂ. ಆದರೆ ಮಾತ್ರ ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ 5,500 ರೂ. ಬೆಲೆ ಸಿಗಲು ಸಾಧ್ಯ. ಉತ್ತರ ಪ್ರದೇಶ ಮತ್ತು ಗುಜರಾತ್ ಮಾದರಿಯಲ್ಲಿ ನಮ್ಮ ರಾಜ್ಯಕ್ಕೂ ಇಥೆನಾಲ್ ಖರೀದಿಗೆ ಶೇ. 100ರಷ್ಟು ಅವಕಾಶ ನೀಡಬೇಕು. ಬರ ಮತ್ತು ಪ್ರವಾಹದಿಂದ ರೈತರು ಕಂಗೆಟ್ಟಿದ್ದು, ಸಾಲಬಾಧೆಯಿಂದಾಗಿ ಆತ್ಮಹತ್ಯೆಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಹೀಗಾಗಿ ಕೇಂದ್ರ ಸರ್ಕಾರ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು" ಎಂದು ಆಗ್ರಹಿಸಿದ್ದಾರೆ.

**ರೈತಪರ ನಿರ್ಧಾರದ ವಿಶ್ವಾಸ**
ದೇಶದ 145 ಕೋಟಿ ಜನರಿಗೆ ಸಿಹಿ ಉಣಿಸುವ ಕಬ್ಬು ಬೆಳೆಗಾರರು ಉಳಿಯಬೇಕಾದರೆ ರಾಷ್ಟ್ರೀಯ ಸಕ್ಕರೆ ನೀತಿ ಜಾರಿಗೆ ಬರಬೇಕು. ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆ ಎಂದು ಸಕ್ಕರೆಯನ್ನು ವಿಂಗಡಿಸಬೇಕು. ಇಂದಿನ ಸಭೆಯಲ್ಲಿ ರೈತಪರ ನಿರ್ಧಾರ ಬರುವ ವಿಶ್ವಾಸವಿದೆ.

ಒಂದು ವೇಳೆ ಸರ್ಕಾರ ಸ್ಪಂದಿಸದಿದ್ದರೆ, ಮಹಾರಾಷ್ಟ್ರ, ಗೋವಾ, ತಮಿಳುನಾಡು ಮತ್ತು ಕೇರಳ ಗಡಿಗಳಿಗೆ ಸಂಪರ್ಕಿಸುವ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪೂರ್ಣವಾಗಿ ಬಂದ್ ಮಾಡಲಾಗುವುದು. ನಾವು ಪ್ರಾಣ ಕೊಡಲೂ ಸಿದ್ಧರಿದ್ದೇವೆ, ಆದರೆ ಬೆಲೆ ನಿಗದಿಯಾಗುವವರೆಗೂ ಹೆದ್ದಾರಿಯಿಂದ ಕದಲುವುದಿಲ್ಲ.
– ಚೂನಪ್ಪ ಪೂಜಾರಿ, ರಾಜ್ಯಾಧ್ಯಕ್ಷ

## ಮಂಗಳೂರು ಕ್ರಿಕೆಟ್ ಕ್ರೀಡಾಂಗಣಕ್ಕೆ 50 ಎಕರೆ ಜಮೀನು



ಉದಯವಾಹಿನಿ ಚಿತ್ರ

**ಉದಯವಾಹಿನಿ, ಮಂಗಳೂರು**
ಕರಾವಳಿ ನಗರಿ ಮಂಗಳೂರಿನಲ್ಲಿ ಸುಸಜ್ಜಿತ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಹಾಗೂ ಮೂಲಸೌಕರ್ಯ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸುಮಾರು 50 ಎಕರೆ ಸರ್ಕಾರಿ ಜಮೀನು ಕೋರಿದೆ. ಈ ಹಿನ್ನೆಲೆಯಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಅವರು ಮಂಗಳೂರು ಮತ್ತು ಸುತ್ತಮುತ್ತಲಿನ ಆರು ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೆಎಸ್‌ಸಿಎ ಮನವಿಯ ಮೇರೆಗೆ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಅವರು ತಣ್ಣೀರುಬಾವಿ, ಬೆಂಗ್ರೆ, ಬೊಂದೇಲ್, ಮುಳೂರು, ಕಂದಾವರ ಮತ್ತು ಕುಡುಪು ಸ್ಥಳಗಳಿಗೆ ಭೇಟಿ ನೀಡಿದರು. ಪ್ರಸ್ತಾವಿತ ಕ್ರೀಡಾಂಗಣಕ್ಕೆ ಈ ಸ್ಥಳಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದು ಮತ್ತು ಸ್ಥಳೀಯ ಕ್ರಿಕೆಟ್‌ಪಟುಗಳಿಗೆ ಉತ್ತಮ ಸೌಲಭ್ಯ ಒದಗಿಸುವ ಮೂಲಕ ಕ್ರೀಡಾ ಮೂಲಸೌಕರ್ಯವನ್ನು ಬಲಪಡಿಸುವುದು ಈ ಪರಿಶೀಲನೆಯ ಮುಖ್ಯ ಉದ್ದೇಶವಾಗಿತ್ತು.

"ಪ್ರಸ್ತಾವಿತ ಕ್ರೀಡಾಂಗಣವು ಈ ಭಾಗದ ಕ್ರಿಕೆಟ್‌ಗೆ ಮಹತ್ತರ ಉತ್ತೇಜನ ನೀಡಲಿದ್ದು, ಕ್ರೀಡಾ ಮೂಲಸೌಕರ್ಯದ ಒಟ್ಟಾರೆ ಅಭಿವೃದ್ಧಿಗೆ ಕೊಡುಗೆ ನೀಡಲಿದೆ" ಎಂದು ಸಂತೋಷ್ ಕುಮಾರ್ ಶೆಟ್ಟಿ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಕ್ರಿಕೆಟ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಹಾಗೂ ಸೂಕ್ತ ಸ್ಥಳಗಳನ್ನು ಗುರುತಿಸುವ ಕುರಿತು ಮುಡಾ ಮತ್ತು ಕೆಎಸ್‌ಸಿಎ ಆಡಳಿತ ಮಂಡಳಿ ನಡುವೆ ನಡೆದ ಚರ್ಚೆಯ ಬೆನ್ನಲ್ಲೇ ಈ ಸ್ಥಳ ಪರಿಶೀಲನೆ ನಡೆದಿದೆ.

ಕೆಎಸ್‌ಸಿಎ ಅಧ್ಯಕ್ಷ ಹಾಗೂ ಮಾಜಿ ಕ್ರಿಕೆಟ್‌ಪಟು ವೆಂಕಟೇಶ್ ಪ್ರಸಾದ್ ಅವರು ಮುಡಾ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಸುಮಾರು 50 ಎಕರೆ ಸರ್ಕಾರಿ ಜಮೀನನ್ನು ನೇರ ಖರೀದಿ ಅಥವಾ 50 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಕೆಎಸ್‌ಸಿಎಗೆ ಮಂಜೂರು ಮಾಡುವಂತೆ ಅವರು ವಿನಂತಿಸಿದ್ದಾರೆ.

## ಚಂಡಿಕೇಶ್ವರಿ ಕ್ಷೇತ್ರದಲ್ಲಿ ಅದ್ದೂರಿ ಶರನ್ನ ನವರಾತ್ರಿ ಪೂಜೆ

**ಉದಯವಾಹಿನಿ, ಶಿವಮೊಗ್ಗ**
ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಶ್ರೀ ಕ್ಷೇತ್ರ ಶ್ರೀಹಲಸೆ ಚಂಡಿಕೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ದಿನಾಂಕ 11.10.2026 ನೇ ಭಾನುವಾರದಿಂದ 20. 10. 2026 ನೇ ಮಂಗಳವಾರದವರೆಗೆ ಶರನ್ನ ನವರಾತ್ರಿ ಮಹೋತ್ಸವವನ್ನು ನಡೆಸಲಾಗುತ್ತಿದ್ದು ಪ್ರತಿನಿತ್ಯ ನವರಾತ್ರಿ ಪ್ರಯುಕ್ತ ಅಮ್ಮನವರಿಗೆ ಪಂಚಾಮೃತ ಅಭಿಷೇಕ ಮಹಾಪೂಜೆ. ಶ್ರೀ ಚಂಡಿಕಾ ಹೋಮ ಶ್ರೀ ದುರ್ಗಾ ಹೋಮ ಶ್ರೀ ನವಗ್ರಹ ಹೋಮ ಶ್ರೀ ಗಣ ಹೋಮ. ಚಂಡಿಕಾ ಪಾರಾಯಣ ಲಲಿತ ಸಹಸ್ರನಾಮ ನಂತರ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದ್ದು ದಿನಾಂಕ 16 10.26 ನೇ ಶುಕ್ರವಾರ ಸರಸ್ವತಿ ಪೂಜೆ ಅಕ್ಷರಾಭ್ಯಾಸ ದಿನಾಂಕ 18 10.26 ನೇ ಭಾನುವಾರ ದುರ್ಗಾಷ್ಟಮಿಯ ಪ್ರಯುಕ್ತ ಅಮ್ಮನವರಿಗೆ ಉಡಿತುಂಬುವ ಪೂಜೆ ದಿನಾಂಕ 20.10.2026ನೇ ಮಂಗಳವಾರ ವಿಜಯದಶಮಿಯ ದಿನಾಚರಣೆ 5 ಗಂಟೆಯಿಂದ ಪಲ್ಲಕ್ಕಿ ಉತ್ಸವ ಮತ್ತು ಭಜನೆ ಸೇರಿದಂತೆ ಮಹಾಪೂಜೆ ಹಾಗೂ ಪ್ರಸಾದ ವಿನಿಯೋಗ ವಿರುತ್ತದೆ ಹಾಗೂ ಮಕ್ಕಳಿಗೆ ಅಕ್ಷರ ಅಭ್ಯಾಸವನ್ನು ಮಾಡಿಸುವವರು ಮುಂಚಿತವಾಗಿ ಭೇಟಿ ನೀಡಿ ವಿಚಾರಿಸುತಕದ್ದು ಹಾಗೂ ಗೃಹಿಣಿಯರು ಅಮ್ಮನವರಿಗೆ ಉಡಿತುಂಬಲು ಅರಸಿನ ಕುಂಕುಮ ಕಣ ಬಟ್ಟೆ ಬಳೆ ಅಕ್ಕಿ ಕಾಯಿ, ಬೆಲ್ಲ ತರಕಾರಿ ತರುವುದು ಎಂದು ಚಂಡಿಕೇಶ್ವರಿ ದೇವಾಲಯ ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ



ಉದಯವಾಹಿನಿ ಚಿತ್ರ



ಉದಯವಾಹಿನಿ ಚಿತ್ರ

## ದಾಖಲೆಯಿಲ್ಲದೆ ಸಾಗಿಸುತ್ತಿದ್ದ 24 ಸಾವಿರ ಲೀಟರ್ ಮದ್ಯ ವಶಕ್ಕೆ, FIR ದಾಖಲು..!

**ಉದಯವಾಹಿನಿ, ಬೆಳಗಾವಿ**
ರಾಜ್ಯದಲ್ಲಿ ಅಕ್ರಮ ಮದ್ಯ ಸಾಗಾಟದ ವಿರುದ್ಧ ಅಬಕಾರಿ ಇಲಾಖೆ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಬರೋಬ್ಬರಿ 24,000 ಲೀಟರ್ ಅಕ್ರಮ ಮದ್ಯ ತುಂಬಿದ್ದ ಭರತ್‌ಬೆಂಜ್ ಟ್ಯಾಂಕರ್ ಅನ್ನು ಬೆಳಗಾವಿ ಜಿಲ್ಲೆಯ ಎಂ.ಕೆ. ಹುಬ್ಬಳ್ಳಿ ಪಟ್ಟಣದ ಸಮೀಪ ಜಪ್ತಿ ಮಾಡಿದ್ದಾರೆ. ವಶಪಡಿಸಿಕೊಂಡ ಟ್ಯಾಂಕರ್ ಮತ್ತು ಮದ್ಯದ ಒಟ್ಟು ಮೌಲ್ಯ 32.40 ಲಕ್ಷ ರೂ. ಎಂದು ಅಂದಾಜಿಸಲಾಗಿದೆ.

ಅಬಕಾರಿ ಇಲಾಖೆ ನೀಡಿದ ಮಾಹಿತಿಯ ಪ್ರಕಾರ, ಮಧ್ಯರಾತ್ರಿ ಸುಮಾರು 12.25ಕ್ಕೆ ಹೊಳಿಹೊಸೂರು ಗ್ರಾಮದಿಂದ ಎಂ.ಕೆ. ಹುಬ್ಬಳ್ಳಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಲ್ಲಿ ಗಸ್ತು ತಿರುಗುತ್ತಿದ್ದ ಅಧಿಕಾರಿಗಳು ಈ ಕಾರ್ಯಾಚರಣೆ ನಡೆಸಿದ್ದಾರೆ.

ಈ ವೇಳೆ ಕೆಎ–25–ಎಎ–3750 ನೋಂದಣಿ ಸಂಖ್ಯೆಯ ಭಾರತ್‌ಬೆನ್ಜ್ ಟ್ಯಾಂಕರ್ ಅನ್ನು ತಡೆದು ಪರಿಶೀಲಿಸಿದಾಗ, ಅದರಲ್ಲಿ ಅಕ್ರಮವಾಗಿ ಮದ್ಯ ಸಾಗಿಸುತ್ತಿರುವುದು ಪತ್ತೆಯಾಗಿದೆ. ಇದರ ಬೆನ್ನಲ್ಲೇ ವಿಜಯಪುರ ಜಿಲ್ಲೆಯ ಬೋಳಚಿಕ್ಕಲಕಿ ಗ್ರಾಮದ ನಿವಾಸಿ, ಟ್ಯಾಂಕರ್ ಚಾಲಕ ಬಂಡೆನವಾಜ್ ನಬಿ ಸಾಬ್ ತಿಗಣಿಬಿದರಿ ಅವರಿಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್), 2023ರ ಸೆಕ್ಷನ್ 35(3)ರ ಅಡಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ. ವಾಹನದ ಮಾಲೀಕರ ವಿರುದ್ಧವೂ ಪ್ರಕರಣ ದಾಖಲಿಸಲಾಗಿದ್ದು, ಪ್ರಥಮ ಮಾಹಿತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಭಕ್ತಿ, ಶ್ರದ್ಧೆಯಿಂದ ದುರ್ಗಾ ದೌಡ್ ಪಥಸಂಚಲನ

**ಉದಯವಾಹಿನಿ, ಬೀದರ್**
ಶ್ರೀ ಶಿವ ಪ್ರತಿಷ್ಠಾನ ಹಿಂದೂಸ್ತಾನ ವತಿಯಿಂದ ನವರಾತ್ರಿ ಮಹೋತ್ಸವದ ಅಂಗವಾಗಿ ನಗರದಲ್ಲಿ ದುರ್ಗಾ ದೌಡ್ ಪಥಸಂಚಲನ ಭಕ್ತಿ, ಶ್ರದ್ಧೆಯಿಂದ ಜರುಗಿತು. ಜೆಸ್ಕಾಂ ಕಚೇರಿ ಬಳಿಯ ಶ್ರೀ ಹನುಮಾನ ಮಂದಿರದಿಂದ ಆರಂಭವಾದ ಪಥಸಂಚಲನವು ಶಿವ ಮಂದಿರ, ರಾಘವೇಂದ್ರ ಮಂದಿರ, ಗಣೇಶ ಮೈದಾನ, ಶಿವಾಜಿ ವೃತ್ತ, ರೈಲ್ವೆ ನಿಲ್ದಾಣದ ಹನುಮಾನ ದೇವಸ್ಥಾನ ಮಾರ್ಗವಾಗಿ ಮೋಹನ ಮಾರ್ಕೆಟ್‌ನ ಶ್ರೀ ಪಾಂಡುರಂಗ ಮಂದಿರದಲ್ಲಿ ಸಮಾಪ್ತಿಗೊಂಡಿತು. ಮಾರ್ಗದುದ್ದಕ್ಕೂ ಸಾರ್ವಜನಿಕರು ಹೂವಿನ ಮಳೆಗರೆದು ಸ್ವಾಗತಿಸಿದರು. ಸಂಭಾಜಿರಾವ ಭೀಡೆ ಗುರೂಜಿ ಅವರ ಮಾರ್ಗದರ್ಶನದಲ್ಲಿ ಪ್ರತಾಪಸಿಂಹ ಸಾಳೊಂಖೆ ಹಾಗೂ ವಿಠಲರಾವ ಸಾಟೆ ನೇತೃತ್ವದಲ್ಲಿ ನಡೆದ ಪಥಸಂಚಲನದಲ್ಲಿ ನೂರಾರು ಜನರು ಬಿಳಿ ಬಟ್ಟೆ, ಬಿಳಿ ಟೋಪಿ ಹಾಗೂ ಕೇಸರಿ ಶಾಲು ಧರಿಸಿ, ಭಗವಾಧ್ವಜ ಹಿಡಿದು ಶಿಸ್ತಿನಿಂದ ಸಾಗಿದರು. 'ಜೈ ಭಾರತ ಮಾತಾ ಕೀ', 'ಜೈ ಭವಾನಿ, ಜೈ ಶಿವಾಜಿ' ಘೋಷಣೆಗಳು ಮೊಳಗಿದವು. ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ವೀರಶೆಟ್ಟಿ ಖ್ಯಾಮಾ, ಅಮಿತ್ ಚಿಂಚೋಳಿ, ಕೃಷ್ಣ ಮಹಾರಾಜ್, ರವಿಕಿರಣ ಹೊನ್ನಾ, ಗೋರಖನಾಥ ಗೌಳಿ, ಶಿವಜಿರಾವ ಬಾಚೆಪಳ್ಳಿ, ಶಂಕರ ಖ್ಯಾಮಾ, ಅನುರಾಗ್, ಮಹಾದೇವ ಪಾಟೀಲ್, ವಿಶ್ವನಾಥ ಉಪ್ಪೆ, ಗುರುನಾಥ ಹಾಗೂ ಮಚೇಂದ್ರ ಸೇರಿದಂತೆ ಹಲವರು ಭಾಗವಹಿಸಿದ್ದರು. ನವರಾತ್ರಿ ಅಂಗವಾಗಿ ನಗರದಲ್ಲಿ ಒಂಬತ್ತು ದಿನಗಳ ಕಾಲ ವಿವಿಧ ಸ್ಥಳಗಳಿಂದ ದುರ್ಗಾ ದೌಡ್ ಆಯೋಜಿಸಲಾಗುತ್ತಿದೆ.



## ಜನರೊಂದಿಗೆ ಧರಣಿ ಕುಳಿತ ಪ್ರಭಂಜನ್

**ಉದಯವಾಹಿನಿ, ಬಳ್ಳಾರಿ**
ತಮ್ಮನ್ನು ಪಾಲಿಕೆ ಸದಸ್ಯನನ್ನಾಗಿ ಆಯ್ಕೆ ಮಾಡಿದ 3 ವಾರ್ಡಿನ ಜನರ ದಿನ ನಿತ್ಯದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕೆಂದು ವಾರ್ಡಿನ ಜನರೊಂದಿಗೆ ಕಾರ್ಪೊರೇಟರ್ ಎಂ.ಪ್ರಭಂಜನ್ ಕುಮಾರ್ ಬೆಂಗಳೂರು ರಸ್ತೆ ಬಂದ್ ಮಾಡಿ ಧರಣಿ ನಡೆಸಿದರು.

ತಮ್ಮದೇ ಪಕ್ಷದ ಆಡಳಿತವಿರುವ ಮಹಾ ನಗರ ಪಾಲಿಕೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅನೇಕ ಬಾರಿ ಈ ಬಗ್ಗೆ ಸಾಮಾನ್ಯ ಸಭೆಯಲ್ಲಿ ಗಮನಕ್ಕೆ ತಂದರೂ ಪ್ರಯೋಜನೆಯಾಗಿಲ್ಲ. ವಾರ್ಡಿನ ಜನತೆ ದಿನ ನಿತ್ಯ ಸಮಸ್ಯೆ ಎದುರಿಸಬೇಕಿದೆ. ಅದಕ್ಕಾಗಿ ಅನಿವಾರ್ಯವಾಗಿ ರಸ್ತೆ ಬಂದ್ ಮಾಡಿ ಪ್ರತಿಭಟನೆಗೆ ಇಳಿಯಬೇಕಾಯ್ತು ಎಂದು ಪಾಲಿಕೆ ಸದಸ್ಯ ಪ್ರಭಂಜನ್ ಕುಮಾರ್ ಹೇಳಿದರು. ಶುದ್ದ ನೀರು ಬರುತ್ತಿಲ್ಲ. ಕಲುಷಿತ ನಿಒರು ಕುಡಿದು ಜನ ರೋಗಗಳಿಂದ ನರಳುವಂತಾಗಿದೆ. ಅವು ಸಹ ಸಮರ್ಪಕವಾಗಿ ಬರುತ್ತಿಲ್ಲ ಆರು ದಿನಗಳಿಗೆ ಒಮ್ಮೆ ಎಂದರೂ ಬರುವುದಿಲ್ಲ. ರಾಜಕಾಲಯಚೆಗಳ ಸ್ವಚ್ಚತೆಯನ್ನು ಮಾಡದೇ ಇರುವ ಕಾರಣ ಸೊಳ್ಳೆಗಳ ಕಾಟ ಹೆಚ್ಚಿದೆ. ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡಿದ್ದರೂ ಅದರ ಮೂಲಕ ನೀರು ಸರಬರಾಜು ಮಾಡಲು ಉಳಿದಿರುವ ಸಣ್ಣ ಪುಟ್ಟ ಕಾಮಗಾರಿ ಮುಗಿಸಿಲ್ಲ.ಎಂ.ಜಿ.ಎನ್. ವೈ ಸೇರಿದಂತೆ ಆರಂಭಿಸಿದ ಕಾಮಗಾರಿಗಳು ಆಮೆಗತಿಯಲ್ಲಿ ನಡೆಯುತ್ತಿವೆ. ವಿಧವಾ ಮತ್ತು ವೃದ್ಯಾಪ್ಯವೇತನ ಬರುತ್ತಿಲ್ಲ ಸೇರಿದಂತೆ ಅನೇಕ ಸಮಸ್ಯೆಗಳ ಪತಿಹರಿಸಲು ಆಗ್ರಹಿಸಿ ಪಾಲಿಕೆ ವಿರುದ್ದ ಘೋಷಣೆ ಕೂಗಿದರು. ಸ್ಥಳಕ್ಕೆ ಆಗಮಿಸಿದ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಮತ್ತಿತರ ಅಧಿಕಾರಿಗಳು ಸಮಸ್ಯೆಗಳನ್ನು ಆಲಿಸಿ ರಾಜ ಕಾಲುವೆ ಕ್ಲೀನಿಂಗ್ ಆಗಿಲ್ಲ ಒಂದು ತಿಂಗಳಲ್ಲಿ ಮಾಡಲಿದೆ.



ಉದಯವಾಹಿನಿ ಚಿತ್ರ

### ಚಾಲನೆ ನೀಡುವ ವೇಳೆ ಪಾಲಿಕೆ ವತಿಯಿಂದ ವಂದೇ ಮಾತರಂನ ಎರಡು ಚರಣದ ರೆಕಾರ್ಡಿಂಗ್ ಮುಗಿದ ನಂತರ ಬಿಜೆಪಿ ನಾಯಕರು ಪೂರ್ಣವಾಗಿ ಹಾಡಿದರು

# ಮಲೆನಾಡಿನ ದಸರಾ ಉದ್ಘಾಟಿಸಿದ ನಟ ಶ್ರೀನಾಥ್ ವಂದೇ ಮಾತರಂ ಗೊಂದಲ

**ಉದಯವಾಹಿನಿ, ಶಿವಮೊಗ್ಗ**
ಮಲೆನಾಡ ದಸರಾಗೆ ಭಾನುವಾರ ಭಕ್ತಿಪೂರ್ವಕವಾದ ಚಾಲನೆ ದೊರೆತಿದೆ. ಕನ್ನಡ ಚಿತ್ರರಂಗದ ಪ್ರಯಣರಾಜ, ನಟ ಶ್ರೀನಾಥ್ ಅವರು ಶಿವಮೊಗ್ಗ ಮಹಾನಗರ ಪಾಲಿಕೆಯ ದಸರಾಗೆ ಚಾಲನೆ ನೀಡಿದರು.

1. ದಸರಾ ನೋಡಬೇಕು ಎಂಬ ಆಸೆ ಇತ್ತು
2. ಏನಂದ್ರಿ ಇನ್ನೊಮ್ಮೆ ಹೇಳಿ' ಎಂದೆ
3. ನನ್ನ ಯಾತ್ರೆ ನೋಡಲು 'ನೀನು ಬಾ

ನಗರದ ಚಂಡಿಕಾ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಯ ಮುಂದೆ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಯಿತು. ಇದಕ್ಕೂ ಮುನ್ನ ತಾಯಿ ಚಾಮುಂಡೇಶ್ವರಿ ಮೂರ್ತಿಗೆ ಮಹಾನಗರ ಪಾಲಿಕೆಯಿಂದ ಪೂಜೆ ಸಲ್ಲಿಸಿ, ಮೆರವಣಿಗೆಯ ಮೂಲಕ ಚಂಡಿಕಾದುರ್ಗಾಪರಮೇಶ್ವರಿ ದೇವಾಲಯಕ್ಕೆ ತರಲಾಗಿದೆ.

ಶಿವಮೊಗ್ಗ ದಸರಾಕ್ಕೆ ಚಾಲನೆ ನೀಡಿಜ ಬಳಿಕ ಮಾತನಾಡಿದ ನಟ ಶ್ರೀನಾಥ್ ಅವರು, " ಶಿವಮೊಗ್ಗ ದಸರಾ ಉದ್ಘಾಟನೆಗೆ ಬನ್ನಿ ಎಂದಾಗ ನನಗೆ ಮೈಸೂರು ದಸರಾ ನೆನಪಾಯಿತು. ಮೈಸೂರು ನಮ್ಮ ತಾಯಿ ತವರು ಮನೆ. ಅಲ್ಲಿಗೆ ಪ್ರತಿ ದಸರಾದಲ್ಲಿ ನಮ್ಮ ತಾಯಿ ಹೋಗುತ್ತಿದ್ದರು. ನಾನು ಮೈಸೂರಿನಲ್ಲಿ ಮಾತ್ರ ದಸರಾ ನಡೆಯುತ್ತದೆ ಎಂದಾಗ ನಮ್ಮಜ್ಜಿ ನನ್ನ ಕೆನ್ನೆಗೆ ಹೊಡೆದು, ಮೈಸೂರಿನಂತೆ ಶಿವಮೊಗ್ಗದಲ್ಲೂ ದಸರಾ ನಡೆಯುತ್ತದೆ ಎಂದು ಹೇಳಿದ್ದರು" ಎಂದು ಹಳೆಯ ದಿನಗಳನ್ನು ನೆನಪಿಸಿಕೊಂಡರು. "ನನಗೆ ಶಿವಮೊಗ್ಗ ದಸರಾ ನೋಡಬೇಕು ಎಂಬ ಆಸೆ ಇತ್ತು. ಹೀಗೆ ಇರುವಾಗ ಶಿವಮೊಗ್ಗ ದಸರಾ ಉದ್ಘಾಟನೆಗೆ ಕರೆದಾಗ ನಾನು 'ಏನಂದ್ರಿ ಇನ್ನೊಮ್ಮೆ ಹೇಳಿ' ಎಂದೆ. ಅವರು, 'ನೀವೆ ಶಿವಮೊಗ್ಗ ದಸರಾ ಉದ್ಘಾಟನೆ ಮಾಡಲು ಬರಬೇಕು' ಎಂದಾಗ ಸಂತೋಷವಾಯಿತು. ತಾಯಿ ಚಾಮುಂಡೇಶ್ವರಿ ನನ್ನ ಯಾತ್ರೆ ನೋಡಲು 'ನೀನು ಬಾ' ಎಂದು ತಾಯಿಯೇ ಕರೆದಂತಾಯಿತು" ಎಂದರು ಸಾರ್ಥಕ ಭಾವ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

**ವಂದೇ ಮಾತರಂ ಗೊಂದಲ:** ವೇದಿಕೆಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡುವ ವೇಳೆ ಪಾಲಿಕೆ ವತಿಯಿಂದ ವಂದೇ ಮಾತರಂನ ಎರಡು ಚರಣದ ರೆಕಾರ್ಡಿಂಗ್ ಮುಗಿದ ನಂತರ ಬಿಜೆಪಿ ನಾಯಕರು ಪೂರ್ಣವಾಗಿ ಹಾಡಿದರು. ಇದರಿಂದ ಆಕ್ರೋಶಗೊಂಡ ಕಾಂಗ್ರೆಸ್ ನಾಯಕರು, ವಂದೇ ಮಾತರಂ ಗೀತೆ ಹಾಡುವಾಗಲೇ ವೇದಿಕೆಯಿಂದ ಕೆಳಗೆ ಇಳಿದು ಹೋಗಿ ಆಕ್ರೋಶ ವ್ಯಕ್ತಪಡಿಸಿದರು. ಶಾಸಕ ಚನ್ನಬಸಪ್ಪ ಅವರು ಮಾತನಾಡಿ, "ಕಾಂಗ್ರೆಸ್‌ನವರಿಗೆ ಭಯ. ವಂದೇ ಮಾತರಂ ಗೀತೆಯ 'ತ್ವಂ ಹಿ ದುರ್ಗಾ ದಶಪ್ರಹರಣಧಾರಿಣೀ' ಎಂದು ಹೇಳಿದರೆ ಒಂದು ಕೋಮಿಗೆ ನೋವಾಗುತ್ತದೆ ಎಂದು ಗೀತೆಯನ್ನು ವಿರೋಧ ಮಾಡಿದರೆ ನಾನು ಏನು ಮಾಡಲು ಆಗುತ್ತದೆ. ಇದೇ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಂಸದ ರಾಘವೇಂದ್ರ ಅವರು, "ನಮ್ಮ ರಾಜ್ಯದಲ್ಲಿ ವಂದೇ ಮಾತರಂ ಗೀತೆಯ ಬಗ್ಗೆ ಪದೇ ಪದೇ ಚರ್ಚೆಗಳಾಗುತ್ತಿವೆ. ಗೀತೆಯನ್ನು ಹಾಡುವುದು, ಬಿಡುವುದು ಸಾರ್ವಜನಿಕರಿಗೆ ಬಿಟ್ಟ ವಿಚಾರವಾಗಿದೆ. ದಸರಾ ಉತ್ಸವ ನಮ್ಮ ಶಾಸಕರದು. ಸಂಪೂರ್ಣ ಗೀತೆ ಹೇಳಬೇಕು ಎಂದು ನಮ್ಮದು ಅಪೇಕ್ಷೆ ಇದೆ. ಅದರ ಪ್ರಕಾರ ನಾವೆಲ್ಲಾ ವಂದೇ ಮಾತರಂ ಗೀತೆಯನ್ನು ಹಾಡಿದ್ದೇವೆ. ಅವರ ಪ್ರಕಾರ ಎರಡು ಚರಣ ಹೇಳಿ ಮೈಕ್ ಆಫ್ ಮಾಡಿದರು. ಆದರೆ ಪೂರ್ಣ ಹಾಡನ್ನು ಸಾರ್ವಜನಿಕರು, ನಾವೆಲ್ಲಾ ಸೇರಿ ಒಟ್ಟಾಗಿ ಹೇಳಿದ್ದೇವೆ.

ಚಾಮುಂಡೇಶ್ವರಿ ಅವರಿಗೆ ಒಳ್ಳೆಯ ಬುದ್ಧಿ ನೀಡಲಿ. ವೇದಿಕೆಯಲ್ಲಿ ಸರ್ಕಾರದ ಎರಡು ಚರಣದ ಗೀತೆ ನಿಂತ ಮೇಲೆ ಸಾರ್ವಜನಿಕರು ಪೂರ್ಣ ಗೀತೆಯನ್ನು ಹಾಡಿದ್ದಾರೆ. ಇದರಲ್ಲಿ ಆಯುಕ್ತರ ಪಾತ್ರವೇನು ಇಲ್ಲ. ದೇಶ ಭಕ್ತಿಯ ಪರವಾಗಿರುವವರನ್ನು ವರ್ಗಾವಣೆ ಮಾಡುವ ಪ್ರಶ್ನೆಯೇ ಇಲ್ಲ.
– ಚನ್ನಬಸಪ್ಪ, ಶಾಸಕ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ಮತ್ತು ಎಸ್‌ಐಆರ್ ಪ್ರಕ್ರಿಯೆ ರದ್ದು ಮಾಡುವಂತೆ ಆಗ್ರಹಿಸಿ ಕಾಂಗ್ರೆಸ್ ನೇತೃತ್ವದಲ್ಲಿ ರ್ಯಾಲಿ

# ಸುಪ್ರೀಂ ಕೋರ್ಟ್‌ವರೆಗೆ ಕಾಂಗ್ರೆಸ್ ಮೆರವಣಿಗೆ, ಆರು ಮೆಟ್ರೋ ನಿಲ್ದಾಣ ಬಂದ್

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ಮತ್ತು ಎಸ್‌ಐಆರ್ ಪ್ರಕ್ರಿಯೆ ರದ್ದು ಮಾಡುವಂತೆ ಆಗ್ರಹಿಸಿ ಇಂದು ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಸುಪ್ರೀಂ ಕೋರ್ಟ್ ವರೆಗೆ ಮೆರವಣಿಗೆ ನಡೆಸಲಿದೆ.

> 1. ಜ್ಞಾನೇಶ್ ಕುಮಾರ್ ರಾಜೀನಾಮೆ ಮತ್ತು ಎಸ್‌ಐಆರ್ ಪ್ರಕ್ರಿಯೆ ರದ್ದು ಮಾಡುವಂತೆ ಆಗ್ರಹ
> 2. ಜಂತರ್ ಮಂತರ್‌ನಿಂದ ಸುಪ್ರೀಂ ಕೋರ್ಟ್‌ವರೆಗೆ ಮೆರವಣಿಗೆ, ಮತ್ತಷ್ಟು ಬಿಗಿ ಭದ್ರತೆ
> 3. ಸೆಂಟ್ರಲ್ ಸೆಕ್ರೆಟರಿಯೇಟ್, ರಾಜೀವ್ ಚೌಕ್ ಮತ್ತು ಪಟೇಲ್ ಚೌಕ್ ಸೇರಿದಂತೆ ದೆಹಲಿ ಮೆಟ್ರೋದ ಆರು ನಿಲ್ದಾಣಗಳ ಬಂದ್ ಆಗಿದ್ದು,

ಈ ಮೆರವಣಿಗೆಯಲ್ಲಿ ಭಾಗಿಯಾಗುವಂತೆ ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಯುವಜನರು, ಮೈತ್ರಿ ಪಕ್ಷಗಳು ಮತ್ತು ನಾಗರಿಕ ಸಮಾಜದ ಸಂಘಟನೆಗಳಿಗೆ ಕರೆ ನೀಡಿದ್ದಾರೆ.

ಇನ್ನು ಕಳೆದೆರಡು ದಿನಗಳಿಂದ ಸಿಇಸಿ ರಾಜೀನಾಮೆಗೆ ಒತ್ತಾಯಿಸಿ ಕಾಕ್ರೋಚ್ ಜನತಾ ಪಕ್ಷ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಮುಂದುವರೆಸಿದ್ದು, ರಾಜಧಾನಿಯಲ್ಲಿ ಸಾವಿರಾರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲಾಗಿತ್ತು. ಇದೀಗ ಇಂಡಿಯಾ ಒಕ್ಕೂಟ ಜಂತರ್ ಮಂತರ್‌ನಿಂದ ಸುಪ್ರೀಂ ಕೋರ್ಟ್ ವರೆಗೆ ಮೆರವಣಿಗೆ ನಡೆಸಲಿದ್ದು, ಮತ್ತಷ್ಟು ಬಿಗಿ ಭದ್ರತೆ ಕೈಗೊಳ್ಳಲಾಗಿದೆ.



ಇಂದಿನ ಪ್ರತಿಭಟನಾ ಮೆರವಣಿ ಕುರಿತು ಪೋಸ್ಟ್ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪಕ್ಷ, ಲಿಂಗ, ಜಾತಿ, ಸಮುದಾಯ ಮತ್ತು ರಾಜ್ಯಗಳ ಭೇದ ಮರೆತು ಭಾರತೀಯರಾಗಿ ನಾವೆಲ್ಲರೂ ಸುಪ್ರೀಂ ಕೋರ್ಟ್‌ಗೆ ಮೆರವಣಿಗೆ ನಡೆಸಲಿದ್ದೇವೆ. ಯುವಜನರು, ಎಲ್ಲಾ ವಿರೋಧ ಪಕ್ಷಗಳು, ನಾಗರಿಕ ಸಮಾಜದ ಸಂಘಟನೆಗಳು ಹಾಗೂ ಪ್ರಜಾಪ್ರಭುತ್ವ ಮತ್ತು ಭಾರತದ ಸಂವಿಧಾನದ ಮೇಲೆ ನಂಬಿಕೆಯಿಟ್ಟು ಅವುಗಳ ಪರವಾಗಿ ನಿಲ್ಲುವವರೆಲ್ಲರೂ ನಮ್ಮೊಂದಿಗೆ ಹೆಜ್ಜೆ ಹಾಕಲಿದ್ದಾರೆ ಎಂದಿದ್ದರು.

ನರೇಂದ್ರ ಮೋದಿ, ಅಮಿತ್ ಶಾ, ಅಜಿತ್ ದೋವಲ್ ಮತ್ತು ಮೋಹನ್ ಭಾಗವತ್ ಭಾರತದ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ. ಅವರು ನಮ್ಮನ್ನು ಬೆದರಿಸಲು ಸಾಧ್ಯವಿಲ್ಲ. ಅವರು ಪಕ್ಕಕ್ಕೆ ಸರಿಯಬೇಕಾಗುತ್ತದೆ. ನಾವು ಪ್ರೀತಿ, ಸಹೋದರತ್ವ ಮತ್ತು ದೇಶಭಕ್ತಿಯೊಂದಿಗೆ ಒಟ್ಟಾಗಿ ಮೆರವಣಿಗೆ ಮಾಡುತ್ತೇವೆ ಎಂದರು

## ಮೆಟ್ರೋ ಬಂದ್

ಪ್ರತಿಭಟನೆಯ ಹಿನ್ನೆಲೆಯಲ್ಲಿ ಸಾಯಂಕಾಲ 4 ಗಂಟೆಯವರೆಗೆ ಸೆಂಟ್ರಲ್ ಸೆಕ್ರೆಟರಿಯೇಟ್, ರಾಜೀವ್ ಚೌಕ್ ಮತ್ತು ಪಟೇಲ್ ಚೌಕ್ ಸೇರಿದಂತೆ ದೆಹಲಿ ಮೆಟ್ರೋದ ಆರು ನಿಲ್ದಾಣಗಳ ಬಂದ್ ಆಗಿದ್ದು, ಇದರಿಂದ ಸಾರ್ವಜನಿಕರಿಗೆ ಅಡಚಣೆಯಾಗಲಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ದೆಹಲಿ ಮೆಟ್ರೋ ರೈಲು ನಿಗಮ, ಭದ್ರತಾ ಕಾರಣಗಳಿಂದಾಗಿ ಜನಪಥ್, ಮಂಡಿ ಹೌಸ್, ಬರಾಖಂಬಾ ರಸ್ತೆ, ಸೆಂಟ್ರಲ್ ಸೆಕ್ರೆಟರಿಯೇಟ್, ರಾಜೀವ್ ಚೌಕ್ ಮತ್ತು ಪಟೇಲ್ ಚೌಕ್ ನಿಲ್ದಾಣಗಳಲ್ಲಿ ಪ್ರವೇಶ ಮತ್ತು ನಿರ್ಗಮನ ಮುಚ್ಚಲಾಗುವುದು. ಆದರೆ, ಈ ಸ್ಥಳಗಳಲ್ಲಿ ಬದಲಾ ಯಿಸುವ ಇಂಟರ್‌ಚೇಂಜ್ ಸೌಲಭ್ಯ ಲಭ್ಯವಿರುತ್ತದೆ. ರಾಜಧಾನಿಯಲ್ಲಿ ಪ್ರತಿಭಟನೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ದೆಹಲಿ ಮೆಟ್ರೋ ಮತ್ತು ರೈಲು ಸೇವೆ ಬಂದ್ ಮಾಡಿರುವುದು ನ್ಯಾಯಲಯದ ನಿರ್ದೇಶನದ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಸಲ್ಲಿಸಲಾದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ಪೀಠ, ಶಾಂತಿಯುತವಾಗಿ ಸೇರುವವರನ್ನು ವಶಕ್ಕೆ ಪಡೆಯಬಾರದು. ಸಂಚಾರ ನಿಯಮಗಳಿಗೆ ಒಳಪಟ್ಟು ಜನರ ಮುಕ್ತ ಸಂಚಾರಕ್ಕೆ ಅಧಿಕಾರಿಗಳು ಅವಕಾಶ ಕಲ್ಪಿಸಬೇಕು ಎಂದು ಆದೇಶಿಸಿದೆ. ಮೆರವಣಿಗೆ ನಡೆಸಲು ಯತ್ನಿಸಿದ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ, ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ ಮತ್ತು ಕ್ರಾಂತಿಕಾರಿ ಯುವ ಸಂಘಟನ್ ಸೇರಿದಂತೆ ವಿವಿಧ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಹಾಗೂ ಸಿಜೆಪಿ ಬೆಂಬಲಿಗರನ್ನು ವಶಕ್ಕೆ ಪಡೆಯಲಾಯಿತು.

# ಜಂತರ್ ಮಂತರ್‌ನಲ್ಲಿ ಶಾಂತಿಯುತ ಪ್ರತಿಭಟನೆಗೆ ಸಿಜೆಪಿ ಪಟ್ಟು: ದೆಹಲಿ ಪೊಲೀಸರಿಗೆ 24 ಗಂಟೆ ಡೆಡ್‌ಲೈನ್!

**ನವದೆಹಲಿ:** ಕಾಕ್ರೋಚ್ ಜನತಾ ಪಕ್ಷ ಹೊಸದಾಗಿ ಶಾಂತಿಯುತ ಪ್ರತಿಭಟನೆಗೆ ಮುಂದಾಗಿದ್ದು, ಈ ಕುರಿತು ದೆಹಲಿ ಪೊಲೀಸರಿಗೆ ಅನುಮತಿ ಕೋರಲು ಮುಂದಾಗಿದೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿರುವ ಸಿಜೆಪಿ, ಸೌರವ್ ದಾಸ್, ಅಶುತೋಷ್ ರಂಕಾ ಮತ್ತು ರತ್ನಾ ಸಿಂಗ್ ಅವರು ಜಂತರ್ ಮಂತರ್‌ನಲ್ಲಿ ಹೊಸದಾಗಿ ಶಾಂತಿಯುತ ಪ್ರತಿಭಟನೆ ನಡೆಸಲು ಅನುಮತಿ ಕೋರಲು ಸೋಮವಾರ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಭೇಟಿ ನೀಡಲಿದ್ದಾರೆ. ದೆಹಲಿ ಪೊಲೀಸರು 24 ಗಂಟೆಯೊಳಗೆ ಜಂತರ್ ಮಂತರ್‌ನಲ್ಲಿ ಶಾಂತಿಯುತ ಪ್ರತಿಭಟನೆಗೆ ದಿನಾಂಕವನ್ನು ನಿಗದಿಪಡಿಸಬೇಕು. ಇಲ್ಲದಿದ್ದರೆ ಪಕ್ಷವು ಮತ್ತೊಂದು ಪ್ರತಿಭಟನೆಯನ್ನು ಘೋಷಿಸಲಿದೆ ಎಂದಿದ್ದಾರೆ.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಪ್ರತಿಭಟನೆಗಳನ್ನು ಮುಂದುವರಿಸುವ ತಮ್ಮ ಬದ್ಧತೆಯನ್ನು ನಿನ್ನೆ ಪುನರುಚ್ಚರಿಸಿದ್ದರು. ವೈಯಕ್ತಿಕ ನೋವು ಹಾಗೂ ರಾಜಕೀಯ ಒತ್ತಡಗಳು ತಮ್ಮ ಚಳವಳಿಯನ್ನು ತಡೆಯಲಾರವು ಎಂದು ತಿಳಿಸಿದ್ದರು. ಹೋರಾಟಗಾರರು ಮತ್ತೆ ಬೀದಿಗಿಳಿಯಲಿದ್ದಾರೆ.




ಪ್ರತಿಭಟನೆ ಮುಂದುವರಿಯಲಿದೆ. ನಾವು ಪ್ರತಿಭಟಿಸುವುದಿಲ್ಲ ಎಂದು ಹೇಳುವ ಯಾವುದೇ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕಿಲ್ಲ. ನಾವು ಮತ್ತೆ ಬೀದಿಗಿಳಿಯುತ್ತೇವೆ ಎಂದು ದೀಪ್ಕೆ ಹೇಳಿದ್ದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧದ ಪ್ರತಿಭಟನೆಗೂ ಮುನ್ನವೇ ಶನಿವಾರ ದೆಹಲಿ ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಸಿಜೆಪಿ ನಾಯಕರಾದ ಅಭಿಜೀತ್ ದೀಪ್ಕೆ, ಸೌರವ್ ದಾಸ್ ಮತ್ತು ಅಶುತೋಷ್ ರಂಕಾ ಅವರನ್ನು ವಶಕ್ಕೆ ಪಡೆದಿದ್ದರು. ಬಳಿಕ ಅವರನ್ನು ಬಿಡುಗಡೆ ಮಾಡುವಂತೆ ದೆಹಲಿಯ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿತ್ತು.

ತಮ್ಮ ಕಕ್ಷಿದಾರರ ಬಿಡುಗಡೆಯ ಷರತ್ತಿನ ಭಾಗವಾಗಿ, ಮುಂದಿನ ಒಂದು ವರ್ಷದ ಅವಧಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ತರುವಂತಹ ಯಾವುದೇ ಚಟುವಟಿಕೆಯಲ್ಲಿ ತೊಡಗಬಾರದು ಎಂದು ಆ ಮೂವರು ನಾಯಕರಿಗೆ ಸೂಚಿಸಲಾಗಿದೆ ಎಂದು ಅವರ ವಕೀಲರು ತಿಳಿಸಿದ್ದಾರೆ. ಶನಿವಾರ ಕಾಕ್ರೋಚ್ ಜನತಾ ಪಾರ್ಟಿ ಜಂತರ್ ಮಂತರ್ ನಲ್ಲಿ ಕರೆ ನೀಡಿದ್ದ ಪ್ರತಿಭಟನೆಗೆ ದೆಹಲಿ ಪೊಲೀಸರು ಅನುಮತಿಸಿರಲಿಲ್ಲ. ಪ್ರತಿಭಟನೆಗೆ ಆಗಮಿಸಿದ್ದ ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಗಿತ್ತು. ಪ್ರತಿಭಟನೆಗಾಗಿ ಮುಂಬೈನಿಂದ ದೆಹಲಿಗೆ ವಿಮಾನದಲ್ಲಿ ಬಂದಿಳಿದ ಅಭಿಜೀತ್ ದೀಪ್ಕೆಯನ್ನು ಪೊಲೀಸರು ವಿಮಾನದಲ್ಲೇ ವಶಕ್ಕೆ ಪಡೆದಿದ್ದರು.

ಸಿಜೆಪಿ ಪ್ರತಿಭಟನೆ ಬೆನ್ನಲ್ಲೇ ಇಂದು ಮುಖ್ಯ ಚುನಾವಣಾ ಅಧಿಕಾರಿಯ ರಾಜೀನಾಮೆಗೆ ಆಗ್ರಹಿಸಿ ಸುಪ್ರೀಂ ಕೋರ್ಟ್‌ಗೆ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲು ಇಂಡಿಯಾ ಒಕ್ಕೂಟ ಮುಂದಾಗಿದ್ದು, ಈ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ದೇಶಾದ್ಯಂತದ ನಾಗರಿಕರಿಗೆ ಕರೆ ನೀಡಿದೆ.

# ದೆಹಲಿ ಜೈಲಿನಂತಾಗಿದೆ, ಜ್ಞಾನೇಶ್ ಕುಮಾರ್ ರಕ್ಷಣೆಗೆ ಕೇಂದ್ರ ಸರ್ಕಾರ ನಿಂತಿದೆ

**ನವದೆಹಲಿ:** ಮತ ಕಳ್ಳತನಕ್ಕೆ ತಡೆ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಸೂಚನೆ ಮತ್ತು ಮತಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದು ಮಾಡುವಂತೆ ಕೋರಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅರ್ಜಿ ಸಲ್ಲಿಸೋಣ ಬನ್ನಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಯುವಕರು, ವಿರೋಧ ಪಕ್ಷಗಳು ಮತ್ತು ವಿವಿಧ ಸಂಘಟನೆಗಳಿಗೆ ಸೋಮವಾರ ಕರೆ ನೀಡಿದ್ದಾರೆ.



ಅಕ್ಟೋಬರ್ 12ರಂದು ಸುಪ್ರೀಂ ಕೋರ್ಟ್‌ಗೆ ಮೆರವಣಿಗೆಯಲ್ಲಿ ತೆರಳಿ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ದೇಶದಲ್ಲಾಗುತ್ತಿರುವ ಅನ್ಯಾಯಗಳ ವಿರುದ್ಧ ಕ್ರಮ ಜರುಗಿಸುವಂತೆ ಮನವಿ ಸಲ್ಲಿಸೋಣ ಎಂದು ಹೇಳಿದ್ದಾರೆ.

ಕಳೆದ ಎರಡು ದಿನಗಳಿಂದ ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ಸಿಜೆಪಿ ಪ್ರತಿಭಟನೆ ನಡೆಸುತ್ತಿರುವ ನಡುವೆ, ಕಾಂಗ್ರೆಸ್ ಕೂಡ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ಘೋಷಿಸಿದೆ. ರಾಷ್ಟ್ರ ರಾಜಧಾನಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪೊಲೀಸ್ ಬಂದೋಬಸ್ತ್ ಅನ್ನು ಮತ್ತಷ್ಟು ಹೆಚ್ಚಿಸಲಾಗಿದೆ.

**ಭೇಟಿಗೆ ಅವಕಾಶ ನೀಡದ ಸಿಜೆಐ:** ಇದಕ್ಕೂ ಮೊದಲು, ತಮ್ಮ ಬೇಡಿಕೆಗಳ ಸಲ್ಲಿಕೆಗಾಗಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಕೂಟ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಭೇಟಿಗೆ ಅವಕಾಶ ಕೋರಿತ್ತು. ಚುನಾವಣಾ ಅಕ್ರಮ ಆರೋಪದ ಕುರಿತು ಮನವಿ ಸಲ್ಲಿಸಲು ಸಭೆ ನಡೆಸುವಂತೆ ಇಂಡಿಯಾ ಮೈತ್ರಿಕೂಟದ ನಾಯಕರು ಸಲ್ಲಿಸಿದ್ದ ಮನವಿಯನ್ನು ಸಿಜೆಐ ಸೂರ್ಯಕಾಂತ್ ಅವರು ತಿರಸ್ಕರಿಸಿದ್ದರು. ಚುನಾವಣಾ ಅಕ್ರಮಗಳ ಕುರಿತು ಆರೋಪಗಳ ಅರ್ಜಿಯು ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಈ ಕುರಿತು ಮತ್ತಾವುದೋ ಆರೋಪಗಳಿದ್ದರೂ, ಅದನ್ನು ಕೋರ್ಟ್ ಮೂಲಕವೇ ಸಲ್ಲಿಸಿ. ನೇರ ಭೇಟಿಯಾಗಲು ಅವಕಾಶವಿಲ್ಲ ಎಂದು ಹೇಳಿದ್ದರು.

**ರಾಹುಲ್ ಗಾಂಧಿ ಆರೋಪಗಳು:** ದೆಹಲಿಯಲ್ಲಿ ಇಂದು ಮಾಧ್ಯಮಗೋಷ್ಠಿ ನಡೆಸಿದ ರಾಹುಲ್ ಗಾಂಧಿ, ಚುನಾವಣಾ ಅಕ್ರಮಗಳ ಆರೋಪದ ವಿರುದ್ಧ ವಿರೋಧ ಪಕ್ಷಗಳು ಹೋರಾಟವನ್ನು ದಮನ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ಗೂಂಡಾಗಳು ಮುಕ್ತವಾಗಿ ಓಡಾಡುತ್ತಿದ್ದಾರೆ ಎಂದು ಆರೋಪಿಸಿದರು.

**ಜೈಲಿನಂತಾದ ದೆಹಲಿ:** ಕಳೆದ ನಾಲ್ಕೈದು ದಿನಗಳಿಂದ ದೆಹಲಿಯಲ್ಲಿ ಎಲ್ಲಾ ಚಟುವಟಿಕೆಗಳನ್ನು ಹತ್ತಿಕ್ಕಲಾಗಿದೆ. ದೇಶದ ರಾಜಧಾನಿ ಜೈಲಿನಂತಾಗಿದೆ. ದೆಹಲಿಗೆ ಬರುವ ಜನರನ್ನು ತಡೆಯಲಾಗುತ್ತಿದೆ. ಏನೇ ಮಾಡಿದರೂ, ಸರ್ಕಾರದ ಬೆದರಿಕೆ ಬಗ್ಗಲ್ಲ. ಹೋರಾಟ ಮುಂದುವರಿಸಲಾಗುವುದು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

# ರಷ್ಯಾ ಡೀಸೆಲ್ ಮೇಲಿನ ನಿರ್ಬಂಧ ಸಡಿಲಿಕೆ

**ವಾಷಿಂಗ್ಟನ್:** ರಷ್ಯಾದ ಜೊತೆಗೆ ಡೀಸೆಲ್ ಖರೀದಿ ಒಪ್ಪಂದ ಮಾಡಿಕೊಂಡು, ಅದರ ತೈಲ ಜಾಗತಿಕ ಮಾರುಕಟ್ಟೆಗೆ ಬಿಡುಗಡೆಯಾಗಲು ಇದ್ದ ನಿರ್ಬಂಧವನ್ನು ತೆರವು ಮಾಡಿದ ಬಳಿಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ನಡುವೆ ವಾಗ್ಯುದ್ಧ ತೀವ್ರವಾಗಿದೆ. ಮತ್ತೊಂದೆಡೆ, ರಷ್ಯಾ ನಡೆಸಿದ ಭೀಕರ ದಾಳಿಯಲ್ಲಿ ಉಕ್ರೇನ್‌ನಲ್ಲಿ 4 ಮಕ್ಕಳು ಸೇರಿ 21 ಮಂದಿ ಸಾವಿಗೀಡಾಗಿದ್ದಾರೆ.

ಅಮೆರಿಕದಲ್ಲಿ ಇಂಧನ ಬೆಲೆ ಗಗನಕ್ಕೇರಿದ್ದು, ಮುಂದಿನ ತಿಂಗಳು ನಡೆಯಲಿರುವ ಮಧ್ಯಂತರ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸುವ ಭೀತಿಯಲ್ಲಿರುವ ಟ್ರಂಪ್, ಶುಕ್ರವಾರ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆ ಫೋನ್ ಕರೆಯಲ್ಲಿ ಮಾತನಾಡಿ ಡೀಸೆಲ್ ಖರೀದಿ ಒಪ್ಪಂದ ಮಾಡಿಕೊಂಡಿದ್ದರು. ಜೊತೆಗೆ, ಜಾಗತಿಕ ಮಾರುಕಟ್ಟೆಗೆ ರಷ್ಯಾದ ಡೀಸೆಲ್ ಬಿಡುಗಡೆಗೆ ಒಪ್ಪಿಗೆ ನೀಡಿದ್ದರು. ಇದನ್ನು ಯುರೋಪಿಯನ್ ಒಕ್ಕೂಟ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ತೀವ್ರವಾಗಿ ಟೀಕಿಸಿದ್ದರು. ಈ ಒಪ್ಪಂದ ಬಲಿಷ್ಠ ರಾಷ್ಟ್ರದ ದುರ್ಬಲ ನಿರ್ಧಾರ ಎಂದು ಅಣಕವಾಡಿದ್ದರು.

**ಉಕ್ರೇನ್‌ಗೆ ಹೊಸ ಅಧ್ಯಕ್ಷರ ಅಗತ್ಯವಿದೆ– ಟ್ರಂಪ್:** ಶನಿವಾರ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಟ್ರಂಪ್, ರಷ್ಯಾದ ತೈಲ ಸಂಸ್ಕರಣಾಗಾರಗಳ ಮೇಲೆ ದಾಳಿ ಮಾಡದಂತೆ ತಾನು ನೀಡಿದ್ದ ಆದೇಶವನ್ನು ಝೆಲೆನ್‌ಸ್ಕಿ ಉಲ್ಲಂಘಿಸಿದ್ದಾರೆ. ಈ ದಾಳಿಗಳು ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ಉಂಟಾಗುತ್ತಿರುವ ಜಾಗತಿಕ ಇಂಧನ ಕೊರತೆಯನ್ನು ಮತ್ತಷ್ಟು ತೀವ್ರಗೊಳಿಸುತ್ತದೆ ಎಂದು ಹೇಳಿದ್ದಾರೆ.

ಝೆಲೆನ್‌ಸ್ಕಿ ತಕ್ಷಣವೇ ದಾಳಿಗಳನ್ನು ನಿಲ್ಲಿಸಬೇಕು ಎಂದು ಕಠಿಣ ಪದಗಳಲ್ಲಿ ಎಚ್ಚರಿಸಿದ ಟ್ರಂಪ್, ಉಕ್ರೇನ್ ಈಗ ಹೊಸ ಅಧ್ಯಕ್ಷರನ್ನು ಹೊಂದುವ ಸಮಯ ಬಂದಿದೆ. ಶಾಂತಿ ಒಪ್ಪಂದ ಮಾಡಿಕೊಳ್ಳಬಲ್ಲ ಹೊಸ ನಾಯಕರನ್ನು ಅವರು ಆರಿಸಿಕೊಳ್ಳುವುದು ಒಳಿತು. ಏಕೆಂದರೆ, ಝೆಲೆನ್‌ಸ್ಕಿ ಎಷ್ಟೋ ಒಪ್ಪಂದಗಳನ್ನು ಮಾಡಿಕೊಳ್ಳಬಹುದಿತ್ತು. ಆದರೆ, ಯಾವುದೋ ಕಾರಣಕ್ಕಾಗಿ ಅವರು ಎಂದಿಗೂ ಮಾಡಲಿಲ್ಲ ಎಂದು ಕಿಡಿಕಾರಿದ್ದಾರೆ. ಟ್ರಂಪ್ ಅವರ ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬ್ರಿಟನ್ ಪ್ರಧಾನಿ ಬರ್ನ್‌ಹ್ಯಾಮ್, ಝೆಲೆನ್‌ಸ್ಕಿ ಅವರೊಂದಿಗೆ ತಾವಿರುವುದಾಗಿ ಘೋಷಿಸಿ, ರಷ್ಯಾದ ಮೇಲಿನ ನಿರ್ಬಂಧಗಳನ್ನು ಬ್ರಿಟನ್ ಮತ್ತಷ್ಟು ಬಲಪಡಿಸಲಿದೆ ಎಂದು ತಿಳಿಸಿದ್ದಾರೆ. ಇನ್ನೊಂದೆಡೆ ಉಕ್ರೇನ್ ವಿದೇಶಾಂಗ ಸಚಿವ ಆಂಡ್ರಿ ಸಿಬಿಗಾ ಕೂಡ ಝೆಲೆನ್‌ಸ್ಕಿ ಪರ ಬ್ಯಾಟ್ ಬೀಸಿದ್ದು, ಅಧ್ಯಕ್ಷರಿಗೆ ಉಕ್ರೇನ್ ಜನರ ಬೆಂಬಲವಿದೆ. ತಮ್ಮ ನಾಯಕನನ್ನು ನಿರ್ಧರಿಸುವ ಹಕ್ಕು ಜನರಿಗಿದೆ ಎಂದು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ರಷ್ಯಾದಿಂದ ಭೀಕರ ದಾಳಿ: ಇದೆಲ್ಲದರ ನಡುವೆ, ಉಕ್ರೇನ್‌ನ ಝಪೊರಿಝಿಯಾ ನಗರದ ಮೇಲೆ ರಷ್ಯಾ ನಡೆಸಿದ ಬಾಂಬ್ ದಾಳಿಯಲ್ಲಿ ಮೂರು ಮಕ್ಕಳು ಸೇರಿದಂತೆ 20 ಜನರು ಸಾವಿಗೀಡಾಗಿದ್ದಾರೆ. ಅಮೆರಿಕವು, ಡೀಸೆಲ್ ರಫ್ತು ನಿರ್ಬಂಧಗಳನ್ನು ಸಡಿಲಗೊಳಿಸಿದ್ದಕ್ಕಾಗಿ ರಷ್ಯಾ ವಸತಿ ಕಟ್ಟಡಗಳ ಮೇಲೆ ಬಾಂಬ್ ದಾಳಿ ನಡೆಸಿ ಧನ್ಯವಾದ ತಿಳಿಸಿದೆ ಎಂದು ವ್ಯಂಗ್ಯವಾಡಿದ್ದಾರೆ.



# ಇಂಡಿಯಾ ಮೈತ್ರಿಕೂಟದ ಭೇಟಿಗೆ ಸಿಜೆಐ ಸೂರ್ಯಕಾಂತ್ ನಿರಾಕರಣೆ

**ನವದೆಹಲಿ:** ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಮೈತ್ರಿಕೂಟವು ಕೋರಿದ್ದ ಭೇಟಿಯ ಮನವಿಯನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ನಿರಾಕರಿಸಿ, ನ್ಯಾಯಾಲಯದ ಮೊರೆ ಹೋಗುವಂತೆ ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.



ಚುನಾವಣಾ ಅಕ್ರಮಗಳ ಆರೋಪ, ಎಸ್‌ಐಆರ್ ಮತ್ತು ಸಿಇಸಿ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಸೋಮವಾರ ಮನವಿ ಸಲ್ಲಿಸಲು ಮೆರವಣಿಗೆ ನಡೆಸುವುದಾಗಿ ವಿರೋಧ ಪಕ್ಷಗಳ ಮೈತ್ರಿಕೂಟ ಘೋಷಿಸಿದೆ. ಪ್ರಸ್ತಾಪಿಸಲಾದ ವಿಷಯಗಳು ಈಗಾಗಲೇ ನ್ಯಾಯಾಲಯದ ಪರಿಶೀಲನೆಯಲ್ಲಿವೆ ಎಂದು ಹೇಳಿ ಮುಖ್ಯ ನ್ಯಾಯಮೂರ್ತಿಗಳು ಭೇಟಿಯನ್ನು ನಿರಾಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. 'ಯಾವುದೇ ರಾಜಕೀಯ ಪಕ್ಷದ ನಿಯೋಗ ವನ್ನು ಆಡಳಿತಾತ್ಮಕ ಮಟ್ಟದಲ್ಲಿ ಈ ರೀತಿ ಭೇಟಿಯಾಗುವ ಅಧಿಕಾರ ನ್ಯಾಯಾಲಯಕ್ಕಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿಗಳು ಹೇಳಿದ್ದಾರೆ ಎಂದು ತಿಳಿದುಬಂದಿದೆ. 'ನ್ಯಾಯಾಲಯದ ಅಧಿಕಾರವು ಅರ್ಜಿಯ ವಿಚಾರಣೆ ನಡೆಸಿ ತೀರ್ಪು ನೀಡುವುದಕ್ಕೆ ಸೀಮಿತವಾಗಿರುತ್ತದೆ. ಅಲ್ಲದೆ, ಅತ್ಯುನ್ನತ ನ್ಯಾಯಾಂಗ ಸಂಸ್ಥೆಯಾಗಿರುವ ಸುಪ್ರೀಂ ಕೋರ್ಟ್‌ನ ಬಾಗಿಲುಗಳು ಎಲ್ಲರಿಗೂ ದಿನದ 24 ಗಂಟೆಯೂ ತೆರೆದಿರುತ್ತವೆ ಮತ್ತು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಅದು ಬದ್ಧವಾಗಿದೆ' ಎಂದೂ ಅವರು ಸೂರ್ಯಕಾಂತ್ ಹೇಳಿದ್ದಾರೆ ಎಂದು ತಿಳಿದುಬಂದಿದೆ. "ಪಕ್ಷ, ಲಿಂಗ, ಜಾತಿ, ಸಮುದಾಯ ಮತ್ತು ರಾಜ್ಯಗಳ ಭೇದ ಮರೆತು ಒಗ್ಗೂಡಿದ ಭಾರತೀಯರು ಸುಪ್ರೀಂ ಕೋರ್ಟ್‌ಗೆ ಈ ಮೆರವಣಿಗೆ ನಡೆಸಲಿದ್ದಾರೆ. ನಮಗೆ ಬೇಕಾದ ಭಾರತ ಇದಲ್ಲ. ನಾವು ಪಕ್ಷ, ಲಿಂಗ, ಜಾತಿ, ಸಮುದಾಯ ಮತ್ತು ರಾಜ್ಯ ಭೇದ ಮರೆತು ಭಾರತೀಯರಾಗಿ ಸುಪ್ರೀಂ ಕೋರ್ಟ್‌ಗೆ ಮೆರವಣಿಗೆ ನಡೆಸಲಿದ್ದೇವೆ. ಯುವಜನರು, ಎಲ್ಲಾ ವಿರೋಧ ಪಕ್ಷಗಳು, ನಾಗರಿಕ ಸಮಾಜದ ಗುಂಪುಗಳು ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟು ಭಾರತದ ಸಂವಿಧಾನದ ಪರವಾಗಿ ನಿಲ್ಲುವವರೆಲ್ಲರೂ ನಮ್ಮೊಂದಿಗೆ ಹೆಜ್ಜೆ ಹಾಕಲಿದ್ದಾರೆ," ಎಂದು ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಿಳಿಸಿದ್ದಾರೆ.

ಅರವಿಂದ್ ಕೇಜ್ರಿವಾಲ್ ಸೇರಿದಂತೆ ಪಕ್ಷದ ನಾಯಕರ ವಿರುದ್ಧ ದೆಹಲಿ ಸಿಖ್ ಗುರುದ್ವಾರ ನಿರ್ವಹಣಾ ಸಮಿತಿಯಿಂದ ಎಫ್‌ಐಆರ್ ದಾಖಲು

# ಗುರುದ್ವಾರದ ಬಳಿ ಪ್ರತಿಭಟನೆ: ಕೇಜ್ರಿವಾಲ್ ಸೇರಿದಂತೆ ಹಲವು ನಾಯಕರ ವಿರುದ್ಧ ಎಫ್‌ಐಆರ್

**ನವದೆಹಲಿ:** ಇಲ್ಲಿನ ಬಾಂಗ್ಲಾ ಸಾಹೀಬ್ ಗುರುದ್ವಾರದಲ್ಲಿ ಅಡಚಣೆ ಉಂಟುಮಾಡಿದ ಆರೋಪ ಹಾಗೂ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧದ ಪ್ರತಿಭಟನೆಯ ಸಂದರ್ಭದಲ್ಲಿ ತಪ್ಪು ದಾರಿಗೆಳೆಯುವ ವಿಡಿಯೋಗಳನ್ನು ಹರಡಿದ ಆರೋಪದ ಮೇಲೆ ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಸೇರಿದಂತೆ ಪಕ್ಷದ ನಾಯಕರ ವಿರುದ್ಧ ದೆಹಲಿ ಸಿಖ್ ಗುರುದ್ವಾರ ನಿರ್ವಹಣಾ ಸಮಿತಿಯು ಭಾನುವಾರ ಎಫ್‌ಐಆರ್ ದಾಖಲಿಸಿದೆ.

> 1. ಬಾಂಗ್ಲಾ ಸಾಹೀಬ್ ಗುರುದ್ವಾರದಲ್ಲಿ ಅಡಚಣೆ ಉಂಟುಮಾಡಿದ ಆರೋಪ
> 2. ತಪ್ಪು ದಾರಿಗೆಳೆಯುವ ವಿಡಿಯೋಗಳನ್ನು ಹರಡಿದ ಆರೋಪ
> 3. ಕೇಜ್ರಿವಾಲ್ ಸೇರಿದಂತೆ ಪಕ್ಷದ ನಾಯಕರ ವಿರುದ್ಧ ಪ್ರಕರಣ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಜಂತರ್ ಮಂತರ್‌ನತ್ತ ತೆರಳಲು ಯತ್ನಿಸುತ್ತಿದ್ದಾಗ, ಶನಿವಾರ ಗುರುದ್ವಾರದ ಆವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಜಮಾಯಿಸಿದ್ದರು. ಆದರೆ ಪೊಲೀಸರು, ಪ್ರತಿಭಟನಾಕಾರರ ಪ್ರಯತ್ನಗಳನ್ನು ತಡೆದು ವಶಕ್ಕೆ ಪಡೆದರು.

ದೂರಿನ ಆಧಾರದ ಮೇಲೆ ಪೊಲೀಸರು ತನಿಖೆ ಆರಂಭಿಸಿದ್ದು,



ದೂರಿನೊಂದಿಗೆ ಸಲ್ಲಿಸಲಾದ ವಿಡಿಯೋ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದಾರೆ.

ಈ ಕುರಿತು ಮಾತನಾಡಿರುವ ಡಿಎಸ್‌ಜಿಎಂಸಿ ಅಧ್ಯಕ್ಷ ಹರ್ಮೀತ್ ಸಿಂಗ್, ಘಟನೆಗೆ ಸಿಖ್ ಸಮುದಾಯದಲ್ಲಿ ತೀವ್ರ ಅಸಮಾಧಾನವಿದೆ. ಈ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಸಮಿತಿಯು ಕ್ರಮ ಕೈಗೊಂಡಿದ್ದು, ಕೇಜ್ರಿವಾಲ್ ವಿರುದ್ಧ ದೂರು ದಾಖಲಿಸಿದೆ ಎಂದರು.

ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರು ಗುರುದ್ವಾರದ ಆವರಣವನ್ನು ಪ್ರವೇಶಿಸಿ ಪ್ರತಿಭಟನೆ ನಡೆಸುವ ಮೂಲಕ ಗೊಂದಲ ಹಾಗೂ ಅಶಾಂತಿಯನ್ನು ಸೃಷ್ಟಿಸಿದರು. ಈ ಮೂಲಕ ಗುರು ಘರ್‌ನ ಪಾವಿತ್ರ್ಯತೆಯನ್ನು ರಾಜಕೀಯ ಚಟುವಟಿಕೆಗಾಗಿ ಬಳಸಿಕೊಳ್ಳಲು ಪ್ರಯತ್ನಿಸಿದರು. ಈ ಕೃತ್ಯಗಳು ಧಾರ್ಮಿಕ ಸ್ಥಳದ ಪಾವಿತ್ರ್ಯಕ್ಕೆ ವಿರುದ್ಧವಾಗಿವೆ.

## ತನಿಖೆಗೆ ಒಳಪಡಲಿ

ಇದು ಸಾರ್ವಜನಿಕ ರಸ್ತೆಯಾಗಿದ್ದರೂ, ಪ್ರತಿಭಟನಾಕಾರರು ಗುರುದ್ವಾರದ ಆವರಣದೊಳಗೆ ಪ್ರವೇಶಿಸದಿದ್ದರೂ, ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪೊಲೀಸರು ಸಂಯಮದಿಂದ ವರ್ತಿಸಬೇಕು. ಈ ಎಲ್ಲಾ ಪ್ರತಿಭಟನಾಕಾರರನ್ನು ಅರವಿಂದ್ ಕೇಜ್ರಿವಾಲ್ ಅವರೇ ಕಳುಹಿಸಿದ್ದರು. ನಾವು ಗುರುತಿಸಿರುವ ಕಾರ್ಯಕರ್ತರೆಲ್ಲರೂ ಆಪ್‌ನೊಂದಿಗೆ ಗುರುತಿಸಿಕೊಂಡಿರುವುದರಿಂದ ಇದು ತನಿಖೆಗೆ ಒಳಪಡಬೇಕು ಎಂದು ಒತ್ತಾಯಿಸಿದರು.

ಪೂಜಾ ಸ್ಥಳದೊಳಗೆ ಇಂತಹ ಉದ್ದೇಶಪೂರ್ವಕ ರಾಜಕೀಯ ಚಟುವಟಿಕೆಯು ಸಿಖ್ ಸಂಗತ್‌ನ ಧಾರ್ಮಿಕ ಭಾವನೆಗಳನ್ನು ತೀವ್ರವಾಗಿ ಘಾಸಿಗೊಳಿಸಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಆ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿ ಉಪಸ್ಥಿತರಿರುವುದನ್ನು ಕೂಡ ಆಕ್ಷೇಪಿಸಿದ್ದು, ಸಮವಸ್ತ್ರ ಧರಿಸಿ ಗುರುದ್ವಾರದೊಳಗೆ ಪ್ರವೇಶಿಸದಂತೆ ಸಿಬ್ಬಂದಿಗೆ ಪೊಲೀಸ್ ಉಪ ಆಯುಕ್ತರಿಗೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲು ಪೊಲೀಸರು ಗುರುದ್ವಾರದೊಳಗೆ ಪ್ರವೇಶಿಸಿದ್ದಾರೆ ಎಂದು ಆಪ್ ನಾಯಕರು ಆರೋಪಿಸಿದ್ದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು, ಬಾಂಗ್ಲಾ ಸಾಹೀಬ್ ಗುರುದ್ವಾರಕ್ಕೆ ಪ್ರತಿಭಟನಾಕಾರರು ಪ್ರವೇಶಿಸಿದ್ದನ್ನು ಬೆಂಬಲಿಸಿ ಪೋಸ್ಟ್ ಮಾಡಿದ್ದಾರೆ.

## ಮಿನಿ ನ್ಯೂಸ್

### ನಿಯೋಗದ ಭೇಟಿ ನಿರಾಕರಣೆಗೆ ಕಾರಣ ವಿವರಿಸಿದ ಸಿಜೆಐ

**ನವದೆಹಲಿ:** ಸೂಕ್ತ ಮಾರ್ಗದಲ್ಲಿ ತಲುಪುವ ಎಲ್ಲಾ ಭಾರತೀಯರಿಗೂ ಸುಪ್ರೀಂ ಕೋರ್ಟ್ ಬಾಗಿಲು ತೆರೆದಿರುತ್ತದೆ ಎಂದು ಸುಪ್ರೀಂ ಕೋರ್ಟ್ ಮುಖ್ಯನ್ಯಾಯಾಧೀಶರಾದ ಸೂರ್ಯಕಾಂತ್ ತಿಳಿಸಿದ್ದಾರೆ. ಚುನಾವಣಾ ಆಯೋಗದ ವಿರುದ್ಧ ಇಂಡಿಯಾ ಒಕ್ಕೂಟ ಸೋಮವಾರ ಸುಪ್ರೀಂ ಕೋರ್ಟ್‌ವರೆಗೆ ಮೆರವಣಿಗೆ ಆರಂಭಕ್ಕೆ ಮುನ್ನ ಮಾತನಾಡಿದ ಅವರು, ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂಡಿಯಾ ಒಕ್ಕೂಟ ಸಿಜೆಐ ಭೇಟಿ ಮನವಿ ನಿರಾಕರಣೆ ಕುರಿತು ಮಾತನಾಡಿದ ಅವರು, ಭಾನುವಾರ ಈ ಕುರಿತು ಪತ್ರ ಪಡೆದಿದ್ದು, ಅದೇ ರಾತ್ರಿ ಇದಕ್ಕೆ ಪ್ರತಿಕ್ರಿಯಿಸಿರುವುದಾಗಿ ಮತ್ತು ಅದರಲ್ಲಿ ಯಾವ ಕಾರಣಕ್ಕೆ ನಿಯೋಗದ ಭೇಟಿ ಸಾಧ್ಯವಿಲ್ಲ ಎಂಬುದನ್ನು ವಿವರಿಸಲಾಗಿದೆ ಎಂದರು. ಯಾವುದೇ ನಾಗರಿಕ ಅಥವಾ ಚುನಾಯಿತ ಪ್ರತಿನಿಧಿಯು ನ್ಯಾಯಾಲಯವನ್ನು ಸಂಪರ್ಕಿಸಿ ಕಾನೂನು ಪರಿಹಾರವನ್ನು ಕೋರಬಹುದು. ಸುಪ್ರೀಂ ಕೋರ್ಟ್ ಪ್ರತಿಯೊಬ್ಬರಿಗೂ ಮುಕ್ತವಾಗಿದೆ. ಸಾಮಾನ್ಯ ನಾಗರಿಕರು ಅಥವಾ ಚುನಾವಣೆಗಳಿಂದ ಆಯ್ಕೆಯಾದ ಸದಸ್ಯರ ಯಾವುದೇ ಅರ್ಜಿಗೆ ಸ್ವಾಗತ ಇದೆ. ಭಾರತದ ಪ್ರತಿಯೊಬ್ಬ ನಾಗರಿಕರಿಗೂ ನ್ಯಾಯಾಲಯದ ಕದ ತಟ್ಟುವ ಹಕ್ಕಿದೆ. ಅವರ ಕಾಳಜಿ ವಿಷಯದ ಕುರಿತು ನಾವು ಆಲಿಸಿ, ಕಾನೂನಾತ್ಮಕವಾಗಿ ಯಾವ ಪರಿಹಾರ ಸಾಧ್ಯವೋ ಅದನ್ನು ನೀಡುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ.

### ಸೌದಿ ವಿಮಾನ ನಿಲ್ದಾಣದ ಮೇಲೆ ಮತ್ತೆ ದಾಳಿ

**ದುಬೈ:** ಸೌದಿ ಅರೇಬಿಯಾದ ರಿಯಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಹೌತಿ ಬಂಡೂಕೋರರ ದಾಳಿ ಮುಂದುವರಿದಿದೆ. ನಡೆದ ದಾಳಿಯಲ್ಲಿ ಓರ್ವ ಮೃತಪಟ್ಟು, 11 ಜನ ಗಾಯಗೊಂಡಿದ್ದಾರೆ. ಹೌತಿ ಬಂಡುಕೋರರು ಶನಿವಾರ ಕೂಡ ರಿಯಾದ್‌ನ ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಭೀಕರ ದಾಳಿ ನಡೆಸಿದ್ದರು. ಈ ವೇಳೆ 12 ಜನ ಮೃತಪಟ್ಟು, 11 ಭಾರತೀಯರು ಸೇರಿದಂತೆ 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ದಾಳಿಯಲ್ಲಿ ಗಾಯಗೊಂಡ



11 ಭಾರತೀಯರ ಪೈಕಿ ಒಬ್ಬರು ಮೃತಪಟ್ಟಿದ್ದಾರೆ. ಮೂವರು ತೀವ್ರ ನಿಗಾ ಘಟಕದಲ್ಲಿದ್ದರೂ ಅವರ ಆರೋಗ್ಯ ಸ್ಥಿರವಾಗಿದೆ. ಇಬ್ಬರು ಸಾಮಾನ್ಯ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಉಳಿದವರನ್ನು ಚಿಕಿತ್ಸೆ ಬಳಿಕ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ರಾಯಭಾರ ಕಚೇರಿ ಹೇಳಿದೆ. ಗಾಯಗೊಂಡ ಭಾರತೀಯ ಪ್ರಜೆಗಳಿಗೆ ಚಿಕಿತ್ಸೆ ನೀಡುತ್ತಿರುವ ಎಲ್ಲಾ ಆಸ್ಪತ್ರೆಗಳಿಗೆ ತಮ್ಮ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ ಎಂದು ರಾಯಭಾರ ಕಚೇರಿ ತಿಳಿಸಿದೆ. ಹೈದರಾಬಾದ್‌ನ ಮೆಹದಿಪಟ್ಟಣ ಮೂಲದ ಮೊಹಮ್ಮದ್ ಯೂಸುಫ್ ಅಲಿ (45) ಮೃತಪಟ್ಟವರು. ಹತ್ತು ವರ್ಷಗಳ ಹಿಂದೆ ಸೌದಿ ಅರೇಬಿಯಾಗೆ ತೆರಳಿದ್ದ ಇವರು ಅಲ್ಲಿ ಐಟಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಅವರ ಪತ್ನಿ ಸಮೀರಾ ಮತ್ತು ಮೂವರು ಮಕ್ಕಳು ಕಳೆದ ಎರಡು ವರ್ಷಗಳಿಂದ ಹೈದರಾಬಾದ್‌ನ ಮೆಹದಿಪಟ್ಟಣದಲ್ಲಿ ವಾಸಿಸುತ್ತಿದ್ದರು. ಯೂಸುಫ್ ಅಲಿ 15 ದಿನಗಳ ಹಿಂದೆ ಸೌದಿ ಅರೇಬಿಯಾದಿಂದ ಹೈದರಾಬಾದ್‌ಗೆ ಆಗಮಿಸಿ ಅ.2 ರಂದು ತಮ್ಮ ಪತ್ನಿ ಹಾಗೂ ಮಕ್ಕಳೊಂದಿಗೆ ವಾಪಸ್ ತೆರಳಿದ್ದರು. ಶನಿವಾರ ಮದೀನಾಕ್ಕೆ ಪ್ರಯಾಣಿಸಲು ಈ ಕುಟುಂಬವು ರಿಯಾದ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದಾಗ ಈ ದಾಳಿ ನಡೆದಿದೆ. ಈ ವೇಳೆ ಯೂಸುಫ್ ಅಲಿ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರವಾಗಿ ಗಾಯಗೊಂಡಿದ್ದ ಅವರ ಎರಡೂ ಕಾಲುಗಳನ್ನು ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ ತೆಗೆದುಹಾಕಿದ್ದರು. ಬಳಿಕ ಅವರು ಚೇತರಿಸಿಕೊಳ್ಳುತ್ತಿದ್ದಾಗ ತೀವ್ರ ಹೃದಯಾಘಾತವಾಗಿ ಮೃತಪಟ್ಟಿದ್ದಾರೆ.

### ಜಿಬೂಟಿ ಕರಾವಳಿಯಲ್ಲಿ ದೋಣಿ ಮುಳುಗಡೆ ದುರಂತ

**ಜಿನೀವಾ:** ಜಿಬೂಟಿ ಕರಾವಳಿಯಲ್ಲಿ ಸಂಭವಿಸಿದ ಭೀಕರ ದೋಣಿ ದುರಂತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 139ಕ್ಕೆ ಏರಿದೆ. ಇಂದು ನಡೆದ ಕಾರ್ಯಾಚರಣೆಯಲ್ಲಿ 30 ಶವಗಳು ಪತ್ತೆಯಾಗಿವೆ ಎಂದು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಅಂತಾರಾಷ್ಟ್ರೀಯ ವಲಸೆ ಸಂಸ್ಥೆ ತಿಳಿಸಿದೆ. ಅಕ್ಟೋಬರ್ 8–9ರ ರಾತ್ರಿ ಜಿಬೂಟಿಯಿಂದ ಯೆಮೆನ್‌ಗೆ ಹೊರಟಿದ್ದ ಅತಿಯಾದ ಜನರನ್ನು ಹೊಂದಿದ್ದ ದೋಣಿ ಮುಳುಗಡೆಯಾಗಿತ್ತು. ಘಟನೆಯಲ್ಲಿ ಸುಮಾರು 84 ಜನರು ಇನ್ನೂ ನಾಪತ್ತೆಯಾಗಿದ್ದಾರೆ ಎಂದು ಐಒಎಂ ಹೇಳಿದೆ. ಒಟ್ಟು 305ರ ಜನರನ್ನು ಹೊತ್ತಿದ್ದ ಈ ದೋಣಿಯು ಜಿಬೂಟಿಯ ಓಬೋಕ್ ಪಟ್ಟಣದ ಉತ್ತರ ಭಾಗದಲ್ಲಿ ಮುಳುಗಡೆಯಾಗಿದೆ ಎಂದು ಬದುಕುಳಿದವರು ತಿಳಿಸಿದ್ದಾರೆ. ಇದು ಅತ್ಯಂತ ದುರದೃಷ್ಟಕರ ಮತ್ತು ಭೀಕರ ದುರಂತವಾಗಿದೆ. ಸದ್ಯ ವಿವಿಧ ತಂಡಗಳು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿವೆ ಎಂದು ಜಿಬೂಟಿಯ ಐಒಎಂ ಮಿಷನ್ ಮುಖ್ಯಸ್ಥ ಅಲೆಕ್ಸಾಂಡರ್ ಕೊಯಿಸಾಕ್ ತಿಳಿಸಿದ್ದಾರೆ. ಈ ವಲಸೆ ಮಾರ್ಗದಲ್ಲಿ ಆರ್ಥಿಕ ಅವಕಾಶಗಳನ್ನು ಹುಡುಕುತ್ತಾ ಬಾಬ್ ಎಲ್ ಮಂಡೇಬ್ ಜಲಮಾರ್ಗವನ್ನು ದಾಟಿ ಯೆಮೆನ್ ಮತ್ತು ಗಲ್ಫ್ ರಾಷ್ಟ್ರಗಳಿಗೆ ತಲುಪಲು ವಲಸಿಗರು ಎದುರಿಸುತ್ತಿರುವ ಅಪಾಯಗಳಿಗೆ ಈ ದುರಂತವು ಒಂದು ಉದಾಹರಣೆಯಾಗಿದೆ. ಪತ್ತೆಯಾದ ಶವಗಳಲ್ಲಿ 52 ಪುರುಷರು, 42 ಮಹಿಳೆಯರು ಮತ್ತು 15 ಮಕ್ಕಳು ಇದ್ದಾರೆ. ಹಡಗು ದುರಂತದಲ್ಲಿ 80ಕ್ಕೂ ಹೆಚ್ಚು ಜನರು ಬದುಕುಳಿದಿದ್ದಾರೆ. ಎಲ್ಲರೂ ಇಥಿಯೋಪಿಯನ್ ಪ್ರಜೆಗಳಾಗಿದ್ದಾರೆ ಎಂದು ಸಂಸ್ಥೆ ಮಾಹಿತಿ ನೀಡಿದೆ.

### ನೇಪಾಳದಲ್ಲಿ ಮತ್ತೆ ಪ್ರವಾಹ: 10 ಜನರು ನಾಪತ್ತೆ

**ಕಠ್ಮಂಡು:** ನೇಪಾಳದಲ್ಲಿ ಮತ್ತೆ ಪ್ರವಾಹ ಅಬ್ಬರಿಸಿದೆ. ಗೋರ್ಖಾ ಜಿಲ್ಲೆಯ ಬುಧಿ ಗಂಡಕಿ ನದಿಯಲ್ಲಿ ಮುಂಜಾನೆ ಸಂಭವಿಸಿದ ಹಠಾತ್ ಪ್ರವಾಹದಿಂದ 12ಕ್ಕೂ ಹೆಚ್ಚು ಮನೆಗಳು ಹಾಗೂ ಸೇತುವೆಗಳು ಕೊಚ್ಚಿಕೊಂಡು ಹೋಗಿದ್ದು, ಎರಡು ಜಲವಿದ್ಯುತ್ ಯೋಜನೆಗಳಿಗೆ ಹಾನಿ ಉಂಟಾಗಿದೆ. ಸುಮಾರು 50 ಜನರನ್ನು ರಕ್ಷಿಸಿದ್ದು, ಗ್ರಾಮಸ್ಥರಿಗೆ ಸುರಕ್ಷಿತ



ಸ್ಥಳಗಳಿಗೆ ತೆರಳುವಂತೆ ಅಧಿಕಾರಿಗಳು ಸೂಚಿಸಿದ್ದಾರೆ. ಅಲ್ಲದೆ, ಹಠಾತ್ ಪ್ರವಾಹದಲ್ಲಿ, ಕನಿಷ್ಠ 10 ಜನರು ನಾಪತ್ತೆಯಾಗಿದ್ದು, ಆದರೆ ಪ್ರಾಣಹಾನಿಯ ಬಗ್ಗೆ ತಕ್ಷಣದ ವರದಿಗಳು ಲಭ್ಯವಾಗಿಲ್ಲ. ನದಿ ತೀರದಲ್ಲಿರುವ ಜನರು ಜಾಗರೂಕರಾಗಿರಬೇಕು ಮತ್ತು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳ್ಳಬೇಕು ಎಂದು ಗೋರ್ಖಾ ಜಿಲ್ಲಾಡಳಿತದ ಅಧಿಕಾರಿಗಳು ಮನವಿ ಮಾಡಿದ್ದಾರೆ. ಈ ಪ್ರವಾಹವು ಸಲ್ಲೇರಿ, ಪೈಯುಕಾ ಮತ್ತು ಜಗತ್‌ನ ನದಿ ಪಾತ್ರದಲ್ಲಿರುವ ಮನೆಗಳನ್ನು ಹಾಗೂ ವಾರ್ಡ್‌ಗಳನ್ನು ಸಂಪರ್ಕಿಸುವ ತೂಗು ಸೇತುವೆಯನ್ನು ಕೊಚ್ಚಿಕೊಂಡು ಹೋಗಿದೆ ಎಂದು 'ಕಠ್ಮಂಡು ಪೋಸ್ಟ್' ವರದಿ ಮಾಡಿದೆ. ಆಗಸ್ಟ್ 26, 2026ರಂದು ಭೋಟೇಕೋಶಿ ಮತ್ತು ತ್ರಿಶೂಲಿ ನದಿಗಳಲ್ಲಿ ಸಂಭವಿಸಿದ ವಿನಾಶಕಾರಿ ಪ್ರವಾಹದ ಸುಮಾರು ಒಂದೂವರೆ ತಿಂಗಳ ಬಳಿಕ ನೇಪಾಳದ ಬುಧಿ ಗಂಡಕಿ ನದಿಯಲ್ಲಿ ಈ ಪ್ರವಾಹ ಉಂಟಾಗಿದೆ. ನೇಪಾಳ–ಚೀನಾ ಗಡಿಯ ಪರ್ವತ ಪ್ರದೇಶದಲ್ಲಿ ಆಗಸ್ಟ್‌ನಲ್ಲಿ ಸಂಭವಿಸಿದ ವಿನಾಶಕಾರಿ ಪ್ರವಾಹದಿಂದಾಗಿ 1,400ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು ಮತ್ತು ಸಾವಿರಾರು ಜನರು ನಾಪತ್ತೆಯಾಗಿದ್ದರು. ದೇಶವು ಇನ್ನೂ ಆ ದುರಂತದಿಂದ ಚೇತರಿಸಿಕೊಳ್ಳುತ್ತಿರುವ ಹೊತ್ತಲ್ಲೇ ಮತ್ತೊಂದು ದುರಂತ ಸಂಭವಿಸಿದೆ. ಬುಧಿ ಗಂಡಕಿ ನದಿಯಲ್ಲಿ ನೀರಿನ ಮಟ್ಟ ಹಠಾತ್ ಏರಿಕೆಯಾಗಲು ನಿಖರ ಕಾರಣ ತಿಳಿದುಬಂದಿಲ್ಲ. ಚುಮ್ನುಬ್ರಿ–6 ರ ಲೋಕ್ಪಾ ಮತ್ತು ಚುಮ್ಲಿಂಗ್ ನಡುವೆ ಹರಿಯುವ ಬುಧಿ ಗಂಡಕಿಯ ಉಪನದಿಯಾದ 'ಸ್ಯಾರ್' ಹೊಳೆಯ ಹರಿವಿಗೆ ಅಡಚಣೆ ಉಂಟಾಗಿ ಪ್ರವಾಹ ಸಂಭವಿಸಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

# ಆನಂದ್ ಇಂದ ಶುರುವಾಗಿರುವ ಬಾಂಧವ್ಯ A for Anandವರೆಗೂ

## ಶಿವಣ್ಣನೊಂದಿಗೆ ತಾರಾ ಅನುರಾಧ ಸ್ಕ್ರೀನ್ ಶೇರ್

ಕರುನಾಡ ಚಕ್ರವರ್ತಿ ಡಾ.ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯ ಮುಂದಿನ ಬಹುನಿರೀಕ್ಷಿತ 'ಎ ಫಾರ್ ಆನಂದ್' ಚಿತ್ರತಂಡ, ತನ್ನ ಹೊಸ ಪ್ರಮುಖ ಪಾತ್ರವನ್ನು ಇಂಟ್ರೆಸ್ಟಿಂಗ್ ಗ್ಲಿಂಪ್ಸ್ ಮೂಲಕ ಅಧಿಕೃತವಾಗಿ ಘೋಷಿಸಿದೆ. ಬಹುತಾರಾಗಣದ ಈ ಚಿತ್ರದಲ್ಲಿ ಹಿರಿಯ ತಾರೆ ತಾರಾ ಅನುರಾಧ ಪ್ರಮುಖ ಪಾತ್ರವೊಂದನ್ನು ನಿರ್ವಹಿಸಿದ್ದಾರೆ.

ಇತ್ತೀಚೆಗಷ್ಟೇ ಚಿತ್ರತಂಡಕ್ಕೆ ಬಾಲಿವುಡ್ ನಟಿ ರವೀನಾ ಟಂಡನ್ ಅವರ ಎಂಟ್ರಿಯಾಗಿತ್ತು. ಇದೀಗ ತಾರಾ ಅನುರಾಧ ಅವರ ನೋಟವನ್ನು ಪರಿಚಯಿಸಿದೆ ಗೀತಾ ಪಿಕ್ಚರ್ಸ್. ಗ್ಲಿಂಪ್ಸ್ ಹಂಚಿಕೊಂಡ ಚಿತ್ರತಂಡ, "ಆನಂದ್ ಇಂದ ಶುರುವಾಗಿರುವ ಬಾಂಧವ್ಯ A For Anandವರೆಗೂ ಬಂದಿದೆ. ತಾರಾ ಅನುರಾಧ ಅವರನ್ನು ತಂಡಕ್ಕೆ ಸ್ವಾಗತಿಸುತ್ತಿದ್ದೇವೆ. 'ಎ ಫಾರ್ ಆನಂದ್' ಚಿತ್ರೀಕರಣ ಆರಂಭ" ಎಂದು ಬರೆದುಕೊಂಡಿದೆ.

ಸಿಂಗೀತಂ ಶ್ರೀನಿವಾಸ ರಾವ್ ನಿರ್ದೇಶಿಸಿದ್ದ ಆನಂದ್ ಸಿನಿಮಾದಲ್ಲಿ ತಾರಾ ಅನುರಾಧ ಕಾಣಿಸಿಕೊಂಡಿದ್ದರು. ಶಿವರಾಜ್‌ಕುಮಾರ್, ಸುಧಾರಾಣಿ ಮುಖ್ಯಭೂಮಿಕೆಯ ಈ ಚಿತ್ರ 1986ರ ಜೂನ್ 19ರಂದು ತೆರೆಕಂಡು ಯಶಸ್ವಿಯಾಗಿತ್ತು. ಸದ್ಯ ಈ ಚಿತ್ರದಲ್ಲಿ ತಾರಾ ಅವರು ಯಾವ ರೀತಿಯ ಪಾತ್ರ ನಿರ್ವಹಿಸುತ್ತಿದ್ದಾರೆಂದು ಅಭಿಮಾನಿಗಳು ಕುತೂಹಲ ವ್ಯಕ್ತಪಡಿಸುತ್ತಿದ್ದಾರೆ.

**ಮತ್ತೆ ಚಂದನವನಕ್ಕೆ ಬಂದ ರವೀನಾ ಟಂಡನ್:** ಕರುನಾಡು ಮತ್ತು ಕನ್ನಡ ಚಿತ್ರರಂಗದೊಂದಿಗೆ ರವೀನಾ ಟಂಡನ್ ಅವರಿಗೆ ದಶಕಗಳ ಅವಿನಾಭಾವ ಹಾಗೂ ಭಾವನಾತ್ಮಕ ನಂಟಿದೆ. 1999ರಲ್ಲಿ ಬಿಡುಗಡೆಯಾಗಿದ್ದ ಉಪೇಂದ್ರ ಚಿತ್ರದ ಮೂಲಕ ಚಂದನವನಕ್ಕೆ ಕಾಲಿಟ್ಟ ರವೀನಾ, ತಮ್ಮ ಅಮೋಘ ಅಭಿನಯದ ಮೂಲಕ ಕನ್ನಡಿಗರ ಮನಗೆದ್ದಿದ್ದರು. ಸುದೀರ್ಘ ಅಂತರದ ನಂತರ ಪ್ರಶಾಂತ್ ನೀಲ್ ನಿರ್ದೇಶನದ ಕೆಜಿಎಫ್: ಚಾಪ್ಟರ್ 2 ಮೂಲಕ ಪ್ಯಾನ್-ಇಂಡಿಯಾ ಮಟ್ಟದಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿದ್ದರು. ಇದೀಗ ಮತ್ತೊಮ್ಮೆ ಕನ್ನಡಕ್ಕೆ ಮರಳಿರುವ ಈ ಗ್ಲಾಮರಸ್ ಹಾಗೂ ಪ್ರತಿಭಾವಂತ ತಾರೆ, ಶಿವಣ್ಣನೊಂದಿಗೆ ಇದೇ ಮೊದಲ ಬಾರಿಗೆ ಸ್ಕ್ರೀನ್ ಶೇರ್ ಮಾಡುತ್ತಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಪ್ರೆಸಿಡೆನ್ಸಿ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ಅವರ ಭಾಗದ ಚಿತ್ರೀಕರಣಕ್ಕೆ ಅದ್ಧೂರಿಯಾಗಿ ಚಾಲನೆ ಸಿಕ್ಕಿದೆ. ಮೊದಲ ದಿನ ವಿಶೇಷ ಪೂಜೆ ಕೂಡಾ ನೆರವೇರಿತ್ತು. ಈ ವೇಳೆ ವಿಶ್ವವಿದ್ಯಾಲಯದ ಸಂಸ್ಥಾಪಕ ಅಧ್ಯಕ್ಷ ಡಾ.ನಿಸಾರ್ ಅಹ್ಮದ್ ಅವರ ಸಮ್ಮುಖದಲ್ಲಿ ರವೀನಾ ಟಂಡನ್ ಅವರಿಗೆ ಸನ್ಮಾನ ಮಾಡಲಾಯಿತು. ಕ್ಯಾಂಪಸ್ ಪರಿಸರದಲ್ಲಿ ರವೀನಾ ಅವರನ್ನೊಳಗೊಂಡ ಮಹತ್ವದ ದೃಶ್ಯಗಳ ಚಿತ್ರೀಕರಣ ಭರದಿಂದ ಸಾಗುತ್ತಿದ್ದು, ಅವರ ಪಾತ್ರ ಸಿನಿಮಾದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಇರಲಿದೆ ಎಂದು ಚಿತ್ರತಂಡ ಮಾಹಿತಿ ಹಂಚಿಕೊಂಡಿದೆ.

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರಿಗೆ ಈ ಹಿಂದೆ ಘೋಸ್ಟ್ ಎಂಬ ಥ್ರಿಲ್ಲರ್ ಸಿನಿಮಾ ನೀಡಿದ್ದ ನಿರ್ದೇಶಕ ಎಂ.ಜಿ. ಶ್ರೀನಿವಾಸ್ ಅವರೀಗ ಎ ಫಾರ್ ಆನಂದ್ ಮೂಲಕ ಮತ್ತೊಂದು ವಿಶಿಷ್ಟ ಕಥೆಯೊಂದಿಗೆ ಪ್ರೇಕ್ಷಕರನ್ನು ಎದುರುಗೊಳ್ಳಲು ಸಜ್ಜಾಗುತ್ತಿದ್ದಾರೆ. ವೇದ, ಭೈರತಿ ರಣಗಲ್, ಪಬ್ಬಾರ್ ನಂತರ ಸಿನಿಮಾಗಳನ್ನು ನಿರ್ಮಿಸಿರುವ ಗೀತಾ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಗೀತಾ ಶಿವರಾಜ್‌ಕುಮಾರ್ ಅತ್ಯಂತ ಅದ್ದೂರಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ 4ನೇ ಸಿನಿಮಾ ಇದಾಗಿದೆ. ಬಹುನಿರೀಕ್ಷಿತ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸುತ್ತಿದ್ದು, ಮಹೇಂದ್ರ ಸಿಂಹ ಅವರ ಛಾಯಾಗ್ರಹಣ ಹಾಗೂ ದೀಪು ಎಸ್.ಕುಮಾರ್ ಅವರ ಸಂಕಲನವಿರಲಿದೆ.



# ಸ್ಟಾರ್‌ಗಿರಿಗಿಂತ ಬೆಂಗಳೂರಿನಲ್ಲಿ ಬಸ್ ಕಂಡಕ್ಟರ್ ಆಗಿದ್ದ ದಿನಗಳೇ ಬೆಸ್ಟ್!

## ಆ ದಿನಗಳನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂದ ರಜನಿಕಾಂತ್

**ಚೆನ್ನೈ:** ಸೂಪರ್ ಸ್ಟಾರ್ ರಜನಿಕಾಂತ್ ಅಂದರೆ ಅಭಿಮಾನಿಗಳಿಗೆ ಎಲ್ಲಿಲ್ಲದ ಕ್ರೇಜ್. ಕೈಯಲ್ಲಿ ಸಿಗರೇಟ್ ಹಿಡಿಯುವ ರೀತಿ, ನಡೆಯುವ ಸ್ಟೈಲ್ ಮತ್ತು ವಿಶಿಷ್ಟವಾದ ನಗುವಿಗೆ, ಮಲೇಷ್ಯಾ ಪ್ರಧಾನಿಯಿಂದ ಹಿಡಿದು ವಿಶ್ವಾದ್ಯಂತ ಕೋಟ್ಯಂತರ ಜನರು ಮರುಳಾಗಿದ್ದಾರೆ. ಆದರೆ, ಕೋಟ್ಯಂತರ ಅಭಿಮಾನಿಗಳ ಪಾಲಿನ ಈ ಆರಾಧ್ಯದೈವನಿಗೆ ಸ್ಟಾರ್‌ಗಿರಿಗಿಂತ ಬಸ್ ಕಂಡಕ್ಟರ್ ಆಗಿದ್ದ ದಿನಗಳೇ ಬೆಸ್ಟ್ ಅಂತೆ. ಹೌದು, ಬೆಂಗಳೂರಿನ ಆ ದಿನಗಳನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂದು ಕಾರ್ಯಕ್ರಮವೊಂದರಲ್ಲಿ ರಜನಿಕಾಂತ್ ಹೇಳಿದ್ದಾರೆ. ಆ ಕುರಿತ ವರದಿ ಇಲ್ಲಿದೆ:

ಸೂಪರ್‌ಸ್ಟಾರ್ ರಜನಿಕಾಂತ್ ತಮ್ಮ ಜೈಲರ್ 2 ಚಿತ್ರದ ಪ್ರಚಾರದ ಅಂಗವಾಗಿ ಸನ್ ನೆಕ್ಸ್ಟ್ ಒಟಿಪಿಯಲ್ಲಿ ಪ್ರಸಾರವಾದ ವಿಶೇಷ ಕಾರ್ಯಕ್ರಮದಲ್ಲಿ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ. ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದ ನಿರ್ದೇಶಕ ನೆಲ್ಸನ್ ದಿಲೀಪ್‌ಕುಮಾರ್ ಅವರು, "ನಿಮ್ಮ ಈ ಸರಳತೆ ಹುಟ್ಟಿನಿಂದ ಬಂದಿದ್ದಾ ಅಥವಾ ನೀವು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡಿದ್ದಾ?" ಎಂದು ಕೇಳಿದಾಗ, ರಜನಿಕಾಂತ್ ತಮ್ಮ ಹಳೆಯ ಬೆಂಗಳೂರಿನ ದಿನಗಳನ್ನು ನೆನಪಿಸಿಕೊಂಡಿದ್ದಾರೆ.

**ಕಂಡಕ್ಟರ್ ಕೆಲಸದ ಮೇಲೇ ಪ್ರೀತಿ:** ನಿರ್ದೇಶಕ ನೆಲ್ಸನ್ ಅವರು ರಜನಿಕಾಂತ್ ಅವರ ವಿನಮ್ರತೆಯ ಬಗ್ಗೆ ಪ್ರಶ್ನಿಸಿದಾಗ ಉತ್ತರಿಸಿದ ರಜನಿಕಾಂತ್, "ನನಗೆ ನಟನೆ ಇಷ್ಟ, ಆದರೆ ಅದಕ್ಕಿಂತ ಹೆಚ್ಚಾಗಿ ನಾನು ಬೆಂಗಳೂರಿನಲ್ಲಿ ನಡೆಸಿದ 5 ವರ್ಷಗಳ ಬಸ್ ಕಂಡಕ್ಟರ್ ಕೆಲಸವನ್ನು ಹೆಚ್ಚು ಇಷ್ಟಪಡುತ್ತಿದ್ದೆ ಮತ್ತು ಇಂದಿಗೂ ಆ ದಿನಗಳನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಆಳದಲ್ಲಿ ನಾನು ಇಂದಿಗೂ ಒಬ್ಬ ಕಂಡಕ್ಟರ್ ಎಂದೇ ಗುರುತಿಸಿಕೊಳ್ಳುತ್ತೇನೆ, ಎಂದಿಗೂ ಒಬ್ಬ ದೊಡ್ಡ ಸೂಪರ್‌ಸ್ಟಾರ್ ಎಂದು ಭಾವಿಸಿಲ್ಲ" ಎಂದಿದ್ದಾರೆ. ಜೊತೆಗೆ, ತಾವು ಇಂದಿಗೂ ಬೆಂಗಳೂರಿಗೆ ಹೆಚ್ಚಾಗಿ ಭೇಟಿ ನೀಡಲು ಇದೇ ಕಾರಣ ಎಂದಿರುವ ಅವರು, ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್‌ಗಳನ್ನು ನೋಡಿದಾಗ ತಮಗೆ ಹಳೆಯ ದಿನಗಳು ನೆನಪಾಗಿ ಮನಸ್ಸಿಗೆ ಅಪಾರ ಸಂತೋಷವಾಗುತ್ತದೆ ಎಂದು ಭಾವುಕರಾಗಿದ್ದಾರೆ.

**ತಮನ್ನಾ ಸಾಂಗ್ ಮಿಸ್ಸಿಂಗ್:** ಇದೇ ಕಾರ್ಯಕ್ರಮದಲ್ಲಿ ಜೈಲರ್ 2 ಚಿತ್ರದ ಬಗ್ಗೆ ಮಾತನಾಡಿದ ರಜನಿಕಾಂತ್, "ಈ ಸಿನಿಮಾದಲ್ಲಿ ನಟಿ ತಮನ್ನಾ ಭಾಟಿಯಾ ಅವರ ಒಂದು ಹಾಡು ಇಲ್ಲದಿರುವುದೇ ದೊಡ್ಡ ಮಿಸ್ಸಿಂಗ್ ಎಲಿಮೆಂಟ್" ಎಂದು ನೆಲ್ಸನ್ ಜೊತೆ ತಮಾಷೆ ಮಾಡಿದ್ದಾರೆ. ಅದಕ್ಕೆ, "ನಿಮಗೆ ಇಷ್ಟ ಎಂದ ಮಾತ್ರಕ್ಕೆ ನಾನು ಸಾಂಗ್ ಇಡಲು ಸಾಧ್ಯವಿಲ್ಲ ಸರ್" ಎಂದು ನೆಲ್ಸನ್ ಕಾಲೆಳೆದಿದ್ದಾರೆ. ಅದಕ್ಕೆ ರಜನಿಕಾಂತ್ ಚುರುಕಾಗಿ ಉತ್ತರಿಸಿ, "ನನಗೆ ಇಷ್ಟ ಬಂದಿದ್ದನ್ನೆಲ್ಲಾ ನಾನು ಮಾಡಿದ್ದರೆ ಇಷ್ಟೊತ್ತಿಗೆ ನನ್ನ ಮಾರ್ಕೆಟ್ ಕಳೆದುಕೊಂಡು ನಾನು ಬೆಂಗಳೂರಿಗೆ ವಾಪಸ್ ಹೋಗಬೇಕಾಗುತ್ತಿತ್ತು. ಪ್ರೇಕ್ಷಕರಿಗೆ ಏನು ಇಷ್ಟವೋ ಅದನ್ನು ಮಾಡುತ್ತಿರುವುದರಿಂದಲೇ ನಾನು ಇಂದಿಗೂ ಚಿತ್ರರಂಗದಲ್ಲಿ ಉಳಿದಿದ್ದೇನೆ" ಎಂದು ತಿಳಿಸಿದ್ದಾರೆ.

ಏತನ್ಮಧ್ಯೆ, ಜೈಲರ್ ಮೊದಲ ಭಾಗದಲ್ಲಿ ಕನ್ನಡದ ಸೂಪರ್‌ಸ್ಟಾರ್ ಶಿವರಾಜ್‌ಕುಮಾರ್ (ಶಿವಣ್ಣ) ಅವರು ನರಸಿಂಹ ಎಂಬ ಅತಿಥಿ ಪಾತ್ರದಲ್ಲಿ ಬಂದು ಥಿಯೇಟರ್‌ಗಳಲ್ಲಿ ಧೂಳೆಬ್ಬಿಸಿದ್ದರು. ಇದೀಗ ಜೈಲರ್ 2 ನಲ್ಲೂ ಶಿವಣ್ಣ ಅವರ ಪಾತ್ರ ಮುಂದುವರಿಯಲಿದ್ದು, ಈ ಬಾರಿ ಅವರ ಸ್ಕ್ರೀನ್ ಟೈಮ್ ಮತ್ತು ಆಕ್ಷನ್ ದೃಶ್ಯಗಳು ಮೊದಲ ಭಾಗಕ್ಕಿಂತಲೂ ಹೆಚ್ಚಿರಲಿವೆ ಎಂದು ಚಿತ್ರತಂಡ ಸುಳಿವು ನೀಡಿದೆ.



## ಜೈಲರ್ 2 ಅಡ್ವಾನ್ಸ್ ಬುಕಿಂಗ್

# ಭಾರತದಲ್ಲಿ 10+ ಲಕ್ಷ ಟಿಕೆಟ್ ಮಾರಾಟ, ಈಗಾಗಲೇ 304 ಶೋ ಹೌಸ್‌ಫುಲ್; ಚೆನ್ನೈ ಮುಂಚೂಣಿಯಲ್ಲಿ!

ಭಾರತೀಯ ಚಿತ್ರರಂಗದ ದಿಗ್ಗಜ ತಾರೆ ರಜನಿಕಾಂತ್ ಮುಖ್ಯಭೂಮಿಕೆಯ 'ಜೈಲರ್ 2' ಬಿಡುಗಡೆಗೆ ಇನ್ನೇನು 3 ದಿನಗಳು ಬಾಕಿ ಇದ್ದು, ಸಿನಿಪ್ರಿಯರಲ್ಲಿ ಈಗಾಗಲೇ ಭಾರಿ ಕುತೂಹಲ ಮೂಡಿಸಿದೆ. 2023ರ ಬ್ಲಾಕ್‌ಬಸ್ಟರ್ ಚಿತ್ರದ ಈ ಮುಂದುವರಿದ ಭಾಗವು ಭಾರತದಲ್ಲಿ ಉತ್ತಮ ಸಂಖ್ಯೆಯ ಮುಂಗಡ ಬುಕಿಂಗ್‌ಗಳನ್ನು ದಾಖಲಿಸುತ್ತಿದ್ದರೆ, ಅಮೆರಿಕ ಮತ್ತು ಯುಕೆಯಲ್ಲಿನ ಮುಂಗಡ ಮಾರಾಟವೂ ಈಗಾಗಲೇ ಗಮನಾರ್ಹ ಮೈಲಿಗಲ್ಲುಗಳನ್ನು ದಾಟಿದೆ. ಚಿತ್ರದ ಮೇಲಿನ ನಿರೀಕ್ಷೆಗಳು ಬೆಟ್ಟದಷ್ಟಿರುವ ಹಿನ್ನೆಲೆ, ಬಾಕ್ಸ್ ಆಫೀಸ್‌ನಲ್ಲಿ ತನ್ನ ಹಿಂದಿನ ಭಾಗದ ಯಶಸ್ಸಿನ ಮ್ಯಾಜಿಕ್ ಅನ್ನು ಮರುಸೃಷ್ಟಿಸಬಲ್ಲದೇ ಈ ಸೀಕ್ವೆಲ್ ಎಂಬುದರತ್ತ ಎಲ್ಲರ ಚಿತ್ತ ನೆಟ್ಟಿದೆ.

**'ಜೈಲರ್ 2' ಮುಂಗಡ ಬುಕಿಂಗ್‌ನ ಮೊತ್ತ ಭಾರತವೊಂದರಲ್ಲೇ 20 ಕೋಟಿ ರೂ.ಗಳ ಸನಿಹಕ್ಕೆ**

ಇತ್ತೀಚಿನ ಅಡ್ವಾನ್ಸ್ ಬುಕಿಂಗ್ ಅಂಕಿ-ಅಂಶಗಳ ಪ್ರಕಾರ, ಭಾರತದಲ್ಲಿ 3 ದಿನಗಳ ಶೋಗಳಿಂದ 'ಜೈಲರ್ 2' ಒಟ್ಟು 19.53 ಕೋಟಿ ರೂಪಾಯಿ ಗಳಿಸಿದೆ. ಬ್ಲಾಕ್ ಮಾಡಲಾದ ಆಸನಗಳನ್ನು ಹೊರತುಪಡಿಸಿ, 16.59 ಕೋಟಿ ರೂ.ಗಳಷ್ಟು ವ್ಯವಹಾರ ನಡೆದಿದೆ. ಈ ಚಿತ್ರವು 10,151 ಪ್ರದರ್ಶನಗಳಲ್ಲಿ ಸುಮಾರು 10.52 ಲಕ್ಷ ಟಿಕೆಟ್‌ಗಳನ್ನು ಮಾರಾಟ ಮಾಡಿದ್ದು, 304 ಪ್ರದರ್ಶನಗಳು 'ಹೌಸ್‌ಫುಲ್' ಆಗಿವೆ.




ಅಕ್ಟೋಬರ್ 15, ಗುರುವಾರದ 5,320 ಪ್ರದರ್ಶನಗಳಲ್ಲಿ 6.46 ಲಕ್ಷ ಟಿಕೆಟ್‌ಗಳು ಮಾರಾಟವಾಗಿದ್ದು, ಕಾಯ್ದಿರಿಸಿದ ಆಸನಗಳನ್ನೂ ಒಳಗೊಂಡಂತೆ ಒಟ್ಟು 12.26 ಕೋಟಿ ರೂ. ಮೌಲ್ಯದ ಬುಕಿಂಗ್ ದಾಖಲಾಗಿದೆ. ಶುಕ್ರವಾರದ ಬುಕಿಂಗ್ 3.64 ಕೋಟಿ ರೂ.ಗಳಷ್ಟಿದ್ದರೆ, ಶನಿವಾರದಂದು 3.63 ಕೋಟಿ ರೂ. ದಾಖಲಾಗಿದೆ.

# ಭಾರತ ವಿರುದ್ಧ ಸೋತರೂ ವಿಶ್ವದಾಖಲೆ ಬರೆದ ವೆಸ್ಟ್ ಇಂಡೀಸ್!

ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡ ಅಂತರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ಸೃಷ್ಟಿಸಿದೆ. ಇಂದೋರ್‌ನಲ್ಲಿ ಭಾರತ ವಿರುದ್ಧದ ಟಿ20ಐ ಸೋತರೂ, ಕೆರಿಬಿಯನ್ನರು ಯಾವುದೇ ತಂಡಗಳಿಗೂ ಸಾಧ್ಯವಾಗದ ದಾಖಲೆಯನ್ನು ನಿರ್ಮಿಸಿದ್ದಾರೆ.

ಹೋಳ್ಕರ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದಿದ್ದ ಮೂರನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 224 ರನ್‌ಗಳನ್ನು ಕಲೆಹಾಕಿತು. ಭಾರತದ ಪರ ಅಭಿಷೇಕ್ ಶರ್ಮಾ ಅದ್ಭುತ ಪ್ರದರ್ಶನ ನೀಡಿದರು. ಇನ್ನಿಂಗ್ಸ್ ಆರಂಭದಿಂದಲೇ ಆಕ್ರಮಣಕಾರ ವಿಧಾನವನ್ನು ಅಳವಡಿಸಿಕೊಂಡ ಅವರು ಮನ ಬಂದಂತೆ ಎದುರಾಳಿ ಬೌಲರ್‌ಗಳನ್ನು ದಂಡಿಸಿದರು. ಮೈದಾನದ ಮೂಲೆ ಮೂಲೆಗೆ ಚೆಂಡನ್ನು ಹೊಡೆಯುವ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.

ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಕೇವಲ 18 ಎಸೆತಗಳಲ್ಲೇ ಅರ್ಧಶತಕ ಪೂರ್ಣಗೊಳಿಸಿ ದಾಖಲೆಯನ್ನು ಬರೆದರು. ಅವರು ತಮ್ಮ ಈ ಆಕರ್ಷಕ ಇನ್ನಿಂಗ್ಸ್‌ನಲ್ಲಿ ಒಟ್ಟು 30 ಎಸೆತಗಳನ್ನು ಎದುರಿಸಿ 69 ರನ್‌ಗಳನ್ನು ಕಲೆಹಾಕಿದರು. ಇದರಲ್ಲಿ 6 ಬೌಂಡರಿ ಮತ್ತು 5 ಸಿಕ್ಸರ್‌ಗಳು ಸೇರಿದ್ದವು ಅವರ ಸ್ಟ್ರೈಕ್ ರೇಟ್ 230 ಆಗಿತ್ತು. ಇವರಲ್ಲದೆ ಇಶಾನ್ ಕಿಶನ್ ಸಹ ವೇಗದ ಬ್ಯಾಟಿಂಗ್ ಮೂಲಕ 37 ರನ್‌ಗಳಿಸಿದರೆ, ತಿಲಕ್ 28 ರನ್ ಅಕ್ಷರ್ ಪಟೇಲ್ 20, ನಿತೀಶ್ ಕುಮಾರ್ ರೆಡ್ಡಿ 20 ರನ್‌ಗಳ ಕೊಡುಗೆ ನೀಡಿದರು. ಇವರ ಬ್ಯಾಟಿಂಗ್ ಬಲದಿಂದ ಭಾರತ ಬೃಹತ್ ಮೊತ್ತವನ್ನು ಕಲೆಹಾಕುವಲ್ಲಿ ಯಶಸ್ವಿ ಆಯ್ತು.



ಬಳಿಕ ಈ ಗುರಿಯನ್ನು ಬೆನ್ನತ್ತಿದ ವೆಸ್ಟ್ ಇಂಡೀಸ್ ತಂಡ 20 ಓವರ್‌ಗಳಲ್ಲಿ ಏಳು ವಿಕೆಟ್‌ಗಳ ನಷ್ಟಕ್ಕೆ 209 ರನ್‌ಗಳಿಗೆ ಸೀಮಿತವಾಯಿತು. ಕೆರಿಬಿಯನ್ ತಂಡದ ಪರ ಕಮಿಲ್ ಪೂರನ್ (42 ರನ್), ಶಿಮ್ರಾನ್ ಹೆಟ್ಮೆಯರ್ (43), ಶೆರ್ಫಾನೆ ರೂದರ್‌ಫೋರ್ಡ್ (32), ಶಮರ್ ಸ್ಪ್ರಿಂಗರ್ 35 ರನ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಆದರೆ ತಂಡವನ್ನು ಗೆಲುವಿನ ದಡಕ್ಕೆ ಕೊಂಡೊಯ್ಯಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಭಾರತ ವಿರುದ್ಧ 14 ರನ್‌ಗಳಿಂದ ಸೋಲನ್ನು ಕಂಡಿತು. ಈ ಸೋಲಿನ ಹೊರತಾಗಿಯೂ, ಕೆರಿಬಿಯನ್ನರು ಇದುವರೆಗೆ ವಿಶ್ವದ ಯಾವುದೇ ತಂಡಗಳಿಗೂ ಸಾಧ್ಯವಾಗದ ದಾಖಲೆಯನ್ನು ಬರೆದರು.

ನಿನ್ನೆಯ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಸೋತರೂ, ತಂಡದ ಕೆಲವು ಬ್ಯಾಟರ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಸಂಚಲನ ಸೃಷ್ಟಿಸಿದರು. ಅವರು 140 ಕ್ಕಿಂತ ಹೆಚ್ಚು ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸಿದರು. ಈ ಅನುಕ್ರಮದಲ್ಲಿ, ಆರು ಬ್ಯಾಟರ್‌ಗಳು ಒಟ್ಟು 13 ಸಿಕ್ಸರ್‌ಗಳನ್ನು ಸಿಡಿಸಿದರು. ಶಮರ್ ಸ್ಪ್ರಿಂಗರ್ ನಾಲ್ಕು ಸಿಕ್ಸರ್ ಬಾರಿಸಿದರೆ, ಕಾಮಿಲ್ ಪೂರನ್ ಮೂರು, ಹೆಟ್ಮೆಯರ್ ಮತ್ತು ರುದರ್‌ಫೋರ್ಡ್ ತಲಾ ಎರಡು ಸಿಕ್ಸರ್‌ಗಳನ್ನು ಹೊಡೆದರು. ಇದರೊಂದಿಗೆ ವೆಸ್ಟ್ ಇಂಡೀಸ್ ವಿಶ್ವದಾಖಲೆಯನ್ನು ನಿರ್ಮಿಸಿತು. ಅಂತರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 2000 ಸಿಕ್ಸರ್‌ಗಳ ಮೈಲಿಗಲ್ಲನ್ನು ಪೂರ್ಣಗೊಳಿಸಿತು.

**ಟಿ20 ಅಂತರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹೆಚ್ಚು ಸಿಕ್ಸರ್ ಬಾರಿಸಿದ ತಂಡಗಳು**

**ವೆಸ್ಟ್ ಇಂಡೀಸ್ – 2010 ಸಿಕ್ಸರ್, ಭಾರತ – 1997, ನ್ಯೂಜಿಲೆಂಡ್ – 1585, ಪಾಕಿಸ್ತಾನ – 1500, ದಕ್ಷಿಣ ಆಫ್ರಿಕಾ – 1407, ಇಂಗ್ಲೆಂಡ್ – 1406**

# ವೆಸ್ಟ್ ಇಂಡೀಸ್ ವಿರುದ್ಧ ವೇಗದ ಅರ್ಧಶತಕ ಸಿಡಿಸಿದ ಟಾಪ್ 5 ಭಾರತೀಯರು

ಭಾನುವಾರ ನಡೆದಿದ್ದ ವೆಸ್ಟ್ ಇಂಡೀಸ್ ವಿರುದ್ಧ ಮೂರನೇ ಟಿ20 ಪಂದ್ಯದಲ್ಲಿ ಭಾರತ ತಂಡ ವೆಸ್ಟ್ ಇಂಡೀಸ್ ಅನ್ನು 14 ರನ್‌ಗಳಿಂದ ಮಣಿಸಿತು. ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮಾ ಸಿಡಲಬ್ಬರದ ಬ್ಯಾಟಿಂಗ್ ಮೂಲಕ ಇತಿಹಾಸ ನಿರ್ಮಿಸಿದರು. ಅವರು 30 ಎಸೆತಗಳಲ್ಲಿ 6 ಬೌಂಡರಿ ಮತ್ತು 5 ಸಿಕ್ಸರ್‌ಗಳೊಂದಿಗೆ 69ರನ್ ಗಳಿಸಿದರು. ಅಭಿಷೇಕ್ ಅವರ ಇನ್ನಿಂಗ್ಸ್‌ನ ಬಲದಿಂದ ಭಾರತ 20 ಓವರ್‌ಗಳಲ್ಲಿ 223 ರನ್ ಗಳಿಸಿತು, ವೆಸ್ಟ್ ಇಂಡೀಸ್ 7 ವಿಕೆಟ್‌ಗಳಿಗೆ 209 ರನ್ ಗಳಿಸಿಲಷ್ಟೇ ಶಕ್ತವಾಯ್ತು. ಈ ಗೆಲುವಿನೊಂದಿಗೆ ಭಾರತ ಸರಣಿಯಲ್ಲಿ 2-1 ಮುನ್ನಡೆ ಸಾಧಿಸಿದೆ. ಅಭಿಷೇಕ್ ತಮ್ಮ ಸ್ಫೋಟಕ ಇನ್ನಿಂಗ್ಸ್ ಮೂಲಕ ಅನೇಕ ದಾಖಲೆಗಳನ್ನು ನಿರ್ಮಿಸಿದ್ದಾರೆ.

**ವಿರಾಟ್ ಕೊಹ್ಲಿ ದಾಖಲೆ ಮುರಿದ ಅಭಿಷೇಕ್ ಶರ್ಮಾ:** ಅಭಿಷೇಕ್ ವೆಸ್ಟ್ ಇಂಡೀಸ್ ವಿರುದ್ಧ ಅಂತರಾಷ್ಟ್ರೀಯ ಟಿ20 ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಅತ್ಯಂತ ವೇಗದ ಭಾರತೀಯ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಭಿಷೇಕ್ ಮೂರನೇ ಟಿ20 ಪಂದ್ಯದಲ್ಲಿ ಕೇವಲ 18 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು, ವಿರಾಟ್ ಕೊಹ್ಲಿ ಮತ್ತು ಸಂಜು ಸ್ಯಾಮ್ಸನ್ ಅವರ ದಾಖಲೆಯನ್ನು ಹಿಂದಿಕ್ಕಿದರು. ಕೊಹ್ಲಿ 2019ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 21 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದರು. ಅದೇ ಸಮಯದಲ್ಲಿ ಸ್ಯಾಮ್ಸನ್ ಅದೇ ಸರಣಿಯ ಎರಡನೇ ಟಿ20 ಪಂದ್ಯದಲ್ಲಿ 21 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ್ದರು.



**ವೆಸ್ಟ್ ಇಂಡೀಸ್ ವಿರುದ್ಧ ವೇಗದ ಅರ್ಧಸತಕ ಸಿಡಿಸಿದ ಟಾಪ್ 5 ಭಾರತೀಯ ಬ್ಯಾಟರ್‌ಗಳು:** ಅಭಿಷೇಕ್ ಶರ್ಮಾ – 18 ಎಸೆತಗಳು, 2026, ವಿರಾಟ್ ಕೊಹ್ಲಿ – 21 ಎಸೆತಗಳು, 2019, ಸಂಜು ಸ್ಯಾಮ್ಸನ್ – 21 ಎಸೆತಗಳು, 2026, ರೋಹಿತ್ ಶರ್ಮಾ – 22 ಎಸೆತಗಳು, 2016, ರೋಹಿತ್ ಶರ್ಮಾ – 23 ಎಸೆತಗಳು, 2019, ಸೂರ್ಯಕುಮಾರ್ ಯಾದವ್ – 23 ಎಸೆತ, 2023

ಅಭಿಷೇಕ್ ಶರ್ಮಾ ವೆಸ್ಟ್ ಇಂಡೀಸ್ ವಿರುದ್ಧ ಅತ್ಯಂತ ಕಡಿಮೆ ಸ್ವರೂಪದಲ್ಲಿ ಜಂಟಿಯಾಗಿ ಮೂರನೇ ಅತಿ ವೇಗದ ಅರ್ಧಶತಕ ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ. ಡೇವಿಡ್ ವಾರ್ನರ್ ಮತ್ತು ಕಾಲಿನ್ ಮನ್ರೋ ಕೂಡ ವೆಸ್ಟ್ ಇಂಡೀಸ್ ವಿರುದ್ಧ 18 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದಾರೆ. 2023ರಲ್ಲಿ ಕೇವಲ 15 ಎಸೆತಗಳಲ್ಲಿ ಮೈಲಿಗಲ್ಲು ತಲುಪಿದ ಕ್ವಿಂಟನ್ ಡಿ ಕಾಕ್ ಕೆರಿಬಿಯನ್ ತಂಡದ ವಿರುದ್ಧ ವೇಗದ ಅರ್ಧಶತಕ ಸಿಡಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಅಭಿಷೇಕ್ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 2,000 ರನ್‌ಗಳನ್ನು ಪೂರ್ಣಗೊಳಿಸಿದರು. ಎದುರಿಸಿದ ಎಸೆತಗಳ ವಿಷಯದಲ್ಲಿ, ಈ ಸ್ವರೂಪದಲ್ಲಿ 2,000 ರನ್‌ಗಳನ್ನು ತಲುಪಿದ ಅತ್ಯಂತ ವೇಗದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಎಡಗೈ ಬ್ಯಾಟ್ಸ್‌ಮನ್ ಕೇವಲ 1,024 ಎಸೆತಗಳಲ್ಲಿ ಈ ಸಾಧನೆ ಮಾಡಿದರು.

**ಪಂದ್ಯ ಹೈಲೈಟ್**

**ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ಕಳಪೆ ಆರಂಭ ಪಡೆದುಕೊಂಡಿತು. ಹಿಂದಿನ ಪಂದ್ಯದಲ್ಲಿ 82 ರನ್‌ಗಳ ಅಮೋಘ ಇನ್ನಿಂಗ್ಸ್ ಆಡಿದ್ದ ಸಂಜು ಸ್ಯಾಮ್ಸನ್ ಈ ಪಂದ್ಯದಲ್ಲಿ ಕೇವಲ 3 ರನ್‌ಗಳಿಗೆ ಔಟಾದರು. ಶೆಮರ್ ಜೋಸೆಫ್ ಸ್ಯಾಮ್ಸನ್ ಅವರನ್ನು ಪೆವಿಲಿಯನ್‌ಗೆ ಕಳುಹಿಸಿದರು. ಆದಾಗ್ಯೂ, ಮೊದಲ ವಿಕೆಟ್ ಪತನವೂ ಅಭಿಷೇಕ್ ಅವರ ಬ್ಯಾಟಿಂಗ್ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಅವರು ವೇಗವಾಗಿ ರನ್ ಗಳಿಸಿದರು ಮತ್ತು ಕೆರಿಬಿಯನ್ ಬೌಲರ್‌ಗಳ ಮೇಲೆ ಸಂಪೂರ್ಣವಾಗಿ ಪ್ರಾಬಲ್ಯ ಸಾಧಿಸಿದರು. ಇದರಿಂದಾಗಿ ಟೀಮ್ ಇಂಡಿಯಾ ಆರು ಓವರ್‌ಗಳ ಪವರ್‌ಪ್ಲೇನಲ್ಲಿ 87 ರನ್ ಗಳಿಸುವಲ್ಲಿ ಯಶಸ್ವಿಯಾಯಿತು.**

# 5 ವಿಕೆಟ್ ಪಡೆದು ರಣಜಿಯಲ್ಲಿ ಸಂಚಲನ ಸೃಷ್ಟಿಸಿದ ರೋಹಿತ್ ಶರ್ಮಾ!

92ನೇ ಆವೃತ್ತಿಯ ರಣಜಿ ಟ್ರೋಫಿ ಭಾನುವಾರದಿಂದ ಪ್ರಾರಂಭಗೊಂಡಿದ್ದು ಮೊದಲ ದಿನದಂದೆ ಕೆಲ ಆಟಗಾರರು ಅದ್ಭುತ ಪ್ರದರ್ಶನ ನೀಡುವ ಮೂಲಕ ಗಮನ ಸೆಳೆದಿದ್ದಾರೆ. ಅದರಲ್ಲೂ ರೋಹಿತ್ ಶರ್ಮಾ 5 ವಿಕೆಟ್ ಪಡೆಯುವ ಮೂಲಕ ಭಾರಿ ಸಂಚಲನ ಸೃಷ್ಟಿಸಿದ್ದಾರೆ.

ಶ್ರೀನಗರದ ಶೇರ್-ಎ-ಕಾಶ್ಮೀರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿಯ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಜಮ್ಮು ಮತ್ತು ಕಾಶ್ಮೀರ ಮತ್ತು ಮಧ್ಯಪ್ರದೇಶ ಮುಖಾಮುಖಿ ಆಗಿವೆ. ಈ ಪಂದ್ಯದಲ್ಲಿ, ಜಮ್ಮು ಮತ್ತು ಕಾಶ್ಮೀರದ ಬೌಲರ್‌ಗಳು ಅದ್ಭುತ ಪ್ರದರ್ಶನ ಮೂಲಕ ಮೊದಲ ದಿನದಂದು ಮಧ್ಯಪ್ರದೇಶವನ್ನು 196 ರನ್‌ಗಳಿಗೆ ಆಲೌಟ್ ಮಾಡುವಲ್ಲಿ ಯಶಸ್ವಿ ಆದರು. ಸುಮಾರು ಎರಡು ವರ್ಷಗಳ ನಂತರ ರಣಜಿ ತಂಡಕ್ಕೆ ಮರಳಿರುವ ವೇಗಿ ರೋಹಿತ್ ಶರ್ಮಾ ಐದು ವಿಕೆಟ್‌ಗಳನ್ನು ಕಬಳಿಸಿದರು. 32 ವರ್ಷದ ಈ ಬೌಲರ್ 21.2 ಓವರ್‌ಗಳಲ್ಲಿ ಕೇವಲ 36 ರನ್‌ಗಳಿಗೆ 5 ವಿಕೆಟ್‌ಗಳನ್ನು ಉರುಳಿಸಿದರು.

ಈ ಪಂದ್ಯದಲ್ಲಿ, ಜಮ್ಮು ಮತ್ತು ಕಾಶ್ಮೀರ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿತು. ವೇಗಿ ರೋಹಿತ್ ಶರ್ಮಾ ಆರಂಭದಲ್ಲಿ ಎರಡು ವಿಕೆಟ್‌ಗಳನ್ನು ಪಡೆಯುವ ಮೂಲಕ ಮಧ್ಯಪ್ರದೇಶದ ಮೇಲೆ ಒತ್ತಡ ಹೇರಿದರು. ಆದಾಗ್ಯೂ, ಮಧ್ಯಪ್ರದೇಶದ ನಾಯಕ ಶುಭಮ್ ಶರ್ಮಾ ಮತ್ತು ಚಂಚಲ್ ರಾಥೋಡ್ ನಾಲ್ಕನೇ ವಿಕೆಟ್‌ಗೆ 65 ರನ್‌ಗಳನ್ನು ಸೇರಿಸಿ ಇನ್ನಿಂಗ್ಸ್ ಸುಧಾರಿಸಲು ಪ್ರಯತ್ನಿಸಿದರು. ಆದರೆ ರೋಹಿತ್, ಚಂಚಲ್ ಅವರನ್ನು ಔಟ್ ಮಾಡುವ ಮೂಲಕ ಈ ಪಾಲುದಾರಿಕೆಯನ್ನು ಮುರಿದರು.



ಬಳಿಕ ನಾಯಕ ಶುಭಮ್ ಶರ್ಮಾ, ಆರ್ಯನ್ ಪಾಂಡೆ ಅವರೊಂದಿಗೆ 51 ರನ್‌ಗಳ ಜೊತೆಯಾಟವಾಡಿದರು. ಕೊನೆಯಲ್ಲಿ, ರೋಹಿತ್ ಶರ್ಮಾ ಅದ್ಭುತ ಪ್ರದರ್ಶನ ಮೂಲಕ ಶತಕದತ್ತ ಸಾಗುತ್ತಿದ್ದ ಶುಭಮ್ ಶರ್ಮಾ (79 ರನ್‌ಗಳು) ಅವರನ್ನು ಔಟ್ ಮಾಡಿ ಮಧ್ಯಪ್ರದೇಶದ ಇನ್ನಿಂಗ್ಸ್ ಅನ್ನು 196 ರನ್‌ಗಳಿಗೆ ಕೊನೆಗೊಳಿಸಿದರು.

**ದೇಶೀಯ ಕ್ರಿಕೆಟ್‌ನಲ್ಲಿ ರೋಹಿತ್ ಶರ್ಮಾ ದಾಖಲೆ**

ಮಧ್ಯಪ್ರದೇಶ ವಿರುದ್ಧದ ಈ ಪಂದ್ಯಕ್ಕೂ ಮುನ್ನ, ರೋಹಿತ್ ಶರ್ಮಾ 22 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು ಮತ್ತು 34.66 ಸರಾಸರಿಯಲ್ಲಿ 39 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರ ಎರಡನೇ ಐದು ವಿಕೆಟ್ ಗೊಂಚಲು. ರೋಹಿತ್ ಎಂಟು ಲಿಸ್ಟ್ ಎ ಪಂದ್ಯಗಳು ಮತ್ತು ಐದು ಟಿ20ಐಗಳನ್ನು ಸಹ ಆಡಿದ್ದಾರೆ, ಎರಡೂ ಸ್ವರೂಪಗಳಲ್ಲಿ ಒಟ್ಟು ಎಂಟು ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಆದಾಗ್ಯೂ, ಅವರು ಟಿ20 ಕ್ರಿಕೆಟ್‌ನಲ್ಲಿ ಇನ್ನೂ ಒಂದೇ ಒಂದು ವಿಕೆಟ್ ಪಡೆದಿಲ್ಲ. ಹೆಚ್ಚುವರಿಯಾಗಿ, ಈ ತಿಂಗಳ ಆರಂಭದಲ್ಲಿ ಇರಾನಿ ಕಪ್‌ಗಾಗಿ ಜಮ್ಮು ಮತ್ತು ಕಾಶ್ಮೀರ ತಂಡಕ್ಕೆ ಅವರನ್ನು ಆಯ್ಕೆ ಮಾಡಲಾಯಿತು, ಆದರೆ ಅಂತಿಮ 11 ಆಟಗಾರರಲ್ಲಿ ಅವರನ್ನು ಸೇರಿಸಲಿಲ್ಲ. ಆ ಪಂದ್ಯವನ್ನು ರೆಸ್ಟ್ ಆಫ್ ಇಂಡಿಯಾ 167 ರನ್‌ಗಳಿಂದ ಗೆದ್ದುಕೊಂಡಿತು. ಈ ಪಂದ್ಯದಲ್ಲಿ ರೋಹಿತ್ ಶರ್ಮಾ ಅಲ್ಲದೆ ಎಡಗೈ ವೇಗಿ ಸುನಿಲ್ ಕುಮಾರ್ ಕೂಡ ಜಮ್ಮು ಪರ ಅದ್ಭುತ ಬೌಲಿಂಗ್ ಮಾಡಿ 4 ವಿಕೆಟ್ ಪಡೆದರೆ, ಆಕಿಬ್ ನಬಿ 1 ವಿಕೆಟ್ ಕಿತ್ತರು. ಬಳಿಕ ಬ್ಯಾಟಿಂಗ್ ಆರಂಭಿಸಿದ ಜಮ್ಮು ಮತ್ತು ಕಾಶ್ಮೀರ ಮೊದಲ ದಿನದಾಟದ ಅಂತ್ಯಕ್ಕೆ 1 ವಿಕೆಟ್ ಕಳೆದುಕೊಂಡು 3 ರನ್ ಗಳಿಸಿತ್ತು. ಶುಭಮ್ ಖಜುರಿಯಾ 10 ಎಸೆತಗಳಲ್ಲಿ ಒಂದೇ ಒಂದು ರನ್ ಗಳಿಸದೆ ಪೆವಿಲಿಯನ್‌ಗೆ ಸೇರಿದರು.

**ರೋಹಿತ್ ಶರ್ಮಾ ಯಾರು:** ಜಮ್ಮು ಕಾಶ್ಮೀರ ಪರ ಆಡುತ್ತಿರುವ ರೋಹಿತ್ ಶರ್ಮಾ ರಾಷ್ಟ್ರೀಯ ತಂಡದ ಪರ ಆಡುವ ಹಿಟ್‌ಮ್ಯಾನ್ ಅಲ್ಲ. ಇವರು ಕಾಶ್ಮೀರ ಪರ ಆಡುವ ದೇಶಿ ಕ್ರಿಕೆಟರ್ ಆಗಿದ್ದಾರೆ. ಇವರು ರಾಷ್ಟ್ರೀಯ ತಂಡಕ್ಕೆ ಯಾವುದೇ ಪಂದ್ಯಗಳನ್ನು ಆಡಿಲ್ಲ ಎಂಬುದು ಗಮನಾರ್ಹ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news